ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಗುರುವಾರ ೨೬ನೇ ಮೇ ೧೯೮೮, ಜ್ಯೇಷ್ಠ ೫, ೧೯೧೦ ಶಕ.

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ರವರು ಪೀಠವನ್ನು ಅಲಂಕರಿಸಿದರು.]

ವಿತ್ತೀಯ ಕಾರ್ಯಕಲಾಪಗಳು

೧೯೮೮-೮೯ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ (ಮಂತ್ರಿಗಳಿಂದ ಉತ್ತರ)

ಬೇಡಿಕೆಗಳ ಕ್ರ. ಸಂ. ೪೪, ೫೦, ೫೧. ೫೨ ಮತ್ತು ೫೩ ಕಂದಾಯ ಯೋಜನೆ ಮತ್ತು ನೀರಾವರಿ ಇಲಾಖೆಗಳು)

ಅಧ್ಯಕ್ಷರು.—ಈಗ ಮಾನ್ಯ ಕಂದಾಯ ಮಂತ್ರಿಗಳಿಂದ ಉತ್ತರ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನಾನು ಮೊದಲು ಯೋಜನಾ ಇಲಾಖೆಯ ಬಗ್ಗೆ ಉತ್ತರ ಕೊಡಬಯಸುತ್ತೇನೆ. ಇಲ್ಲಿ ಮಂತ್ರಿಗಳು ಹತ್ತು ನಿಮಿಷಗಳ ಕಾಲ ಹೊರಗಡೆ ಹೋದರೆ ತಕರಾರುಗಳು ಆಗುತ್ತವೆ. ಆದರೆ ಈಗ ಕಂದಾಯ ಇಲಾಖೆಯ ಬೇಡಿಕೆಗಳ ಮೇಲೆ ಮಾತನಾಡಿದಂಥ ನಾಯಕರುಗಳ ಪೈಕಿ ಮಾನ್ಯ ವೆಂಕಟರಾಮಯ್ಯನವರನ್ನು ಬಿಟ್ಟರೆ ಬೇರೆಯವರು ಇಲ್ಲಿ ಹಾಜರಿಲ್ಲ. ನೆನ್ನೆ ಮಾನ್ಯ ವೆಂಕಟರಾಮಯ್ಯನವರು......

SRI A. LAKSHMISAGAR.—May I intervene? They have always right to find fault with us. It is always our responsibility and our duty to answer questions raised on the floor of the House.

ಶ್ರೀ ಆರ್. ವೆಂಕಟರಾಮಯ್ಯ.—ನಿನ್ನೆ ದಿವಸ ನಾನು ಅಬ್ಜಕ್ಷನ್ ತೆಗೆದುಕೊಂಡಿದ್ದು ಏಕೆಂದರೆ ನಾನು ಮಾತನಾಡುವಾಗ ತಾವು ಸಭೆಯಲ್ಲಿ ಇರಲಿಲ್ಲ. ಇರಿಗೇಷನ್ ಮತ್ತು ರೆವಿನ್ಯೂ ಇಲಾಖೆಗಳ ಮೇಲೆ ನಾವು ಮಾತನಾಡುವಾಗ ತಾವು ಇರಬೇಕಾಗುತ್ತದೆ ಇಲ್ಲಿ ತಮ್ಮ ಜವಾಬ್ದಾರಿ ಜಾಸ್ತಿ ಇದೆ. ತಾವೇ ಸಭೆಯಲ್ಲಿದ್ದರೆ ನಮ್ಮ ಫೀಲಿಂಗ್ಸನ್ನು ಅರ್ಥಮಾಡಿಕೊಳ್ಳುತ್ತೀರಿ. ತಮ್ಮ ಪರವಾಗಿ ಬೇರೆಯವರು ಹಾಜರಿದ್ದು ತಮಗೆ ನೋಟ್ಸ್ ಬರೆದುಕೊಟ್ಟರೆ ಅದರಿಂದ ತಮಗೆ ಹೆಚ್ಚಿನ ಪ್ರಯೋಜನವಾಗುವುದಿಲ್ಲ. ನೀವೇ ಇಲ್ಲಿ ಹಾಜರಿದ್ದರೆ ನಮ್ಮ ಫೀಲಿಂಗ್ಸನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳುತ್ತೀರಿ, ಅದಕ್ಕಾಗಿ ನಾನು ಅಬ್ಜಕ್ಷನ್ ಮಾಡಿದ್ದು.

ಅಧ್ಯಕ್ಷರು.—ಮಾನ್ಯ ಪಂಪಾಪತಿ ಅವರೇ. ತಮ್ಮ ನಾಯಕರಾದ ಶ್ರೀ ಎಂ. ಎಸ್. ಕೃಷ್ಣನ್ ಅವರು ಪರದೇಶಕ್ಕೆ ಹೋಗಿದ್ದಾರೆ. ಆದ್ದರಿಂದ ಅವರು ವಾಪಸ್ ಬರುವವರೆಗೆ ತಾವು ಅವರ ಜಾಗದಲ್ಲಿ ಬಂದು ಕುಳಿತುಕೊಳ್ಳಿ.

ಶ್ರೀ ಪಂಪಾಪತಿ.— ಆಗಬಹುದು

(ಪಂಪಾಪತಿ ಅವರು ಶ್ರೀ ಎಂ. ಎಸ್. ಕೃಷ್ಣನ್ ಅವರ ಜಾಗಕ್ಕೆ ಬಂದು ಕುಳಿತುಕೊಂಡರು)

ಶ್ರೀ ಎಸ್. ಆರ್. ಬೊಮ್ಮಾಯಿ.—ಇಲ್ಲಿ ಮಂತ್ರಿಗಳ ಜವಾಬ್ದಾರಿ ಸಹ ಇರುತ್ತದೆ. ಚರ್ಚೆ ನಡೆಯುವಾಗ ಸಂಬಂಧಪಟ್ಟ ಮಂತ್ರಿಗಳು ಸಭೆಯಲ್ಲಿರಬೇಕೆಂಬುದನ್ನು ನಾನು ಒಪ್ಪುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಈ ಕಡೆಯುವರೂ ಅಷ್ಟೆ, ಇನ್ನೂ ಇರೆಸ್‌ಪಾನ್ಸಿಬಲ್. ಈಗಲೇ ಅಲ್ಲ, ಯಾವಾಗಲೂ ಅಷ್ಟೆ, ಈ ಮಾತನ್ನು ಬೇಕಾದರೆ ನಾನು ಅವರುಗಳು ಸಭೆಯಲ್ಲಿದ್ದಾಗಲೂ ಸಹ ಹೇಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಸಭೆಯಲ್ಲಿ ನಾವಿದ್ದೇವೆ. ಏನಾದರು ಬೇಕಾದರೆ ನಮ್ಮನ್ನು ಕೇಳಿ. ನಾವು ಹೇಳುತ್ತೇವೆ.

ಅಧ್ಯಕ್ಷರು.—ಶ್ರೀಮತಿ ಸುಮಾವಸಂತ ಅವರು ಅವರ ನಾಯಕರ ಪರವಾಗಿ ಈಗ ಇನ್-ಚಾರ್ಜ್‌ನಲ್ಲಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಲ್ಲಿ ನಮ್ಮ ಕರ್ತವ್ಯವನ್ನು ನಾವು ಮಾಡಬೇಕು. ಅದನ್ನು ಮಾಡುತ್ತಿದ್ದೇವೆ. ಇಲ್ಲಿ ನಾವು ಮೊದಲಿನಿಂದಲೂ ಒಂದು ಅಭಿಪ್ರಾಯವನ್ನು ಸ್ಪಷ್ಟವಾಗಿ ವ್ಯಕ್ತ ಮಾಡುತ್ತಿದ್ದೇವೆ ಏನೆಂದರೆ, ನಮ್ಮ ರಾಜ್ಯದ ಮತ್ತು ನಮ್ಮ ರಾಷ್ಟ್ರದ ಸಮಗ್ರ ಅಭಿವೃದ್ಧಿ ಆಗಬೇಕಾದರೆ ನಾವು ಸರಿಯಾದ ದಿಕ್ಕಿನಲ್ಲಿ ಹೋಗಬೇಕಾಗುತ್ತದೆ. ನಾವು ಬಯಸಿದಂಥ ಗುರಿಗಳನ್ನು ಸಾಧನೆ ಮಾಡಬೇಕಾದರೆ ನಮ್ಮ ಯೋಜನೆಗಳು ತಾತ್ವಿಕವಾಗಿರಬೇಕು ಮತ್ತು ಅವು ಕ್ರಮಬದ್ಧವಾಗಿರಬೇಕು ಜೊತೆಗೆ ಅವು ಸಕಾಲದಲ್ಲಿ ಕಾರ್ಯಗತವಾಗಬೇಕು. ನಾನು ಯಾರನ್ನೂ ಟೀಕೆ ಮಾಡುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಾ ಇಲ್ಲ. ನಮ್ಮ ರಾಷ್ಟ್ರದ ಯೋಜನೆಯ ಒಂದು ಚೌಕಟ್ಟಿನಲ್ಲಿ ನಮ್ಮ ರಾಜ್ಯದ ಯೋಜನೆಯನ್ನು ರೂಪಿಸಬೇಕಾಗುತ್ತದೆ. ರಾಷ್ಟ್ರದ ಯೋಜನೆಯನ್ನು ನಾವು ನೋಡಿದಾಗ ನಮ್ಮ ರಾಷ್ಟ್ರಕ್ಕೆ ಇರತಕ್ಕಂಥ ಪ್ರಾಮುಖ್ಯವಾದಂಥ ಅವಶ್ಯಕತೆಗಳೆಂದರೆ ಸರ್ವರಿಗೂ ಹೊಟ್ಟೆ ತುಂಬ ಅನ್ನ ದೊರಕಬೇಕು. ಹೊಟ್ಟೆಗೆ ಹಿಟ್ಟು ದೊರೆಯಬೇಕು. ಮೈಗೆ ಬಟ್ಟೆ ದೊರೆಯಬೇಕು ಕೈಗೆ ಕೆಲಸ ದೊರೆಯಬೇಕು. ಅದರಲ್ಲೂ ನಮ್ಮದು ಕೃಷಿ ಪ್ರಧಾನವಾದಂಥ ರಾಷ್ಟ್ರ, ರಾಜ್ಯ ಇವತ್ತು ಗ್ರೇಟೆಸ್ಟ್ ಎಂಪ್ಲಾಯರ್ ಅಂದರೆ ಕೃಷಿರಂಗ. ಇಲ್ಲಿ ಸರ್ವೇಸಾಧಾರಣವಾಗಿ ನಮ್ಮ ರಾಷ್ಟ್ರದ ಮೂರನೇ ಒಂದು ಅಂಶದ ಜನಕ್ಕೆ ಈ ಕೃಷಿರಂಗ ಉದ್ಯೋಗ ಒದಗಿಸಿಕೊಡುತ್ತದೆ. ಈ ಕೃಷಿರಂಗಕ್ಕೆ ಕೊಡಬೇಕಾದಂಥ ಆದ್ಯತೆಯನ್ನು ನಮ್ಮ ರಾಷ್ಟ್ರದ ಯೋಜನೆಯಲ್ಲಿ ಕೊಟ್ಟಿಲ್ಲ. ಆ ಒಂದು ತಪ್ಪಿನಿಂದ ಇಂದಿನ ಆರ್ಥಿಕ ವಿಪರ್ಯಾಸವನ್ನು ನಾವು ನೋಡುತ್ತಾ ಇದ್ದೇವೆ. ಮಾನ್ಯ ಬಸವಲಿಂಗಪ್ಪನವರು ಇಲ್ಲಿ ಇಲ್ಲ ಅವರು ಹೇಳಿದರು. ಕಳೆದ ವಾರ ಪ್ರಧಾನಿಯವರು ಪ್ಲಾನಿಂಗ್ ಕಮಿಷನ್‌ಗೆ ಒಂದು ಸೂಚನೆ ನಿರ್ದೇಶನ ಕೊಟ್ಟಿದ್ದಾರೆ, ಅದರಲ್ಲಿ ಈ ಮಾತುಗಳನ್ನು ಹೇಳಿದ್ದಾರೆ. ಅದು ಎಂಪ್ಲಾಯ್‌ಮೆಂಟ್ ಪೊಟೆನ್‌ಷಿಯಲ್ ಹೆಚ್ಚಾಗತಕ್ಕ ವಿಚಾರ. ಕೃಷಿರಂಗಕ್ಕೆ ಆದ್ಯತೆ ಕೊಡತಕ್ಕ ವಿಚಾರ. ಈ ವಿಚಾರಗಳು ಏನಿವೆ ಇವನ್ನು ಯೋಜನೆಯಲ್ಲಿ ಅಳವಡಿಸಿಕೊಳ್ಳಬೇಕಾಗುತ್ತದೆ. ಈ ಹಿಂದೆ. ಇದು ಆಗಿಲ್ಲ. ನಾನು ನಿನ್ನೆ ಪ್ರಾಸ್ತಾವಿಕವಾಗಿ ಹೇಳಿದೆ. ಪ್ರಥಮಬಾರಿಗೆ ಎನ್.ಡಿ.ಸಿ, ಸಭೆಯಲ್ಲಿ ಪ್ರಧಾನಿಯವರು ಬಹಳ ಸ್ಪಷ್ಟವಾದ ಮಾತುಗಳನ್ನು ಹೇಳಿದರು. ಕೃಷಿಗೆ ಪ್ರಥಮ ಪ್ರಾಶಸ್ತ್ಯ ಕೊಡಬೇಕು, ಇದಕ್ಕೆ ನ್ಯಾಷನಲ್ ಪ್ರಯಾರಿಟಿ ನಂ. ೧ ಕೊಡಬೇಕು. ಅದನ್ನು ಕಾರ್ಯಗತಗೊಳಿಸಬೇಕು ಎಂದು ಅವರು ಮುಂದೆ ಹೋಗಿ ಹೇಳಿದರು. ಇದನ್ನು ಕಾರ್ಯಗತಗೊಳಿಸಬೇಕಾದರೆ ದೇರ್ ಶುಡ್ ಬಿ ಎ ಪೊಲಿಟಿಕಲ್ ವಿಲ್ ಇನ್ ದಿ ಗವರ್ನಮೆಂಟ್ ಎಂದು. ಆ ಒಂದು ರಾಜಕೀಯ ದೃಢ ನಿರ್ಧಾರ ಬೇಕಾಗುತ್ತದೆ. ಈ ಮಾತುಗಳನ್ನು ನಾನು ಸ್ವಾಗತ ಮಾಡುತ್ತೇನೆ. ೪ ವರ್ಷಗಳ ನಂತರವಾದರೂ ಯೋಜನೆಯ ಸರಿಯಾದ ದಿಕ್ಕಿಗೆ ತಿರುವನ್ನು ಕೊಡತಕ್ಕಂಥ ಮಾತುಗಳು ಕೇಳಿ ಬಂದಿವೆ. ಈ ಮಾತುಗಳು ನಮ್ಮ ೮ನೇ ಪಂಚವಾರ್ಷಿಕ ಯೋಜನೆಯಲ್ಲಿ ರೂಪುಗೊಂಡಿರುತ್ತವೆ ಎನ್ನುವ ಆಸೆಯನ್ನು ವ್ಯಕ್ತ ಮಾಡುತ್ತಾ ಇದ್ದೇನೆ. ಅವರು ಇನ್ನೊಂದು ಮಾತನ್ನು ಹೇಳಿದ್ದಾರೆ. ಅದಕ್ಕೆ ಪತ್ರಿಕೆಯಲ್ಲಿ ಸರಿಯಾದ ಹೆಚ್ಚಿನ ಪ್ರಚಾರ ಸಿಕ್ಕಿದೆ. ಅವರು ಅದನ್ನು ಮೊದಲಬಾರಿಗೆ ಹೇಳಿದ್ದಾರೆ ಅದೇನೆಂದರೆ ಡಿಸ್ಟ್ರಿಕ್ಟ್ ಲೆವೆಲ್ ಪ್ಲಾನಿಂಗ್ ಅನ್ನು ಪ್ರಾರಂಭ ಮಾಡುತ್ತೇವೆ ಎಂದು. ಅದು ಜಿಲ್ಲಾ ಮಟ್ಟದ ಯೋಜನೆಗಳನ್ನು ಪ್ರಾರಂಭ ಮಾಡತಕ್ಕಂಥಾದ್ದು. ದಿಲ್ಲಿಯ ದಂತಗೋಪುರದಲ್ಲಿ ಕುಳಿತುಕೊಂಡು ಯೋಜನೆಗಳನ್ನು ಮಾಡಿದರೆ ಅವುಗಳು ಒಂದು ರೀತಿಯಿಂದ ಅವಾಸ್ತವಿಕ ಮತ್ತು ಕಾರ್ಯಗತ ಮಾಡಲಿಕ್ಕೆ ಸಾಧ್ಯವಿಲ್ಲದಂಥ ಯೋಜನೆಗಳು ಜಾರಿಗೆ ಬರುತ್ತವೆ. ಮತ್ತು ಜನ ಸಾಮಾನ್ಯರಿಗೆ ಹಾಗೂ ಈ ಯೋಜನೆಗಳಿಗೆ

ಏನೂ ಸಂಬಂಧವಿಲ್ಲದಂತಾಗಿದೆ ನಾವು ಕಳೆದ ೭ ಯೋಜನೆಗಳನ್ನು ನೋಡಿದಾಗಲೂ ಕೂಡ ಇದೇ ರೀತಿ ಆಗಿದೆ. ಡೀಸೆಂಟ್ರಲೈಸೇಷನ್ ಆಫ್ ಪ್ಲಾನಿಂಗ್, ಈ ತತ್ವವನ್ನು ಪ್ರಧಾನ ಮಂತ್ರಿಗಳು ಒಪ್ಪಿಕೊಂಡಿದ್ದಾರೆ ಅವರು ಒಪ್ಪಿಕೊಳ್ಳುವುದಕ್ಕೆ ಮೊದಲೇ ಕರ್ನಾಟಕದಲ್ಲಿ ಇಡೀ ರಾಷ್ಟ್ರಕ್ಕೆ ಮಾದರಿಯಾಗಿ ಪ್ರಾರಂಭ ಮಾಡಿದ್ದೇವೆ. ಅದು ಪೊಲಿಟಿಕಲ್ ಡೀಸೆಂಟ್ರಲೈಸೇಷನ್, ಡಿಸೆಂಟ್ರಲೈಸೇಷನ್ ಇನ್ ಪ್ಲಾನಿಂಗ್, ಡೀಸೆಂಟ್ರಲೈಸೇಷನ್ ಆಫ್ ವೆಲ್ತ್. ಇದು ಬಹಳ ಮುಖ್ಯವಾದಂಥ ವಿಚಾರ. ಅದನ್ನು ಈಗಾಗಲೇ ನಾವು ಪ್ರಾರಂಭ ಮಾಡಿದ್ದೇವೆ. ಮಾನ್ಯ ಅಧ್ಯಕ್ಷರೆ, ನಾನು ಒಂದು ಮಾತನ್ನು ಹೇಳಿದರೆ ಅತಿಶಯೋಕ್ತಿಯಲ್ಲ, ಇಡೀ ರಾಷ್ಟ್ರದಲ್ಲಿಯೇ ಕರ್ನಾಟಕ ಯೋಜನಾ ಇಲಾಖೆ ಪ್ರಗತಿಪರವಾದಂಥಾದ್ದು ದಕ್ಷವಾದಂಥಾದ್ದು. ಇಟೀಸ್ ಮಾಡೆಲ್, ಆದರ್ಶವಾದಂಥಾದ್ದು ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತಾ ಇಲ್ಲ, ಪ್ಲಾನಿಂಗ್ ಕಮಿಷನ್ನಿನ ಸದಸ್ಯರೇ ಹೇಳಿದ್ದಾರೆ. ಪ್ಲಾನಿಂಗ್ ಇಲಾಖೆಯು ಬೇರೆ ಬೇರೆ ರಾಜ್ಯಗಳ ಮುಖ್ಯಸ್ಥರುಗಳೂ ಕೂಡ ಇದೇ ಮಾತನ್ನು ಹೇಳಿದ್ದಾರೆ.

ಇಲ್ಲಿ ಅಂಕಿಸಂಖ್ಯೆಗಳನ್ನು ಕಲೆಹಾಕತಕ್ಕಂಥ ಯೋಜನೆಗಳನ್ನು ರೂಪಿಸತಕ್ಕಂಥ ಕೆಲಸದ ಜೊತೆಗೆ ಯುವಾಲ್ಯುವೇಷನ್ ಅಂಡ್ ಮಾನಿಟರಿಂಗ್ ಇವೆರಡೂ ಕೂಡ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಜೊತೆಗೆ ಅಧಿಕಾರವನ್ನು ಡಿಸೆಂಟ್ರಲೈಜೇಷನ್ ಮಾಡಿದ್ದೇವೆ. ಜಿಲ್ಲಾ ಪರಿಷತ್ತಿನ ಮುಖಾಂತರ ರಾಜಕೀಯ ಅಧಿಕಾರ ವಿಕೇಂದ್ರಿಕರಣ ಮಾಡುವುದರ ಜೊತೆಗೆ ಯೋಜನೆಯ ವಿಕೇಂದ್ರಿಕರಣವನ್ನು ಸಹ ಮಾಡಿದ್ದೇನೆ. ನಮ್ಮಲ್ಲಿ ಜಿಲ್ಲಾ ಮಟ್ಟದಲ್ಲಿ ಯೋಜನೆಯನ್ನು ಪ್ರಾರಂಭ ಮಾಡಿ ಹಲವಾರು ವರ್ಷಗಳಾಗಿದೆ. ಈಗ ಮಂಡಲ ಪಂಚಾಯತಿವರೆಗೆ ಅಧಿಕಾರ ವಿಕೇಂದ್ರೀಕರಣ ಮಾಡಿದ್ದೇವೆ. ಜಿಲ್ಲಾಪರಿಷತ್ತು ಬಂದಮೇಲೆ ಯೋಜನಾ ಇಲಾಖೆ ತನ್ನದೆ ಆದಂಥ ನೀತಿಯನ್ನು ರೂಪಿಸಿ ಆದೇಶವನ್ನು ಕೊಟ್ಟಿದೆ. ಈ ವರ್ಷ ಯೋಜನೆಯನ್ನು ಗ್ರಾಮ ಸಭೆಯಲ್ಲಿ ಚರ್ಚೆಮಾಡಿ ರೂಪಿಸಿ ಜಿಲ್ಲಾಪರಿಷತ್ತಿಗೆ ಕಳುಹಿಸಿಕೊಟ್ಟಿದ್ದಾರೆ. ಜಿಲ್ಲಾಪರಿಷತ್ತಿನವರು ನಮಗೆ ಕಳುಹಿಸಿ ಕೊಟ್ಟಿದ್ದಾರೆ, ನಾವು ಕೇಂದ್ರ ಯೋಜನಾ ಆಯೋಗದ ಮುಂದೆ ಇಟ್ಟಿದ್ದೇವೆ. ಈ ವಿಕೇಂದ್ರೀಕರಣವನ್ನು ಮೊದಲನೇ ವರ್ಷ ಮಾಡಿದ್ದೇವೆ, ಯೋಜನೆಯ ಬಗ್ಗೆ ಗ್ರಾಮದವರಿಗೆ ಅಕ್ಷರ ಜ್ಞಾನ ಇಲ್ಲ, ಅರ್ಥಶಾಸ್ತ್ರ ಅವರಿಗೆ ಗೊತ್ತಿಲ್ಲವೆಂದು ನಾವು ಹೇಳುತ್ತಿದ್ದೇವೆ. ಆದರೆ ಎಲ್ಲಿ ಬಾವಿ ಆಗಬೇಕು, ಎಲ್ಲಿ ಶಾಲೆ ಆಗಬೇಕು, ಎಲ್ಲಿ ಕೆರೆ ಆಗಬೇಕು, ಎನ್ನುವುದು ಮಂಡಲ ಪಂಚಾಯಿತಿಯ ಸದಸ್ಯರಿಗೆ ಚೆನ್ನಾಗಿ ಗೊತ್ತಿದ್ದು ಈ ಬಗ್ಗೆ ಅವರು ಅನುಭವಿಗಳು ಜ್ಞಾನಿಗಳು ಆಗಿದ್ದಾರೆ, ಅವರು ಕೊಟ್ಟಂಥ ಯೋಜನೆಗಳನ್ನು ಸೂಚನೆಗಳನ್ನು, ಪರಿಶೀಲನೆಗೆ ಮಾಡಿದಾಗ ಮೂರು ವಿಚಾರಗಳಲ್ಲಿ ಪ್ರಾಶಸ್ತ್ಯ ಕೊಟ್ಟಿದ್ದಾರೆ. ಪ್ರಾಥಮಿಕ ಶಿಕ್ಷಣ ಗ್ರಾಮೀಣ ರಸ್ತೆ ಕುಡಿಯುವ ನೀರಿನ ಪೂರೈಕೆ, ಜಿಲ್ಲಾ ಪರಿಷತ್ತುಗಳು ಬೇರೆ ಬೇರೆ ಬಾಬಿನಲ್ಲಿ ಖರ್ಚು ಮಾಡಿದ ಹಣದಲ್ಲಿ ಇದಕ್ಕೆ ಆದ್ಯತೆ ಕೊಟ್ಟಿದ್ದಾರೆ. ಇದು ಯೋಜನೆಯ ವಿಕೇಂದ್ರೀಕರಣದ ಪರಿಣಾಮ. ಗ್ರಾಮಗಳಿಗೆ ಏನು ಅವಶ್ಯಕತೆ ಇದೆ. ಜನರಿಗೆ ಏನು ಅವಶ್ಯಕತೆ ಇದೆ. ಇದರ ಬಗ್ಗೆ ಬಹಳ ಎಚ್ಚರಿಕೆಯಿಂದ ಪರಿಶೀಲನೆ ಮಾಡಿದ್ದಾರೆ. ಮೊದಲನೆಯ ಸಲ ಯೋಜನೆಯನ್ನು ಗ್ರಾಮ ಸಭೆಯಲ್ಲಿ ಮಾಡುವಾಗ, ರಸ್ತೆ, ನೀರು ವಿದ್ಯುದ್ದೀಪ ಇವುಗಳ ಬಗ್ಗೆ ಚಿಂತನೆ ಮಾಡಿದ್ದಾರೆ. ಮಂಡಲ್ ಪಂಚಾಯಿತಿಯ ಬಜೆಟ್ ಅನ್ನು ೪-೫ ಪಟ್ಟು ಜಾಸ್ತಿ ಮಾಡಿ ಯೋಜನೆಗಳನ್ನು ಸಿದ್ಧಮಾಡಿ ಕಳುಹಿಸಿದ್ದಾರೆ. ಅವಕ್ಕೆ ತರಬೇತಿ ಕೊಟ್ಟಿದ್ದೇವೆ. ತರಬೇತಿಯಾದ ಮೇಲೆ ಮಂಡಲ ಪಂಚಾಯತಿಯ ಆದಾಯ ಏನು ಇದೆ ಅದರಮೇಲೆ ವ್ಯಾಸ್ತವಿಕವಾಗಿ ಯೋಜನೆಗಳನ್ನು ಮಾಡಿದ್ದಾರೆ. ಈ ಡಿಸೆಂಟ್ರಲೈಜೇಷನ್ ಬಗ್ಗೆ ನಾನು ಹೆಚ್ಚಿಗೆ ಹೇಳುವುದಿಲ್ಲ. ಜಿಲ್ಲಾ ಮಟ್ಟದವರೆಗೆ ವಿಕೇಂದ್ರೀಕರಣ ಮಾಡಿರುವುದನ್ನು ಮಾನ್ಯ ಪ್ರಧಾನ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಅದನ್ನು ನಾವು ಈ ಮೊದಲೇ ಕಾರ್ಯಗತಗೊಳಿಸಿದ್ದೇವೆ. ಈ ವಿಚಾರದಲ್ಲಿ ಹೆಚ್ಚು ಚುರುಕಾಗಿ ವ್ಯವಸ್ಥಿತವಾಗಿ ಕೆಲಸವಾಗಬೇಕಾದರೆ ಮಂಡಲ ಮತ್ತು ಜಿಲ್ಲಾ ಪರಿಷತ್ತಿನ ಸದಸ್ಯರುಗಳಿಗೆ ವಿಶೇಷವಾದಂಥ ತರಬೇತಿ ಕೊಡುವ ಬಗ್ಗೆ ವಿಚಾರ ಮಾಡಿದ್ದೇವೆ. ಜೊತೆಗೆ ಸ್ಥಳೀಯ ಸಂಸ್ಥೆಗಳ ಸಹಕಾರ ಮತ್ತು ಸಂಪರ್ಕವನ್ನು ಬೆಳೆಸತಕ್ಕಂಥ ಆಲೋಚನೆ ಮಾಡಿದ್ದೇವೆ. ಕಾನೂನು ನಿಯಮಾವಳಿ ಬಗ್ಗೆ ಮಾಹಿತಿಯನ್ನು ಕೊಡತಕ್ಕ ವಿಚಾರ, ಮಹಿಳೆಯರು ಸಕ್ರೀಯವಾಗಿ ಭಾಗವಹಿಸುವುದಕ್ಕೆ ಮತ್ತು ತರಬೇತಿಯನ್ನು ಕೊಡುವುದಕ್ಕೆ ಈ ಬಗ್ಗೆ ಒಂದು ವಿಶೇಷವಾದ ಕೈಪಿಡಿಯನ್ನು ಹೊರಡಿಸುವುದಕ್ಕೆ ಸರ್ಕಾರ ಆಲೋಚನೆ ಮಾಡಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಪ್ಲಾನ್‌ಗೆ ಮೊದಲ ಪ್ರಾಶಸ್ತ್ಯ ಕೊಡಬೇಕು. ಆದರೆ ಎಲ್ಲ ವಿಚಾರಗಳಿಗೂ ಹಣ ಕಾಸಿನ ಇಲಾಖೆಗೆ ಹೋಗಬೇಕಾದ ಪರಿಸ್ಥಿತಿ ಇದೆ. ಮಾನ್ಯ ಮಂತ್ರಿಯವರು ಗ್ರಾಮಮಟ್ಟದಲ್ಲಿ ಶಾಲೆಯ ಬಗ್ಗೆ, ರಸ್ತೆಗಳ ಬಗ್ಗೆ, ಜನರಿಗೆ ತಿಳುವಳಿಕೆ ಬಂದಿದ್ದು, ಇದು ಗ್ರಾಮ ಸಭೆಯಲ್ಲಿಯೇ ತೀರ್ಮಾನ ಆಗುತ್ತದೆಂದು ಹೇಳಿದ್ದಾರೆ. ಆದರೆ ೬ ತಿಂಗಳುಗಳಿಂದ ಗ್ರಾಮ ಸಭೆಗಳೇ ಸೇರಿಲ್ಲ. ಹಳ್ಳಿಗಳಲ್ಲಿ ಗ್ರಾಮ ಸಭೆಗಳನ್ನು ಸೇರಿಸಿದರೆ ಜನರು ಹೊಡೆಯುತ್ತಾರೆಂದು ಮಂಡಲ ಪಂಚಾಯತಿಗಳಲ್ಲಿ ತೀರ್ಮಾನ ಮಾಡಿದ್ದಾರೆ. ಪ್ಲಾನಿಂಗ್ ಬಗ್ಗೆ ಮಾತನಾಡುವಾಗ, ಜಾಸ್ತಿ ಹಣ ಕೊಡಬೇಕು. ಇಲ್ಲದಿದ್ದರೆ ಪ್ರಯೋಜನ ಆಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಯಾವ ಮಂಡಲ ಪಂಚಾಯತಿಯಲ್ಲಿ ಆ ರೀತಿ ನಿರ್ಣಯ ಮಾಡಿದ್ದಾರೋ, ಅದನ್ನು ನಮಗೆ ಕಳುಹಿಸಿಕೊಡಲಿ. ಆದರೆ ಗ್ರಾಮ ಸಭೆಗಳು ಯಶಸ್ವಿಯಾಗಿ ನಡೆದಿವೆ. ನಾನು ಸುಮಾರು ಮಂಡಲ ಪಂಚಾಯತಿಗಳಿಗೆ ಭೇಟಿ ಕೊಟ್ಟಿದ್ದೇನೆ.

ಶ್ರೀ ಎಸ್. ಪುಟ್ಟಸ್ವಾಮಿ.—ಯಾವ ವರ್ಷದಲ್ಲಿ ನಡೆದಿವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಳೆದ ವರ್ಷಗಳಲ್ಲಿ ಇದು ಪ್ರಾರಂಭವಾಗಿದೆ. ಬೇಕಾದರೆ ಮಂಡಲ ಪಂಚಾಯತಿಗಳ ಹೆಸರುಗಳನ್ನು ಕೊಡಿ. ಅಲ್ಲೆಲ್ಲಾ ಎಷ್ಟು ಹಣ ಕೊಟ್ಟಿದ್ದೇವೆ, ಎಷ್ಟು ಹಣ ಖರ್ಚಾಗಿದೆ ಎನ್ನುವ ವಿಚಾರವನ್ನು ಕೊಡುತ್ತೇನೆ. ಪ್ರಾರಂಭದಲ್ಲಿ ತಾಂತ್ರಿಕವಾದ ತೊಂದರೆಗಳು ಇತ್ತು, ಅದನ್ನು ಒಪ್ಪಿಕೊಳ್ಳುತ್ತೇನೆ. ಈಗ ಅಂತಹ ಪರಿಸ್ಥಿತಿ ಇಲ್ಲ. ಸರ್ಕಾರ ತನ್ನ ಪಾಲಿನ ಹಣವನ್ನು ಬಿಡುಗಡೆ ಮಾಡಿದೆ. ಈಗ ಅವು ಹಣಕಾಸಿನ ಇಲಾಖೆಯ ಮೇಲೆ, ಅವಲಂಬನೆ ಮಾಡಬೇಕಾಗಿಲ್ಲ. ಈಗ ಯೋಜನೆಗೆ ಹಣವನ್ನು ಒದಗಿಸಬೇಕಾಗಿದೆ. ಹಣಕಾಸಿನ ಇಲಾಖೆಯಲ್ಲಿ ಯಾವ ತೊಂದರೆಯೂ ಇಲ್ಲ. ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯತಿಯ ಸದಸ್ಯರುಗಳಿಗೆ ಹೆಚ್ಚಿನ ಅಧಿಕಾರ, ಹೆಚ್ಚಿನ ಹಣವನ್ನು ಕೊಡಬೇಕೆಂಬ ನೀತಿಯನ್ನು ರಾಜ್ಯ ಸರ್ಕಾರ ಒಪ್ಪಿಕೊಂಡಿದೆ. ಅದೇ ರೀತಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳ ನಡುವೆ ಅಧಿಕಾರ ವಿಕೇಂದ್ರೀಕರಣ ಆಗಬೇಕು, ಸಂಪತ್ತಿನಲ್ಲಿ ಯೋಜನೆಯಲ್ಲಿ ಮತ್ತು ಅಧಿಕಾರದಲ್ಲಿ ಇದನ್ನು ಮಾಡಬೇಕು. ಇದರ ಬಗ್ಗೆ ಸರ್ಕಾರಿಯಾ ಆಯೋಗದವರು ಸ್ಪಷ್ಟವಾಗಿ ಹೇಳಿದ್ದಾರೆ. ರಾಜ್ಯದ ಅಧಿಕಾರಗಳು ಹೆಚ್ಚಬೇಕು. ಕೇಂದ್ರ ಸರ್ಕಾರದ ಅಧಿಕಾರ ಎಷ್ಟಿರಬೇಕು ಎನ್ನುವ ಬಗ್ಗೆ ಅವರು ಸ್ಪಷ್ಟ ಸೂಚನೆ ಕೊಟ್ಟಿದ್ದಾರೆ. ಆ ವರದಿಯನ್ನು ಒಪ್ಪಿಕೊಂಡಿದ್ದಾರೆ. ರಾಜ್ಯ ಸರ್ಕಾರ ಜಿಲ್ಲಾ ಮಟ್ಟದಲ್ಲಿ ಅಧಿಕಾರವನ್ನು ಕೊಡಬೇಕಾಗುತ್ತದೆ. ಅದು ವಿಧಾನ ಸೌಧದಲ್ಲಿಯೇ ಉಳಿಯಬಾರದು. ದೆಹಲಿಯಿಂದ ರಾಜ್ಯಗಳಿಗೆ, ರಾಜ್ಯಗಳಿಂದ ಮಂಡಲಗಳಿಗೆ ಅಧಿಕಾರ ಹೋಗಬೇಕು. ಇದು ನಮ್ಮ ನೀತಿ. ಆದರೆ ಕೇಂದ್ರ ಸರ್ಕಾರದ ನೀತಿ ಇದುವರೆಗೂ ಸೆಂಟ್ರಲೈಜೇಷನ್ ಆಗಿತ್ತು. ಇದನ್ನು ಅಂಕಿ ಸಂಖ್ಯೆಗಳ ಆಧಾರದ ಮೇಲೆ ಹೇಳುವುದಾದರೆ, ನಾಲ್ಕನೇಯ ಯೋಜನೆಯಲ್ಲಿ ನ್ಯಾಷನಲ್ ಪ್ಲಾನ್‌ನಲ್ಲಿ ರಾಜ್ಯದ ಷೇರು ೪೮.೬ ಇತ್ತು. ೧೯೭೪ ರಲ್ಲಿ ೫ನೇ ಯೋಜನೆಯಲ್ಲಿ ೪೬.೫೭ ಬಂತು. ೬ನೇ ಯೋಜನೆಯಲ್ಲಿ ೪೫.೩೭ ಬಂತು. ೭ನೇ ಯೋಜನೆಯಲ್ಲಿ ೪೦.೮ ಬಂತು. ಹೀಗೆ ರಾಜ್ಯ ಸರ್ಕಾರದ ಷೇರು ಕಡಿಮೆಯಾಗುತ್ತಾ, ಕೇಂದ್ರದ್ದು ಹೆಚ್ಚಾಗಿದೆ. ರಾಜ್ಯ ಸರ್ಕಾರಗಳಿಗೆ ಕೊಡತಕ್ಕ ಅಸಿಸ್ಟೆನ್ಸ್ ನೀತಿಯಲ್ಲಿ ನಾಲ್ಕನೇ ಯೋಜನೆಯಲ್ಲಿ ೭೩.೩ ಪರ್ಸೆಂಟ್ ಇತ್ತು, ೫ನೇ ಯೋಜನೆಯಲ್ಲಿ ೭೬.೧ ಪರ್ಸೆಂಟ್ ಆಯಿತು ೬ನೇ ಯೋಜನೆಯಲ್ಲಿ ೬೯.೮ ಪರ್ಸೆಂಟ್ ಆಯಿತು. ೭ನೇ ಯೋಜನೆಯಲ್ಲಿ ೬೫.೪ ಪರ್ಸೆಂಟ್‌ಗೆ ಇಳಿಯಿತು. ಈ ಮೂರು ಯೋಜನೆಗಳಲ್ಲಿ ರಾಜ್ಯಕ್ಕೆ ಬರತಕ್ಕ ಅಸಿಸ್ಟೆನ್ಸ್‌ನಲ್ಲಿ ೧೦ ಪರ್ಸೆಂಟ್ ಕಡಿಮೆಯಾಯಿತು. ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಮ್‌ನಲ್ಲಿ ೪ನೇ ಯೋಜನೆಯಲ್ಲಿ ೪.೩೮, ೫ನೇ ಯೋಜನೆಯಲ್ಲಿ ೪.೬೪, ೬ನೇ ಯೋಜನೆಯಲ್ಲಿ ೭.೫೭ ೭ನೇ ಯೋಜನೆಯಲ್ಲಿ ೬.೫೭ ರಷ್ಟು ಹೆಚ್ಚಾಗಿದೆ. ಕೇಂದ್ರ ಸರ್ಕಾರದ ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಂಗಳು ಕಡಿಮೆ ಇರಬೇಕು. ರಾಜ್ಯ ಸರ್ಕಾರದ ಮತಿಯಿಂದ ಆಗತಕ್ಕ ಸ್ಕೀಂಗಳನ್ನು ಹೆಚ್ಚಿಗೆ ಮಾಡುವುದರ ಬದಲು ಕೇಂದ್ರದವರೇ ಮಾಡುತ್ತಿದ್ದಾರೆ.

ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ಒಂದು ಮಾತನ್ನು ನಾನು ಹೇಳಿದರೆ ಅದು ಮಾನ್ಯ ಸದಸ್ಯರಿಗೆ ಸ್ಪಷ್ಟವಾಗಿ ಗೊತ್ತಾಗುತ್ತದೆಂದು ನಾನು ಅಂದುಕೊಂಡಿದ್ದೇನೆ. ಸ್ಟೇಟ್ ಸೆಕ್ಟರ್‌ನಲ್ಲಿ ಎಂದರೆ ಅದು ಅಗ್ರಿಕಲ್ಚರ್ ಇರಬಹುದು. ಸೆರಿಕಲ್ಚರ್ ಇರಬಹುದು, ಅಥವಾ ಅದು ಇನ್ನು ಬೇರೆ

ಯಾವುದಾದರೂ ಇರಬಹುದು, ಅದು ಈ ರಾಜ್ಯ ಸರ್ಕಾರದ ಅಧಿಕಾರ ವ್ಯಾಪ್ತಿಗೆ ಒಳಪಡತಕ್ಕವು. ಆದರೆ ಇವತ್ತು ಏನಾಗಿದೆ ಎಂದರೆ, ಹೆಚ್ಚಿನ ಯೋಜನೆಗಳನ್ನು ಕೇಂದ್ರ ಸರ್ಕಾರದವರು ತಮ್ಮ ಕೈಗೆ ತೆಗೆದುಕೊಳ್ಳುತ್ತಿರುವುದಲ್ಲದೆ ರಾಜ್ಯಗಳಲ್ಲೂ ಕೂಡ ಕೇಂದ್ರ ಸರ್ಕಾರದ್ದೇ ಆಫೀಸುಗಳು ಇದ್ದು, ಅವರದ್ದೇ ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಸೆರಿಕಲ್ಚರ್ ಬಗ್ಗೆ ತೆಗೆದುಕೊಂಡರೆ, ಬೆಂಗಳೂರಿನಲ್ಲಿ ಅವರದ್ದೇ (ಕೇಂದ್ರ ಸರ್ಕಾರದ್ದು) ಆಫೀಸು, ಅವರದ್ದೇ ಸಿಬ್ಬಂದಿ ಇದೆ. ರಾಜ್ಯ ಸರ್ಕಾರ ಕೈಗೊಳ್ಳಬೇಕಾದ ಕಾರ್ಯಕ್ರಮದಲ್ಲಿ ಕೇಂದ್ರದವರು ಕೈ ಹಾಕಿದ್ದಾರೆ ಇದು ಸರಿಯಲ್ಲ. ಈ ನೀತಿ ಹೋಗಬೇಕು. i.e., Curtoilment of the State Sector. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಮೊನ್ನೆ ಮಾನ್ಯ ಪ್ರಧಾನ ಮಂತ್ರಿಯವರೇ ಈ ಮಾತನ್ನು ಹೇಳಿದ್ದಾರೆ. ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ವಿಚಾರಕ್ಕೆ ಹೆಚ್ಚಿನ ಗಮನ ಕೊಟ್ಟು ಸೂಕ್ತ ತಿದ್ದುಪಡಿಯನ್ನು ಮಾಡಿಕೊಳ್ಳಬೇಕೆಂಬ ಇಚ್ಛೆಯಿಂದ ನಾನು ಹೇಳುತ್ತಿದ್ದೇನೆ. ನಿನ್ನೆಯ ದಿವಸ ಮಾನ್ಯ ಸದಸ್ಯರು ನಮ್ಮ ಯೋಜನೆಗಳ ಬಗ್ಗೆ ಟೀಕೆ ಮಾಡಿದ್ದಾರೆ. ಅದು ಏನೆಂದರೆ, ನೀವು ಬಜೆಟ್‌ನಲ್ಲಿ ಹಣವನ್ನು ತೋರಿಸುತ್ತೀರಿ. ಅದು ಕೇವಲ ಕನ್ನಡಿಯೊಳಗಿನ ಗಂಟು ಇದ್ದಹಾಗೆ. ಆದರೆ ಅದು ಖರ್ಚಾಗುವುದಿಲ್ಲ ಎಂದು ಹೇಳಿದ್ದಾರೆ. ಅದಕ್ಕಾಗಿ ನಾನು ಆ ಕಡೆಯ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ. ಅವರು ಇದರ ಬಗ್ಗೆ ಸರಿಯಾಗಿ ಒಳಹೊಕ್ಕು ನೋಡಿದರೆ ವಾಸ್ತವಾಂಶ ಏನು ಎಂಬುದು ಗೊತ್ತಾಗುತ್ತದೆ. ಇದು ಅವರಿಗೆ ಗೊತ್ತಾಗಲಿ ಎನ್ನತಕ್ಕ ಉದ್ದೇಶದಿಂದ ನಾನು ಕಳೆದ ೧೦ ವರ್ಷಗಳ ಅಂಕಿಅಂಶಗಳನ್ನು ಇಲ್ಲಿ ಕೊಡಬಯಸುತ್ತೇನೆ.

1978-79	Plan Outlay.........Rs. 323.56 Crores
	Plan expenditure......... Rs. 277.91 Crores.
	Shortfall... .....Rs. 45.65 Crores.
1979-80	Plan provision outlay .... Rs. 360.39 Crores.
	Plan expenditure .... Rs. 327.74 Crores
	Difference.........Rs. 32 63 Crores i e., (Shortfall).
1980-81	Plan Outlay...... Rs. 392.55 Crores
	Expenditure.........Rs. 389.43 Crores
	(—) Rs. 3.12 Crores.
1981-82	Plan Outlay.........Rs. 423 90 Crores
	Expenditure.........Rs. 456 50 Crores
	Surplus (+) ....Rs. 32.70 Crores
1982-83	Plan Outlay.........Rs. 475 Crores
	Expenditure.........Rs. 525 89 Crores
	(+) Surplus... .....Rs. 50.89 Crores.
	(i.e.- the year when the Janata Govt. came to power).
1984-85	Plan Outlay... .....Rs. 650.28 Crores
	Expenditure.........Rs. 706 80 Crores
	(+) Rs 56.52 Crores (Surplus expenditure)
1985-86	Plan Outlay ....Rs. 690.67 Crores
	Expenditure ....Rs. 6?3.32 Crores
	Surplus expenditure......Rs. 42.65 Crores.
1986-87	Plan Outlay.........Rs. 760.21 Crores
	Surplus...... ..Rs 30.90 Crores.
1987-88	Plan Outlay... ...Rs. 917 Crores.
	It was reduced to Rs. 269.45 Crores
	Shortfall.........Rs. 100.25 Crores.

ಕೊಟ್ಟಿರತಕ್ಕ ಹಣದಲ್ಲಿ ಕಡಿಮೆಯಾಗಿದೆ. ಅದು ಕಡಿಮೆಯಾಗಿಲ್ಲವೆಂದು ನಾನು ಹೇಳುವುದಿಲ್ಲ. ಆದರೆ ೪ ವರ್ಷಗಳಲ್ಲಿ ನಾವು ಔಟ್‌ಲೇ ಬಜೆಟ್‌ನಲ್ಲಿ ಏನು ಖರ್ಚು ಮಾಡಿದ್ದೇವೆ. ಅದು ಕಳೆದ ವರ್ಷ ಸ್ವಲ್ಪ ಕಡಿಮೆ ಇದೆ.

೧೧-೩೦ ಎ. ಎಂ.

ಕಳೆದ ೫ ವರ್ಷಗಳಿಂದ ರಾಜ್ಯ ಬರಗಾಲವನ್ನು ಎದುರಿಸಿದಂಥ ವಿಚಾರ. ಮಾನ್ಯ ಸದಸ್ಯರಿಗೆ ಗೊತ್ತಿದೆ. ಆರ್ಥಿಕ ತೊಂದರೆಯನ್ನು ಅನುಭವಿಸಿದಂಥ ವಿಚಾರ ತಮಗೆ ಗೊತ್ತಿದೆ, ಅದರ ಬಗ್ಗೆ ಪುನಃ ಒತ್ತಿ ಹೇಳಬೇಕಾಗಿಲ್ಲ. ಅಂದರೆ ಈ ವಿಚಾರದಲ್ಲಿ ನಾನು ಮುಚ್ಚುಮರೆ ಇಲ್ಲದೆ ಹೇಳುತ್ತಿದ್ದೇನೆ, ಕಡಿಮೆ ಆದಂಥ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಈ ಸಭೆಯಲ್ಲಿ ತಿಳಿಸಿದ್ದಾರೆ, ಅದಕ್ಕೆ ಕಾರಣಗಳನ್ನೂ ಕೂಡ ಕೊಟ್ಟಿದ್ದಾರೆ. ಮತ್ತೆ ಅನೇಕ ವಿವರಗಳನ್ನು ಕೊಟ್ಟು ಮನವರಿಕೆ ಮಾಡತಕ್ಕಂಥ ಒಂದು ಪ್ರಯತ್ನವನ್ನೂ ಕೂಡ ಮಾಡಿದ್ದಾರೆ. ನಮ್ಮ ರಾಜ್ಯದ ಯೋಜನೆಯ ಗಾತ್ರ ಕಡಿಮೆಯಾಗಿದೆ, ಅದನ್ನು ನಾವು ಒಪ್ಪಿಕೊಂಡಿದ್ದೇವೆ. ಆದರೆ ರಾಷ್ಟ್ರದ ಅನೇಕ ರಾಜ್ಯಗಳಲ್ಲೂ ಕೂಡ ಈ ಯೋಜನೆಯ ಗಾತ್ರ ಕಡಿಮೆಯಾಗಿದೆ. ಇದನ್ನು ಹೇಳುವಾಗ ಬೇರೆ ರಾಜ್ಯಗಳನ್ನು ತೆಗೆದುಕೊಂಡು ನಾವು ಏನು ಮಾಡೋಣ, ಇದನ್ನು ಏತಕ್ಕೆ ಹೇಳುತ್ತೀರೆಂದು ಹೇಳುವಾಗ, ಆರ್ಥಿಕ ಸಮೀಕ್ಷೆಯನ್ನು ಮಾಡುವಾಗ ಕರ್ನಾಟಕ ಸರ್ಕಾರ ಭಾರತದ ಇತರ ರಾಜ್ಯಗಳ ಆರ್ಥಿಕ ನೀತಿಯ ಪರಿಣಾಮವನ್ನು ತುಲನಾತ್ಮಕವಾಗಿ ನೋಡಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ಹೋದ ವರ್ಷ ಪ್ಲಾನ್ ಔಟ್ ಲೇಯಲ್ಲಿ ಕಡಿಮೆ ಮಾಡಿದ ವಿಚಾರದಲ್ಲಿ ಹೇಳಬೇಕಾದರೆ ಗುಜರಾತಿನಲ್ಲಿ ೨೯೬ ಕೋಟಿ, ಹರಿಯಾಣದಲ್ಲಿ ೧೫೪ ಕೋಟಿ, ಮಹರಾಷ್ಟ್ರದಲ್ಲಿ ೨೭೦ ಕೋಟಿ, ಪಂಜಾಬ್‌ನಲ್ಲಿ ೧೦೦ ಕೋಟಿ, ಉತ್ತರಪ್ರದೇಶದಲ್ಲಿ ೨೯೦ ಕೋಟಿ ಪ್ಲಾನ್ ಔಟ್ ಲೇನಲ್ಲಿ ಕಡಿಮೆಯಾಗಿದೆ. ಬೇರೆ ಬೇರೆ ರಾಜ್ಯಗಳಲ್ಲೂ ಕೂಡ ಆಗಿದೆ. ದೊಡ್ಡ ದೊಡ್ಡ ರಾಜ್ಯಗಳಾದ ಆಂಧ್ರ ಪ್ರದೇಶ, ಕೇರಳ, ಮಧ್ಯಪ್ರದೇಶದಲ್ಲೂ ಕೂಡ ಕಡಿಮೆ ಆಗಿದೆ. ಇದು ಒಂದು ರಾಷ್ಟ್ರ ಎದುರಿಸುತ್ತಿರತಕ್ಕಂಥ ಆರ್ಥಿಕ ಬಿಕ್ಕಟನ್ನು ಎತ್ತಿ ತೋರಿಸುತ್ತಿದೆ. ಈ ವಿಚಾರದಲ್ಲಿ ಹೆಚ್ಚು ಮಾತುಗಳನ್ನು ಹೇಳದೆ, ಖರ್ಚು ಕಡಿಮೆ ಮಾಡದಂಥ ಸೆಕ್ಟರ್‌ಗಳ ಬಗ್ಗೆ ಹೇಳುವುದಾದರೆ ಮಿನಿಮಮ್ ನೀಡ್ ಪ್ರೋಗ್ರಾಮ್, ಸೋಶಿಯಲ್ ನೀಡ್ ಪ್ರೋಗ್ರಾಮ್‌ಗಳಲ್ಲಿ ಕಡಿಮೆ ಮಾಡದ ಮತ್ತೊಂದು ವಿಚಾರ ಈ ವರ್ಷದಲ್ಲಿ ಇದೆ. ಈ ವರ್ಷದಲ್ಲಿ ಅದಕ್ಕೆ ಹೆಚ್ಚಿನ ಹಣವನ್ನು ಒದಗಿಸಿಕೊಟ್ಟಿದ್ದೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಸಚಿವರು ಏನನ್ನೋ ಹುಡುಕುತ್ತಿದ್ದಾರೆ. ಅವರು ಒಂದು ನಿಮಿಷ ಈಲ್ಡ್ ಆದರೆ ಒಂದು ಮಾತನ್ನು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಲ್ಲ.

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ, ನೀವು ಕುಳಿತುಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—೨೦೦ ಕೋಟಿ ರೂಪಾಯಿಗಳು ಯೋಜನೆಯಲ್ಲಿ ಕಡಿತವಾಗಿದೆ. ಆದರೆ ರೂರಲ್ ಡೆವಲಪ್‌ಮೆಂಟ್ ವಿಚಾರದಲ್ಲಿ ನಾವು ಕಡಿಮೆ ಮಾಡಿಲ್ಲ. ಹೆಚ್ಚು ಮಾಡಿದ್ದೇವೆ. ಇರಿಗೇಷನ್‌ಗೆ ೧೧೦.೬೪ ಪರ್ಸೆಂಟ್, ಇಂಡಸ್ಟ್ರೀಸ್‌ಗೆ ೧೯೭೭-೭೮ಕ್ಕೆ ೯೬.೮ ಪರ್ಸೆಂಟ್, ಕಮ್ಯೂನಿಕೇಷನ್ಸ್‌ಗೆ ೮೯.೨, ಸೋಷಿಯಲ್ ಸರ್ವೀಸಸ್‌ಗೆ ೬೩.೬೩. ಯಾವುದಕ್ಕೆ ಅವಶ್ಯಕವಾಗಿ ಖರ್ಚುಮಾಡಬೇಕಾಗಿರುತ್ತದೆಯೋ ಅಲ್ಲಿ ಹೆಚ್ಚು ಖರ್ಚು ಮಾಡಿದ್ದೇವೆ. ರೂರಲ್ ಡೆವಲಪ್ ಮೆಂಟ್‌ಗೆ ಹೆಚ್ಚು ಆದ್ಯತೆಯನ್ನು ಕೊಟ್ಟಿದ್ದೇವೆ. ಈ ಮಾತನ್ನು ಮತ್ತೆ ಒತ್ತಿ ಹೇಳಬೇಕಾಗಿದೆ, ಮಾನ್ಯ ಅಧ್ಯಕ್ಷರೆ, ಜನತಾ ಸರ್ಕಾರದ ನೀತಿ ಅಂದರೆ ಹೆಚ್ಚು ಹಣವನ್ನು ಗ್ರಾಮಾಂತರ ಪ್ರದೇಶಗಳಿಗೆ ಖರ್ಚು ಮಾಡತಕ್ಕಂಥದಾಗಿದೆ. ಎಂದು ನಾನು ಹೇಳುತ್ತೇನೆ. ಆ ಒಂದು ನೀತಿಯನ್ನು ಅನುಸರಿಸಿದ್ದೇವೆ. ಕೆಲವು ಅಂಕಿಅಂಶಗಳನ್ನು ಈ ಬಗೆ ನೋಡಿದರೆ ಅದು ತಮಗೇ ಗೊತ್ತಾಗುತ್ತದೆ. ಗ್ರಾಮೀಣ ಅಭಿವೃದ್ಧಿ ಮತ್ತು ನಗರ ಸೌಲಭ್ಯಗಳ ಬಗ್ಗೆ ೧೯೭೦-೭೧ರಲ್ಲಿ ೨೪೬.೧೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದರೆ ೬೩ ಪರ್ಸೆಂಟ್ ನಗರ ಪ್ರದೇಶಗಳಿಗೆ ಖರ್ಚುಮಾಡಿದಂಥ ಹಣವಾಗುತ್ತದೆ, ೧೯೭೭-೭೮ರಲ್ಲಿ ಗ್ರಾಮೀಣ ಪ್ರದೇಶಗಳಿಗೆ ಖರ್ಚಾದ ಹಣ ೬೨೪.೪೦ ಕೋಟಿ ರೂಪಾಯಿಗಳು ಅಂದರೆ ೬೮ ಪರ್ಸೆಂಟ್ ಅರ್ಬನ್ ಏರಿಯಾಕ್ಕೆ ೨೮೧.೯೧ ಕೋಟಿ ರೂಪಾಯಿಗಳು

ಅಂದರೆ ೩೨ ಪರ್ಸೆಂಟ್. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ನಗರದ ಕಡೆಗೆ ಹೆಚ್ಚು ಹಣ ಖರ್ಚು ಮಾಡತಕ್ಕ ನೀತಿಯನ್ನು ನಿಲ್ಲಿಸಿ ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ಹಣ ಖರ್ಚು ಮಾಡುವುದನ್ನು ರೂಪಿಸಿದ್ದೇವೆ. ಕಾರಣ, ಇನ್ನೂ ಹೆಚ್ಚು ಕೆಲಸ ಗ್ರಾಮಾಂತರ ಪ್ರದೇಶಗಳಲ್ಲಿ ಆಗಬೇಕೆಂದು. ನಿನ್ನೆ ಬಸವಲಿಂಗಪ್ಪನವರು ಅನೇಕ ವಿಚಾರಗಳನ್ನು ಎತ್ತಿದ್ದರು, ಇವತ್ತು ಅವರು ಸಭೆಯಲ್ಲಿ ಇಲ್ಲ. ಮಿನಿಮಮ್ ನೀಡ್ಸ್ ಪ್ರೋಗ್ರಾಂನಲ್ಲಿ ಖರ್ಚು ಕಡಿಮೆ ಆಗಿದೆ ಎಂದು ಹೇಳಿದರು. ಅದು ಸರಿಯಾದುದಲ್ಲ. ೧೯೭೮–೭೯ ರಿಂದ ೮೨–೮೩ರವರೆಗೆ ಖರ್ಚಾದ ಹಣ ೧೯೭೪.೩೯ ಕೋಟಿ ರೂಪಾಯಿಗಳು. ೮೩–೮೪ರಿಂದ ೮೭–೮೮ರವರೆಗೆ ಖರ್ಚಾದದ್ದು ೩೭೫೫.೬೦ ಕೋಟಿ ರೂಪಾಯಿಗಳು. ಇದನ್ನು ಗಮನಕ್ಕೆ ತೆಗೆದುಕೊಂಡರೆ ನಮ್ಮ ಕಾಲದಲ್ಲಿ ಮಿನಿಮಂ ನೀಡ್ಸ್ ಪ್ರೋಗ್ರಾಂನಲ್ಲಿ ಎರಡು ಪಟ್ಟು ಹೆಚ್ಚು ಹಣ ಖರ್ಚಾಗಿದೆ, ಅವರು ಹೇಳಿದ್ದರಲ್ಲಿ ತಪ್ಪಿಲ್ಲ. ಏಕೆಂದರೆ ನಮ್ಮ ವರದಿಯಲ್ಲಿ ಅಂಕಿಸಂಖ್ಯೆಗಳು ಸರಿಯಿಲ್ಲದಿದ್ದುದರಿಂದ ಹೇಳಿರಬೇಕು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಕಟ್ ಮಾಡಿದ್ದರಲ್ಲಿ ಮಿನಿಮಂ ನೀಡ್ಸ್ ಪ್ರೋಗ್ರಾಂಗೂ ಕಟ್ ಮಾಡಿದ್ದೀರೆಂದು ತಾವು ಹೇಳಿದಿರಿ :

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾಡಿಲ್ಲವೆಂದು ಹೇಳುತ್ತೇನೆ. ಅದು ತಪ್ಪಾಗಿದೆ. ಅದನ್ನು ಸರಿಪಡಿಸುತ್ತೇನೆ. ಮಿನಿಮಂ ನೀಡ್ಸ್ ಪ್ರೋಗ್ರಾಂನಲ್ಲಿ ಖರ್ಚು ಕಡಿಮೆ ಮಾಡಿಲ್ಲ.

ಇನ್ನು ಸ್ಪೆಷಲ್ ಕಾಂಪೋನೆಂಟ್ ಬಗ್ಗೆ ಬಹಳ ತೀಕ್ಷ್ಣವಾಗಿ ಟೀಕೆ ಮಾಡಿದರು. ಅದರ ಬಗ್ಗೆ ಮಾನ್ಯ ಸದಸ್ಯರಿಗೆ ಅಂಕಿಅಂಶಗಳನ್ನು ಕೊಟ್ಟರೆ ಮನವರಿಕೆಯಾಗುತ್ತದೆ. ಸ್ಪೆಷಲ್ ಕಾಂಪೋನೆಂಟ್‌ನಲ್ಲಿ ೧೯೮೦–೮೧ ರಿಂದ ೮೪–೮೫ರವರೆಗೆ ಆದ ಒಟ್ಟು ಖರ್ಚು ೧೩೨.೭೦ ಕೋಟಿ ರೂಪಾಯಿಗಳು. ಅಂದರೆ ೩೪.೨೩ ಪರ್ಸೆಂಟ್. ೮೫–೮೬ ರಿಂದ ೮೭–೮೮ರವರೆಗೆ ಈ ೩ ವರ್ಷಗಳಲ್ಲಿ ಒಟ್ಟು ಖರ್ಚಾದದ್ದು ೩೫೧.೪೧ ಕೋಟಿ ರೂಪಾಯಿಗಳು, ಅಂದರೆ ೭೧.೨೫ ಪರ್ಸೆಂಟ್. ಅಂದಾಗ ಈ ಬಾಬಿಗೆ ಹಿಂದಿಗಿಂತ ಹೆಚ್ಚು ಖರ್ಚು ಮಾಡಿದ್ದೇವೆ. ಖರ್ಚು ಕಡಿಮೆ ಮಾಡಿದ್ದೀರಿ, ಉಳಿತಾಯ ಮಾಡಿದ್ದೀರಿ ಎಂಬ ಮಾತನ್ನು ಹೇಳಿದರು. Economical assistance given to the Scheduled Castes for enabling them to cross the poverty line under the Special Component Plan. ಸ್ಪೆಷಲ್ ಕಾಂಪೋನೆಂಟ್ ಪ್ಲಾನ್‌ನಲ್ಲಿ ೧೯೮೦ ರಿಂದ ೧೯೮೩ರವರೆಗೆ ೨.೫೭ ಕೋಟಿ ರೂಪಾಯಿಗಳನ್ನು ಮತ್ತು ೮೩–೮೪ರಲ್ಲಿ ೬.೨೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಪರ್ಸೆಂಟೇಜ್ ಹಿಂದೆ ಇದ್ದದ್ದು ೦.೮೬ ಪರ್ಸೆಂಟ್ ಆದರೆ ಈಗ ೧.೨೪ ಪರ್ಸೆಂಟ್‌ವರೆಗೆ ಖರ್ಚು ಮಾಡಿದ್ದೇವೆ. Release of special Central Assistance on the Special Component Plan. ೧೯೮೦ ರಿಂದ ೧೯೮೩ರವರೆಗೆ ೨೦.೭೩ ಕೋಟಿ ರೂಪಾಯಿಗಳು ಅಂದರೆ ೬.೯ ಪರ್ಸೆಂಟ್ ಆಮೇಲೆ ೩ ವರ್ಷದಲ್ಲಿ ೪೭.೯೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಅಂದರೆ ೯.೩೭ ಪರ್ಸೆಂಟ್. ಆದ್ದರಿಂದ ಕೇಂದ್ರ ಸರ್ಕಾರ ಕೊಟ್ಟಂತಹ ಹಣವನ್ನು ನೀವು ಉಪಯೋಗ ಮಾಡಿಲ್ಲ ಎಂಬ ಮಾತು ಸರಿಯಾದುದಲ್ಲವೆಂದು ನಾನು ಅಭಿಪ್ರಾಯಪಡಬೇಕಾಗುತ್ತದೆ. ವಿಶೇಷವಾಗಿ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ವಿಚಾರದಲ್ಲಿ ಒದಗಿಸಿದ ಹಣ ಬಹಳ ಲ್ಯಾಪ್ಸ್ ಆಗುತ್ತದೆ. ಅದನ್ನು ನಾನು ಒಪ್ಪುತ್ತೇನೆ. ಕಳೆದ ಹಲವಾರು ವರ್ಷಗಳಿಂದ ೬೦–೪೦ ಪರ್ಸೆಂಟ್ ಲ್ಯಾಪ್ಸ್ ಆಗುತ್ತಾ ಬಂದಿದೆ. ಈ ಬಗ್ಗೆ ನಾನು ಇಲ್ಲಿ ಅನೇಕ ಸಾರಿ ಟೀಕೆ ಮಾಡಿದ್ದೇನೆ. ನಾನೂ ಕೂಡ ಪಿ.ಎ.ಸಿ ಕಮಿಟಿಯ ಛೇರ್ಮನ್ನಾಗಿ ರಿಪೋರ್ಟ್ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ಅವರು ಮಾಡಿರುವ ಟೀಕೆ ಸರಿಯಾಗಿದೆ. ಅದಕ್ಕೆ ಸರಿಯಾದ ರೀತಿಯಿಂದ ಕ್ರಮ ಕೈಗೊಳ್ಳಬೇಕಾಗುತ್ತದೆ. ಈ ಬಗ್ಗೆ ಸೋಷಿಯಲ್ ವೆಲ್‌ಫೇರ್ ಮಿನಿಸ್ಟರ್ ಅವರು ಆ ಇಲಾಖೆ ವಿಚಾರ ಚರ್ಚೆಗೆ ಬಂದಾಗ ಹೇಳಬೇಕಾಗುತ್ತದೆ. ೧೦ ಕೋಟಿ, ೧೫ ಕೋಟಿ, ೨೦ ಕೋಟಿ, ಒಂದೊಂದು ಸಾರಿ ೪೦ ಕೋಟಿ ರೂಪಾಯಿ ಲ್ಯಾಪ್ಸ್ ಆಗಿದೆ. ಇಲ್ಲ ಎಂದು ನಾನು ಹೇಳುವುದಿಲ್ಲ. ಅದು ಆಗದಂತೆ ನೋಡಿಕೊಳ್ಳಬೇಕಾಗಿದೆ. ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳಿಗೆ ನಾನು ಹೇಳುತ್ತೇನೆ, ಅವರು ಉತ್ತರ ಕೊಡುವಾಗ, ಅವರ ಇಲಾಖೆ ಬೇಡಿಕೆಗಳು ಚರ್ಚೆಗೆ ಬಂದಾಗ ಇದರ ಕಡೆ ಗಮನ ಹರಿಸ

ಬೇಕೆಂದು ಹೇಳುತ್ತೇನೆ. ಯೋಜನಾ ಇಲಾಖೆಯಲ್ಲಿನ ವಿಕೇಂದ್ರೀಕರಣದ ಬಗ್ಗೆ ಈಗಾಗಲೇ ನಾನು ಹೇಳಿದ್ದೇನೆ. ಇವ್ಯಾಲ್ಯುಯೇಷನ್ ಮಾನಿಟರಿಂಗ್ ಬಗ್ಗೆ ಹೇಳಿದ್ದೇನೆ. ಇನ್ನೂ ಹೆಚ್ಚಿನ ರೀತಿಯಲ್ಲಿ ಯೋಜನೆ ಗ್ರಾಮ ಮಟ್ಟದಿಂದ ಜಿಲ್ಲಾ ಮಟ್ಟಕ್ಕೆ ಮತ್ತು ಅಲ್ಲಿಂದ ರಾಜ್ಯ ಮಟ್ಟಕ್ಕೆ ಬಂದು ಕೊನೆಗೆ ರಾಷ್ಟ್ರ ಮಟ್ಟಕ್ಕೆ ಹೋಗಬೇಕೆನ್ನುವ ವಿಚಾರವನ್ನು ಎಲ್ಲರೂ ಒಪ್ಪುತ್ತಿದ್ದಾರೆ. ಅದು ಪರಿಣಾಮಕಾರಿಯಾಗಬೇಕಾದರೆ ಸೂಕ್ತ ತರಬೇತಿ ಮಾಡತಕ್ಕದ್ದು, ಸರಿಯಾದ ಮಾರ್ಗದರ್ಶನ ಮಾಡತಕ್ಕದ್ದು ಅವಶ್ಯ ಇದೆ. ಅದನ್ನು ಮಾಡತಕ್ಕ ಯೋಜನೆಯನ್ನು ಈಗಾಗಲೇ ಹೇಳಿದ್ದೇವೆ. ಇನ್ನೊಂದು ವಿಚಾರ ಸರ್ಕಾರ ಆಲೋಚನೆ ಮಾಡಿದೆ. ನಮ್ಮ ಯೋಜನೆ ಏನಿದೆ ಇದನ್ನು ಗುಪ್ತವಾಗಿ ಮಾಡತಕ್ಕ ಅವಶ್ಯಕತೆ ಇಲ್ಲ. ಪ್ಲಾನಿಂಗ್ ಕಮಿಷನ್ ಮತ್ತು ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಸೀಕ್ರೇಟ್ ಅಲ್ಲ. ಪ್ರಜಾಪ್ರಭುತ್ವ ಪದ್ಧತಿ ಇರತಕ್ಕ ಬೇರೆ ಬೇರೆ ರಾಷ್ಟ್ರಗಳ ಯೋಜನೆ ಬಗ್ಗೆ ರಾಷ್ಟ್ರ ಮಟ್ಟದಲ್ಲಿ ಚರ್ಚೆಯಾಗಿದೆ. ೮ನೇ ಪಂಚವಾರ್ಷಿಕ ಯೋಜನೆಯನ್ನು ನಾವು ರೂಪಿಸುತ್ತಿದ್ದೇವೆ. ಅದರ ಬಗ್ಗೆ ರಾಷ್ಟ್ರೀಯ ಚರ್ಚೆಯಾಗಬೇಕು. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಇಂಥ ಚರ್ಚೆಯನ್ನು ರಾಜ್ಯ ಮಟ್ಟದಲ್ಲಿ ಮಾಡತಕ್ಕ ವಿಚಾರ ಇದೆ. ಕೇಂದ್ರಸರ್ಕಾರಕ್ಕೆ ನಮ್ಮ ಅಭಿಪ್ರಾಯವನ್ನು ಕೊಡುವ ಮೊದಲು ರಾಜ್ಯ ಮಟ್ಟದಲ್ಲಿ ಬೇರೆ ಬೇರೆ ರಂಗದಲ್ಲಿ ಪರಿಣಿತರಾದ, ಇನ್‌ವಾಲ್ವ್ ಆಗತಕ್ಕ ಜನರ ಅಭಿಪ್ರಾಯ ಪಡೆಯುವುದಕ್ಕೆ ರಾಜ್ಯಮಟ್ಟದಲ್ಲಿ ಡಿಬೇಟ್ ಆಗತಕ್ಕ ವಿಚಾರವನ್ನು ಈಗಾಗಲೇ ಮಾಡಿದ್ದೇವೆ. ಈ ಸೆಮಿನಾರ್‌ನಲ್ಲಿ ಸಂಘ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು, ರೈತ ಮುಖಂಡರು ಪಾಲ್ಗೊಳ್ಳುವಂಥ ರೀತಿಯಲ್ಲಿ ವ್ಯವಸ್ಥೆ ಮಾಡುತ್ತೇವೆಂದು ಹೇಳಿ ಯೋಜನಾ ಇಲಾಖೆ ಬಗ್ಗೆ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಧರ್ಮಸಿಂಗ್.—ಸ್ಪೆಸಿಫಿಕ್ಕಾಗಿ ನಾನು ರೀಜನಲ್ ಇಂಬ್ಯಾಲೆನ್ಸ್ ಬಗ್ಗೆ ಕೇಳಿದ್ದೆ. ಕೋರ್ ಸೆಕ್ಟರ್‌ನಲ್ಲಿ ಹಾಗೂ ಬೇರೆ ಬೇರೆ ವಿಚಾರಗಳ ಡಿಕ್ರೀಸ್ ಆಗಿದೆ ಎಂಬುದನ್ನು ಹೇಳಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಹೇಳಿದ್ದೇನೆ. ತಾವು ತಡವಾಗಿ ಬಂದಿರಿ.

ಶ್ರೀ ಧರ್ಮಸಿಂಗ್.—ರೀಜನಲ್ ಇಂಬ್ಯಾಲೆನ್ಸ್ ಬಗ್ಗೆ ಹೇಳಬೇಕು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ರೀಜನಲ್ ಇಂಬ್ಯಾಲೆನ್ಸನ್ನು ಯಾವ ರೀತಿ ಸರಿಪಡಿಸುತ್ತೀರಿ ? ಯಾವರೀತಿ ನ್ಯಾಯಬದ್ಧವಾಗಿ ಫಂಡ್ಸ್ ಡಿಸ್ಟ್ರಿಬ್ಯೂಟ್ ಮಾಡುತ್ತೀರಿ ? ಇದರ ಬಗ್ಗೆ ವಿವರ ಕೊಡಿ,

ಶ್ರೀ ಧರ್ಮಸಿಂಗ್.—ಅಸಲೇ ಬಿಟ್ಟಿರಿ ನೀವು. ನೀವು ನಾರ್ದರ್ನ್ ಕರ್ನಾಟಕಕ್ಕೆ ಸಂಬಂಧಪಟ್ಟವರು. ನಿಮಗೆ ಎಲ್ಲಾ ವಿಚಾರ ಗೊತ್ತಿದೆ. ಸರಿಯಾಗಿ ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಹೇಳುತ್ತೇನೆ. ಹೈದರಾಬಾದ್ ಕರ್ನಾಟಕದ ಬಗ್ಗೆ ಈಗಾಗಲೇ ಈ ಮನೆಯಲ್ಲಿ ಹೇಳಿದ್ದೇನೆ. ಮಾನ್ಯ ಸದಸ್ಯರು ಅದರ ಬಗ್ಗೆ ಕೇಳಿದ್ದಾರೆ. ಹೈದರಾಬಾದ್ ಕರ್ನಾಟಕ ಹಿಂದುಳಿದ ಪ್ರದೇಶ. ಅದು ಹೈದರಾಬಾದ್ ಸಂಸ್ಥಾನದಿಂದ ಬಂದಂಥ ಪ್ರದೇಶ. ಉಳಿದ ಪ್ರದೇಶಗಳನ್ನು ನೋಡಿದಾಗ ಆ ಪ್ರದೇಶ ಬಹಳ ಹಿಂದುಳಿದಿದೆ ಎಂಬ ಬಗ್ಗೆ ಎರಡು ಮಾತಿಲ್ಲ. ಆದರೆ ಹಿಂದುಳಿದ ಪ್ರದೇಶಗಳನ್ನು ಬೇರೆ ಪ್ರದೇಶಗಳ ಮಟ್ಟಕ್ಕೆ ತರಬೇಕಾದರೆ ವಿಶಿಷ್ಟವಾದ ಯೋಜನೆ ಮತ್ತು ಹಣಕಾಸಿನ ವ್ಯವಸ್ಥೆ ಆಗಬೇಕು. ನಾವು ಜಿಲ್ಲಾಪರಿಷತ್ತು ವ್ಯವಸ್ಥೆ ಮಾಡಿದಮೇಲೆ ಈ ಬಗ್ಗೆ ಕೆಲವು ನೀತಿಗಳನ್ನು ರೂಪಿಸಿದ್ದೇವೆ. ಇದರಲ್ಲಿ ಪ್ರಾದೇಶಿಕವಾಗಿ ಹಿಂದುಳಿದ ಪ್ರದೇಶಗಳಲ್ಲಿ ಜನಸಂಖ್ಯೆಯ ಆಧಾರದ ಮೇಲೆ ಸಹಾಯಧನವನ್ನು ನೀಡುವಂತಹ ನೀತಿಯನ್ನು ಮಾಡಿದ್ದೇವೆ. ಇದರಿಂದ ಸ್ವಲ್ಪ ಹೆಚ್ಚು ಹಣ ಬರುತ್ತಿದೆ. ಇದು ಸಾಕು ಎಂಬುದಾಗಿ ನಾನು ಹೇಳುತ್ತಿಲ್ಲ. ಈ ಒಂದು ಹೊಸ ನೀತಿಯಿಂದಾಗಿ ಗುಲ್ಬರ್ಗ ವಿಭಾಗಕ್ಕೆ ೧೯೮೭-೮೮ನೇ ಸಾಲಿನಲ್ಲಿ ೪೮.೩೨ ಕೋಟಿ ರೂಪಾಯಿಗಳು ದೊರೆತಿದ್ದರೆ ೧೯೮೮-೮೯ಕ್ಕೆ ೫೦.೬೦ ಕೋಟಿ ರೂಪಾಯಿಗಳು ದೊರೆಯುತ್ತದೆ. ಇದು ಜಿಲ್ಲಾ ಪರಿಷತ್ತಿಗೆ ಕೊಡತಕ್ಕಂತಹ ಹಣ. ಸುಮಾರು ೨೦ ಪರ್ಸೆಂಟ್ ಹೆಚ್ಚಾಗಿದೆ. ಇದು ಬಹಳ ಹೆಚ್ಚು ಅಂತ ಅಲ್ಲ. ಮುಂದೆ ಬರತಕ್ಕ ದಿವಸಗಳಲ್ಲಿ ಈ ಇಂಬ್ಯಾಲೆನ್ಸನ್ನು ತೆಗೆದುಹಾಕತಕ್ಕ ನೀತಿ ನಮ್ಮಲ್ಲಿ ಇದೆ. ಹಿಂದುಳಿದ ಪ್ರದೇಶಕ್ಕೆ ಹೆಚ್ಚು ಹಣ ದೊರೆಯುತ್ತದೆ. ಇದರಿಂದ ಹೈದರಾಬಾದ್ ಕರ್ನಾಟಕದ ಸಮಸ್ಯೆಗೆ ಪರಿಹಾರದ ಅಥವಾ ಉತ್ತರ ದೊರೆಯುವುದಿಲ್ಲ. ಈ ಬಗ್ಗೆ ನಾನು ಹಿಂದೆಯೇ ಹೇಳಿದ

ಹಾಗೆ ಕೇಂದ್ರ ಸರ್ಕಾರಕ್ಕೆ ಹಾಗೂ ಯೋಜನಾ ಆಯೋಗಕ್ಕೆ ಈ ಬಗ್ಗೆ ಏನು ಪತ್ರ ಬರೆದಿದ್ದೇವೆಂಬುದನ್ನು ಇಲ್ಲಿ ಓದಿಬಿಡುತ್ತೇನೆ. ಇದರಿಂದ ನಮ್ಮ ಸ್ಟ್ಯಾಂಡರ್ಡ್ ಏನು ಎಂಬುದು ತಮಗೆಲ್ಲಾ ಅರ್ಥವಾಗುತ್ತದೆ. ಪ್ರಿಲಿಮಿನರಿಯಾಗಿ ಹೈದರಾಬಾದ್ ಕರ್ನಾಟಕದ ಭಾಗ ನಮಗೆ ಹೇಗೆ ಬಂತು ಎಂಬುದನ್ನು ಸಹ ಹೇಳಿದ್ದೇವೆ.

"Karnataka Government had set up a Committee to report on "Hyderabad Karnataka Development" during 1980. While preparing the report, the sub-committee of the main Committee had met the then Prime Minister Late Smt. Indira Gandhi and the hon Union Planning Minister Sri S. B. Chavan. Both had appreciated the urgency and the need for rectifying the regional backwardness of Gulbarga Division. The Committee has prepared a comprehensive plan for development of this area involving an investment of Rs. 350 crores over a period of 10 years

As you are aware that the State's VIIth Five Year Plan outlay has been reduced drastically and it is very difficult for the State Government to provide additional funds for the development of this backward region. In view of this, it is necessary that the Centre makes an addditional allocation to the tune of Rs. 130 crores during the VIIth Five Year Plan and Rs. 220 crores during VIIIth Plan period to implement the plan prepared by the Hyderabed Karnataka Development Committee.

"It is not out of place to mention that the Planning Commission had sanctioned special financial assistance in the past to some States. For example, assistance was given for Sunarban Region Development in West Bengal. Rs. 100 crores were given as special assistance to Andhra Pradesh during 1974 for the development of Backward Areas consequent to a large scale political agitation in Telangana Region during 1972 due to the depressed conditions prevailing there. The Hyderabad-Karnataka area in Karnataka is equally or even more backward than Telangana Region in Andhra Pradesh. It is feared that Telangana type agitation may also start in Karnataka, if proper attention is not given for its development in time. The only way to tackle this situation is to allocate additional outlay to this region for its comprehensive development. In view of the cut in the State's VIIth Plan size and Annual Plan size, I request you to sanction Rs. 130 crores as additional Central assistance during the VIIth Plan and immediately Rs. 20 crores during 1985-86 for taking up the development

programmes as contained in the comprehensive plan of Development of Gulbarga Division.''

ಅಂದರೆ ಇದರಲ್ಲಿ ತೆಲಂಗಾಣ ಮತ್ತು ಪಶ್ಚಿಮ ಬಂಗಳಾದಲ್ಲಿ ಸುಂದರ್ ಬನ್‌ಗಾಗಿ ವಿಶೇಷವಾದ ಸಹಾಯವನ್ನು ಕೊಟ್ಟಿದೆ. ಇದರಲ್ಲಿ ಕೇಂದ್ರ ಸರ್ಕಾರದ ೫೦ ಪರ್ಸೆಂಟ್ ಹಣವನ್ನು ಖರ್ಚು ಮಾಡಬೇಕು. ರಾಜ್ಯ ಸರ್ಕಾರ ೫೦ ಪರ್ಸೆಂಟ್ ಹಣವನ್ನು ಖರ್ಚು ಮಾಡಬೇಕು. ಇದಕ್ಕೆ ನಮ್ಮ ಒಪ್ಪಿಗೆ ಇದೆ ಎಂಬುದಾಗಿ ಪತ್ರದಲ್ಲೂ ಹೇಳಿದ್ದೇನೆ. ಅಲ್ಲಿ ನಡೆದಂತಹ ಚರ್ಚೆಯಲ್ಲೂ ಕೂಡ ಹೇಳಿದ್ದೇನೆ. ವಿಶೇಷವಾದ ರೀತಿಯಲ್ಲಿ ಸಹಾಯ ಮಾಡಿದ್ದರೆ ಈ ಹಿಂದುಳಿದ ಭಾಗ ಮುಂದುವರಿದ ಭಾಗಗಳ ಮಟ್ಟಕ್ಕೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕೆ ಅವರಿಂದ ಉತ್ತರ ಏನು ಬಂತು ಅಂದರೆ, ಅದು ಈ ರೀತಿ ಇದೆ.—

''The internal development of backward areas within the State and the allocations there for is normally the responsibility of the State Government concerned. I may also clarify that, at present, assistance is allocated to the States to finance their State Plans according to the revised Gadgil Formula approved by the National Development Council. The Planning Commission do not have discretionary outlays for allotment to any State Goverment for the development of backward areas other than those already approved by the N.D.C.

"In this connection, I would also like to mention that all the four districts of Gulbarga Division are covered under Special Area Development Programme, for drought prone areas and special Central Assistance is provided to supplement the State's benefit in this direction. Three out of four districts have also been identified as Industrially Backward Districts and as such eligible for concessional financial facilities from lending institutions and for investment subsidy for promotion of industries in these districts.''

ಇದಾದ ಮೇಲೆ ನಮ್ಮ ರಾಜ್ಯದ ಲೋಕಸಭಾ ಸದಸ್ಯರಾದ ಕೃಷ್ಣಯ್ಯರ್‌ರವರು ಒಂದು ಪತ್ರವನ್ನು ಬರೆದಿದ್ದಾರೆ. ಇದಕ್ಕೆ ಪ್ಲಾನಿಂಗ್ ಕಮಿಷನ್‌ನಿನ ಡೆಪ್ಯುಟಿ ಛೇರ್ಮನ್‌ರವರು ಈ ರೀತಿ ಉತ್ತರ ಕೊಟ್ಟಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಕೇಂದ್ರ ಸರ್ಕಾರಕ್ಕೆ ನೀವು ಬರೆಯುವುದು, ಅವರು ಅದಕ್ಕೆ ಉತ್ತರ ಬರೆಯುವುದು, ಲೋಕಸಭಾ ಸದಸ್ಯರು ಬರೆಯುವುದೆಲ್ಲಾ ಒಂದು ಒತ್ತಟ್ಟಿಗೆ ಇರಲಿ. ಎಸ್. ಬಿ. ಚೌಹಾಣ್ ಪ್ಲಾನಿಂಗ್ ಕಮಿಷನರ್ ಇದ್ದಾಗ ಅವರ ಜೊತೆ ಹೋಗಿ ಭೇಟಿ ಮಾಡಲಾಗಿದೆ. ನಮ್ಮ ಪ್ಲೀ ಏನಿದೆ ಎಂದರೆ ಎಕ್ಸಿಸ್ಟಿಂಗ್ ಸ್ಟೇಟ್ ಪ್ಲಾನ್ ಔಟ್‌ಲೇನಲ್ಲಿ ಎಷ್ಟು ಸಾಧ್ಯ ಇದೆ ಅಷ್ಟನ್ನು ಡಿಸ್ಟ್ರಿಬ್ಯೂಟ್ ಮಾಡತಕ್ಕದ್ದು, ಹಾಗೂ ವೈಟೇಜ್ ಕೊಡತಕ್ಕದ್ದು ಏಕೆ ಆಗಬಾರದು ಎಂದು ಕೇಳುತ್ತೇನೆ.

ಶ್ರೀ ಧರ್ಮಸಿಂಗ್.—ನೀವು ಈ ಬಗ್ಗೆ ಎಕ್ಸ್‌ಪೀರಿಯನ್ಸ್ ಇದ್ದೀರಿ. ನೀವು ಪತ್ರವನ್ನು ಬರೆದಿದ್ದೀರಿ. ಅದು ನಾರ್ಮಲ್ ಪ್ರೊಸೀಜರ್‌ನಲ್ಲಿ ಹೋಗುತ್ತದೆ, ಅವರಿಂದ ಉತ್ತರ ಬರುತ್ತದೆ. ಇವತ್ತು ಸ್ಪೆಷಲ್ ಕಾಂಪೊನೆಂಟ್ ಪ್ಲಾನ್ ಕೆಳಗೆ, ಡ್ರೌಟ್ ಪ್ರೋನ್ ಕೆಳಗೆ ಹಾಗೂ ಬೇರೆ ಬೇರೆ ಬಾಬತ್ತಿನಲ್ಲಿ ಎಷ್ಟು ಖರ್ಚು ಮಾಡಬೇಕೆಂದಿರುವ ಬಗ್ಗೆ ತಾವು ಸ್ಪೆಸಿಫಿಕ್ಕಾಗಿ ಹೇಳಿದ್ದೀರಿ. ಮೆಸ್ಟ್

ಬೆಂಗಾಲ್‌ನಲ್ಲಿ ಸುಂದರಬಾಂಡ್ ಬೋರ್ಡ್ ಮಾಡಿದ್ದಾರೆ. ಮಹಾರಾಷ್ಟ್ರದಲ್ಲೂ ಏರಿಯಾವೈಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಬೇರೆ ಬೇರೆ ಏರಿಯಾದಲ್ಲಿ ಏನು ರೀಜನಲ್ ಇಂಬ್ಯಾಲೆನ್ಸ್ ಎಂದು ಕಂಡುಬರುತ್ತದೆ, ಅಲ್ಲಿ ಹೆಚ್ಚು ಹಣ ಖರ್ಚು ಆಗಿಲ್ಲ. ಬ್ಯಾಕ್‌ವರ್ಡ್ ಎಲ್ಲಿ ಇದೆ ಎನ್ನುವ ಬಗ್ಗೆ ವರದಿ ಕೂಡಾ ಇದೆ. ೧೯೮೭ ರಲ್ಲಿ ಕ್ಯಾಬಿನೆಟ್ ಅಪ್ರೂವ್ ಆಗಿದೆ. ಅದೂ ೩೬೫ ಕೋಟಿ ರೂಪಾಯಿಯದು ಇದೆ. ಆರನೆಯ ಯೋಜನೆಯಲ್ಲಿ ಕೂಡಾ ಈ ಬಗ್ಗೆ ಕೇಂದ್ರದವರು ರಾಜ್ಯ ಸರ್ಕಾರಕ್ಕೆ ಡೈರೆಕ್ಟ್ ಮಾಡಿ, ಸ್ಪಷ್ಟವಾಗಿ ಹೇಳಿದ್ದಾರೆ. ಇವತ್ತು ಸ್ಟೇಟ್ ಗೌರ್ನ್‌ಮೆಂಟ್ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ಈ ಏರಿಯಾಕ್ಕೆ ಜಿಲ್ಲಾ ಪರಿಷತ್ತಿನ ಮುಖಾಂತರ ೩ ಕೋಟಿ ಹಣವನ್ನು ಕೊಟ್ಟಿದ್ದೇವೆಂದು ಹೇಳಿದರೆ ಪರಿಹಾರ ಆಗುವುದಿಲ್ಲ. ಇವತ್ತು ಅಲಾಟ್‌ಮೆಂಟ್ ಕೊಡುವುದಕ್ಕಿಂತಾ, ರೀಜನಲ್ ಇಂಬ್ಯಾಲೆನ್ಸ್ ಹೋಗಲಾಡಿಸುವುದಕ್ಕೆ ಒಂದು ಪ್ಲಾನ್ ಮಾಡಲಾಗಿದೆ. ಇದಕ್ಕೆ ರಾಜ್ಯ ಸರ್ಕಾರ ೫೦ ಪರ್ಸೆಂಟ್ ಹಣವನ್ನು ಕೊಡಬೇಕಾಗುತ್ತದೆ. ಈ ಬಗ್ಗೆ ತಾವು ಪರ್ಸನಲ್ಲಾಗಿ ಪ್ಲಾನಿಂಗ್ ಕಮಿಷನರ್‌ರವರನ್ನು ಭೇಟಿಯಾಗಿ ವಿಚಾರ ವಿನಿಮಯ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ತಮ್ಮ ಸಲಹೆಯನ್ನು ಒಪ್ಪಿಕೊಳ್ಳುತ್ತಿದ್ದೇನೆ. ಅದನ್ನು ಕೊಡುವುದಕ್ಕೆ ಅವಕಾಶ ಇದೆ. ಪ್ರಧಾನ ಮಂತ್ರಿಯವರು ಬಾಂಬೆಗೆ ವಿಸಿಟ್ ಮಾಡಿದಾಗ ಬಾಂಬೆ ನಗರಕ್ಕೆ ೧೦೦ ಕೋಟಿ ರೂಪಾಯಿಗಳನ್ನು ವಿಶೇಷವಾಗಿ ಕೊಟ್ಟಿದ್ದಾರೆ. ಬೆಂಗಾಲ್‌ಗೆ ಹೋಗಿದ್ದಾಗ ೪೦೦ ಕೋಟಿ ರೂಪಾಯಿ ಕೊಡತಕ್ಕ ಒಂದು ಮಾತನ್ನು ಹೇಳಿದ್ದಾರೆ. ಕಾಶ್ಮೀರಕ್ಕೆ ಹೋದಾಗ ಕೂಡಾ ಹೇಳಿದ್ದಾರೆ. ಇದನ್ನು ಕೊಡುವುದಕ್ಕೆ ಅವಕಾಶ ಇದೆ. ನಾವೆಲ್ಲರೂ ಕೇಂದ್ರ ಸರ್ಕಾರದ ಸಂಬಂಧಪಟ್ಟ ಮಂತ್ರಿಗಳ ಜೊತೆ, ಯೋಜನಾ ಇಲಾಖೆಯ ಮಂತ್ರಿಗಳ ಜೊತೆ, ಅವಶ್ಯಕ ಬಿದ್ದರೆ ಪ್ರಧಾನ ಮಂತ್ರಿಗಳ ಹತ್ತಿರ ಹೋಗೋಣ. ನಾನು ಒಂದು ವಿಷಯದ ಬಗ್ಗೆ ಈ ಸಭೆಯ ಕ್ಷಮೆ ಕೇಳುತ್ತೇನೆ. ಈ ವಿಚಾರದಲ್ಲಿ ಶಾಸಕರ ಒಂದು ಸಭೆಯನ್ನು ಕರೆಯುತ್ತೇನೆಂದು ಹೇಳಿದ್ದು ಅದನ್ನು ಕರೆಯಲಾಗಲಿಲ್ಲ. ಈ ಅಧಿವೇಶನದ ಮುಂದಿನ ವಾರ ಶಾಸಕರ ಸಭೆಯನ್ನು ಕರೆಯುತ್ತೇನೆ. ನಿಮ್ಮ ರಿಪೋರ್ಟ್ ಇದೆ. ಅದರ ಮೇಲೆ ಚರ್ಚೆಯನ್ನು ಮಾಡೋಣ.

ಶ್ರೀ ಧರ್ಮಸಿಂಗ್.—ಈ ರಿಪೋರ್ಟ್ ಇರಲಿ. ನೀವು ಪ್ಲಾನಿಂಗ್ ಕಮಿಷನ್ ಮೆಂಬರ್ಸ್ ಜೊತೆಗೆ ಮತ್ತು ಪ್ರಧಾನಿಯವರನ್ನು ಕಂಡು ಮಾತನಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಶಾಸಕರ ಸಭೆ ಕರೆಯುವುದಕ್ಕೆ ತಪ್ಪಿದ್ದೇನೆ. ಮುಂದಿನವಾರ ಸಭೆ ಕರೆಯುತ್ತೇನೆ. ಅಲ್ಲಿ ಕುಳಿತು ಯಾವರೀತಿ ಹೋಗಬೇಕು, ರಾಜ್ಯ ಸರ್ಕಾರ ಏನು ಮಾಡಬೇಕು ಎಂದು ಆಲೋಚನೆ ಮಾಡೋಣ. ಆದರೆ ಒಂದು ಮಾತು. ಅಸಮಾನತೆಯನ್ನು ಹೋಗಲಾಡಿಸುವುದಕ್ಕೆ ರಾಜ್ಯ ಸರ್ಕಾರ ಏನೂ ಮಾಡಿಲ್ಲ ಎಂದಲ್ಲ. ನೀರಾವರಿ ವಿಚಾರದಲ್ಲಿ ಒಂದರಲ್ಲೇ ಹೇಳುವುದಾದರೆ ಇವತ್ತು ಹೈದರಾಬಾದ್ ಕರ್ನಾಟಕಕ್ಕೆ ಖರ್ಚು ಮಾಡಿರುವ ಹಣ ೩೨೬.೫೮ ಕೋಟಿ ರೂಪಾಯಿಗಳು. ಅದೇರೀತಿ ಬಾಂಬೆ ಕರ್ನಾಟಕ ಏರಿಯಾಕ್ಕೆ ಖರ್ಚು ಮಾಡಿರತಕ್ಕದ್ದು ೧೯೮.೨೪ ಕೋಟಿ ರೂಪಾಯಿಗಳು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅದನ್ನು ಹೇಳಿ ಆಯಿತು. ಯು.ಕೆ.ಪಿ. ಯೋಜನೆಯಲ್ಲಿ ರೋಡ್ಸ್ ಇದೆ, ಸ್ಕೂಲ್ ಇದೆ, ಆಸ್ಪತ್ರೆ ಇದೆ, ರೋಡ್ಸ್, ಸ್ಕೂಲ್ಸ್ ಆಸ್ಪತ್ರೆ ಅವುಗಳೆಲ್ಲ ಬೇರೆ ಬೇರೆ ಬರುತ್ತವೆ. ರಾಯಚೂರು ಥರ್ಮಲ್‌ಪ್ಲಾಂಟ್‌ಗೆ ೨೦೦ ಕೋಟಿ ಯು. ಕೆ. ಪಿ. ಗೆ ೨೦೦ ಕೋಟಿ ಕೊಟ್ಟಿದ್ದೇವೆಂದು ಹೇಳಿದರೆ ಹೇಗೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮೊದಲು ಮಂಡ್ಯ ಜಿಲ್ಲೆಯಲ್ಲಿ ಏನಿತ್ತು ? ಮಂಡ್ಯ ಮತ್ತು ಮೈಸೂರು ಜಿಲ್ಲೆ ಕೆ.ಆರ್.ಎಸ್. ಕಟ್ಟಿದ ಮೇಲೆ ಒಳ್ಳೆಯದಾಯಿತು. ಯು. ಕೆ. ಪಿ. ಗಾಗಿ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಅದು ಹೈದರಾಬಾದ್ ಕರ್ನಾಟಕದ ಹೆಬ್ಬಾಗಿಲು ಆಗಲಿಯೆಂದು ನಾವು ಖರ್ಚು ಮಾಡುತ್ತಿದ್ದೇವೆ.

ಶ್ರೀ ಕೆ. ಎಚ್. ಪಾಟೀಲ್.—ತಮ್ಮ ವಾದವನ್ನು ಒಪ್ಪುವುದಾದರೆ, ಹೈದರಾಬಾದ್ ಕರ್ನಾಟಕಕ್ಕೆ ಹೆಚ್ಚು ಖರ್ಚು ಮಾಡಿದ್ದೇವೆಂದರೆ ಕರ್ನಾಟಕದ ಉಳಿದ ಭಾಗಗಳಿಗೆ ಕಡಿಮೆ ಖರ್ಚು ಮಾಡಿದಹಾಗೆ ಆಗುತ್ತದೆ. ಇಡೀ ಕರ್ನಾಟಕ ಒಂದೇ ಎಂದು, ತಾವು ಭಾವಿಸಬೇಕು. ನೀವು ಧಾರವಾಡದಿಂದ

ಬಂದಿದ್ದೀರಿ ಹಾಗೆಂದು ಅಲ್ಲಿಗೆ ಹೆಚ್ಚು ಖರ್ಚು ಮಾಡುವುದಕ್ಕಾಗುವುದಿಲ್ಲ. ಇಡೀ ಕರ್ನಾಟಕದ ಸತ್ಕಾರ್ಯಕ್ಕೆ ಹೆಚ್ಚು ಖರ್ಚು ಮಾಡಲಿಕ್ಕೆ ದೇವರು ನಿಮಗೆ ಎಷ್ಟು ಶಕ್ತಿ ಕೊಡುತ್ತಾನೊ ಅಷ್ಟು ಖರ್ಚು ಮಾಡಿ.

ಶ್ರೀ ಧರ್ಮಸಿಂಗ್.—ಪ್ಲಾನಿಂಗ್ ಕಮಿಷನ್ ಪ್ರಕಾರ ನೀವು ಖರ್ಚು ಮಾಡಿದ್ದೀರಿ. ನಾವೇನು ಹೇಳುತ್ತಿದ್ದೇವೆ ಅಂದರೆ, ಈಗ ಹಾರಂಗಿ, ಹೇಮಾವತಿ ಈ ಪ್ರಾಜೆಕ್ಟ್‌ಗಳಿಗೆ ಎಷ್ಟು ಹಣ ಖರ್ಚು ಮಾಡಿದ್ದೇವೆ ? ಅವು ಯಾವ ಅಪ್ರೂವ್ಡ್ ಪ್ರಾಜೆಕ್ಟ್‌ಗಳಲ್ಲ. ಆದ್ದರಿಂದ ಈ ತರಹ ತಾವು ಹೇಳ ಬಾರದು ಕೃಷ್ಣಾ ಯೋಜನೆಗಳಿಗೆ ನೀವು ಈ ತರಹ ಹಣ ಕೊಡುವುದಾದರೆ ೫೦ ವರ್ಷಗಳಾದರೂ ಕೆಲಸ ಆಗುವುದಿಲ್ಲವೆಂದು ನಾವು ಹೇಳಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಕೆ. ಹೆಚ್. ಪಾಟೀಲ್‌ರವರು ಕರ್ನಾಟಕದ ಸಮಗ್ರ ಅಭಿವೃದ್ಧಿಯ ಬಗ್ಗೆ ಆಲೋಚನೆ ಮಾಡಬೇಕೆಂದು ಹೇಳಿದ್ದಾರೆ, ಅದೇರೀತಿ ನಾವು ಹಿಂದುಳಿದ ಪ್ರದೇಶ ಗಳಿಗೆ ಪ್ರಾಶಸ್ತ್ಯ ಕೊಟ್ಟಿದ್ದೇವೆ. ಹೈದರಾಬಾದ್ ಕರ್ನಾಟಕ ಹಿಂದುಳಿದ ಪ್ರದೇಶವಾದ್ದರಿಂದ ಪ್ರಶಸ್ತ್ಯ ಕೊಟ್ಟಿದ್ದೇವೆ. ಮಾನ್ಯ ಧರ್ಮಸಿಂಗ್‌ರವರ ಅಧ್ಯಕ್ಷತೆಯಲ್ಲಿ ರಚಿತವಾಗಿದ್ದ ಕಮಿಟಿ ರಿಪೋರ್ಟ್ ಏನಿದೆ ಅದರ ಬಗ್ಗೆ ಈ ಅಧಿವೇಶನ ಮುಗಿದ ಮೇಲೆ ಚರ್ಚೆ ಮಾಡೋಣ. ಕೇಂದ್ರ ಸರ್ಕಾರಕ್ಕೆ ಏನು ಪ್ರಪೋಸಲ್ಸ್ ಕೊಡಬೇಕೆಂಬುದರ ಬಗ್ಗೆ ಆಲೋಚನೆ ಮಾಡೋಣ, ದೆಹಲಿಗೆ ಹೋಗಿ ಭೇಟಿ ಮಾಡ ತಕ್ಕದ್ದು ಇದ್ದರೆ ಭೇಟಿ ಮಾಡೋಣ ಆ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತೇನೆ.

೧೨-೦೦ ಮಧ್ಯಾಹ್ನ

ಶ್ರೀ ಕೆ. ಹೆಚ್. ಶ್ರೀನಿವಾಸ.— ನಮ್ಮ ರಾಜ್ಯದ ಯೋಜನೆಯಲ್ಲಿ ಇಡೀ ರಾಜ್ಯದ ಅಭಿವೃದ್ಧಿ ಗುರುತಿಸಿ ಕೆಲಸ ಮಾಡುವುದಕ್ಕೆ ಯೋಚನೆ ಮಾಡುತ್ತಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. It is called a Macro Planning. But what I am saying is Micro Planning. ಒಂದೊಂದು ಏರಿಯಾಕ್ಕೆ ಸಂಬಂಧಪಟ್ಟಂತೆ ವಿಶಿಷ್ಟವಾದ ಸಮಸ್ಯೆಗಳಿರುತ್ತವೆ. ಅವುಗಳ ಅಭಿವೃದ್ಧಿಯ ಸಾಧ್ಯತೆಗನುಸಾರವಾಗಿ ಏರ್ಪಾಡು ಮಾಡತಕ್ಕ ಯೋಜನೆಯನ್ನು ಹಾಕಿ ಕೊಳ್ಳುತ್ತಿದ್ದೇವೆ ಹಾಗೂ ಅದರ ಬಗ್ಗೆ ಯೋಚನೆ ಮಾಡಿ ಹೈದರಾಬಾದ್ ಕರ್ನಾಟಕಕ್ಕೆ ಬಹಳ ಚೆನ್ನಾಗಿ ಕೆಲಸ ಮಾಡಿದ್ದೇವೆಂದು ಹೇಳಿದ್ದಾರೆ, ಅದರ ಬಗ್ಗೆ ಬಹಳ ಜನ ಹೇಳಿದ್ದಾರೆ, ಅದಕ್ಕೆ ತಾವು ಒಪ್ಪಿಕೊಂಡಿದ್ದೀರಿ. ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಎಲ್ಲೆಲ್ಲಿ ಹಿಂದುಳಿದ ಪ್ರದೇಶಗಳು ಇವೆ ಅಲ್ಲಿ ಕೆಲಸ ಮಾಡಿ. ೧೯೭೭ರಿಂದ ಹಲವಾರು ಬಾರಿ ನಾನು ರಾಜ್ಯದಲ್ಲಿ ಪ್ರಸ್ತಾಪ ಮಾಡಿದ್ದೇನೆ. ರಾಜ್ಯದಲ್ಲಿ ಮಲೆನಾಡು ಪ್ರದೇಶ ಎಂದು ಒಂದಿದೆ. ಸುಮಾರು ೫೨ ತಾಲ್ಲೂಕುಗಳು ಮಲೆನಾಡು ಭಾಗದಲ್ಲಿವೆ. ಅಲ್ಲಿಯ ಸಮಸ್ಯೆಗಳೇ ಬೇರೆ ಇದೆ. ಅಲ್ಲಿ ಅಭಿವೃದ್ಧಿ ಮಾಡಲಿಕ್ಕೆ ಬದಲು ಇವತ್ತಿನವರೆಗೆ ಬಂದಂತಹ ಸರ್ಕಾರಗಳು ಇಡೀ ಮಲೆನಾಡನ್ನು ಹೇಗೆ ಶೋಷಿಸ ಬೇಕೋ ಅಷ್ಟು ಮಾತ್ರ ಮಾಡಿಕೊಂಡು ಬಂದಿವೆ. ಅಭಿವೃದ್ಧಿ ಮಾಡಲಿಕ್ಕೆ ಏನು ಮಾಡಬೇಕೊ ಅದನ್ನು ಮಾಡಲಿಲ್ಲ. ಅಲ್ಲಿನ ಕೆರೆಗಳ ಡೀ ಸಿಲ್ಟಿಂಗ್ ಕೆಲಸ ಆಗಬೇಕು. ಮಲೆನಾಡಿನ ತಾಲ್ಲೂಕುಗಳಲ್ಲಿ ಇವತ್ತಿನವರೆಗೆ ಸಮರ್ಪಕವಾದ ಕಾರ್ಯಕ್ರಮಗಳನ್ನು ಹಾಕಿಲ್ಲ. ರಾಜ್ಯ ಮಟ್ಟದಲ್ಲಿ ಏನು ಕೋಷ್ಟಕಗಳನ್ನು ತಯಾರು ಮಾಡುತ್ತೀರಿ ಅದರದು ಒಂದು ಪ್ರಯೋಜನ ಕೂಡ ಆಗಿಲ್ಲ. ಕೆರೆಯ ಬಗ್ಗೆ, ರಸ್ತೆಯ ಬಗ್ಗೆ ವಿದ್ಯುಚ್ಛಕ್ತಿ ಕೊಡುವ ಬಗ್ಗೆ, ಶರಾವತಿ ಪ್ರಾಜೆಕ್ಟ್‌ನಲ್ಲಿ ಮುಳುಗಡೆಯಾದ ಹಳ್ಳಿಗಳನ್ನು ಬೇರೆ ಕಡೆ ಬದಲಾಯಿಸಿದಾಗ ಆ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ತೆಗೆದುಕೊಳ್ಳಬೇಕಾದರೆ ಬಹಳಷ್ಟು ಹೋರಾಟ ಮಾಡಬೇಕಾಯಿತು. The villagers who were situated just five Kms. from the Hydro electric project could not get electricity because of the norms fixed by the State Government. ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆಯಲ್ಲಿ ಕೆಲವು ಬ್ರಿಡ್ಜ್‌ಗಳನ್ನು ಕಟ್ಟಿದ್ದಾರೆ. ಜಿಲ್ಲಾ ಪರಿಷತ್‌ನಲ್ಲಿ ಕೂಡ ಏನಾಗುತ್ತಿದೆ ಅಂದರೆ ಶಿವಮೊಗ್ಗದಲ್ಲಿ ಮಲೆನಾಡು ತಾಲ್ಲೂಕುಗಳದ್ದು ಒಂದು ಕಥೆಯಾದರೆ ಬಯಲು ಸೀಮೆಗಳ ತಾಲ್ಲೂಕುಗಳದ್ದು ಒಂದು ಕಥೆಯಾಗಿದೆ. ನೀವು ಮಾತನಾಡುವಾಗ ಇದನ್ನು ಎತ್ತಬೇಡಿ ಎಂದರು, ನಾನು ಎತ್ತದೇ ಹೋದರೂ ಅದು ನಿಲ್ಲುವುದಿಲ್ಲ. ಪಂಚಾಂಗ ಸುಳ್ಳು

ಆಶ್ವಾಸನೆಯನ್ನು ಕೊಡಬೇಕು. ಹೈದರಾಬಾದ್ ಕರ್ನಾಟಕ, ಮಲೆನಾಡು ಪ್ರದೇಶ ಅಥವಾ ಬಯಲುಸೀಮೆ ಹೀಗೆ ಯಾವುದೇ ಇರಲಿ ಅಭಿವೃದ್ಧಿಯಲ್ಲಿ ಬ್ಯಾಕ್‌ಲಾಗ್ ಎಲ್ಲೆಲ್ಲಿ ಇದೆ. ಇದನ್ನು ಎಷ್ಟು ವರ್ಷದೊಳಗೆ ಸರಿ ಮಾಡುವುದಕ್ಕಾಗುತ್ತದೆ ಎಂಬುದನ್ನು ನಿಶ್ಚಿತವಾಗಿ ಹೇಳಬೇಕು. ಬ್ಯಾಕ್‌ಲಾಗ್ ಏನಿದೆ ಅದನ್ನು ಸಂಪೂರ್ಣವಾಗಿ ಇಂಪ್ಲಿಮೆಂಟ್ ಮಾಡಿದ್ದಕ್ಕೆ ಈ ಸದನಕ್ಕೆ ವರದಿ ಒಪ್ಪಿಸಿ, ಅದನ್ನು ಮಾನಿಟರಿಂಗ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮ ಮೂಲಕ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಕಡಪಟ್ಟಿಯವರು ಯಾವಾಗಲೂ ನಿರ್ಧಿಷ್ಟವಾದ ಉತ್ತರ ಕೇಳುತ್ತಾರೆ. ಆದರೆ ಈ ವಿಚಾರದಲ್ಲಿ ನಿರ್ಧಿಷ್ಟವಾಗಿ ಉತ್ತರ ಕೊಡುವುದು ಕಷ್ಟ.

ಶ್ರೀ ಎಂ. ಭೂಪತಿ.—ನೀವು ಯಾವಾಗಲೂ ಅನಿರ್ಧಿಷ್ಟವಾಗಿ ಉತ್ತರಗಳನ್ನು ಹೇಳುತ್ತೀರಿ:

ಶ್ರೀ ಎಸ್. ಎಸ್. ಕಡಪಟ್ಟಿ.—ನೋಡುವಾ, ಮಾಡುವಾ ಪಾಕ್‌ಲಾಮ್ ಎಂದು ಹೇಳುವುದು ಬೇಡ. If you have got any mind or zeal to develop the backward areas, you must commit and work otherwise it is of no use. ಏಕೆ ಸುಮ್ಮನೆ ಆ ರೀತಿ ಹೇಳುತ್ತೀರಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅನಿರ್ಧಿಷ್ಟವಾದ ಉತ್ತರಕ್ಕೆ ಶಕ್ತಿ ಏನೆಂದು ತಿಳಿಯಬೇಕಾದರೆ, ನೀವು ಅವರನ್ನು ಮಂತ್ರಿಯಾಗಿ ಮಾಡಿದರೆ. ಗೊತ್ತಾಗುತ್ತದೆ.

ಶ್ರೀ ಎಸ್. ಎಸ್. ಕಡಪಟ್ಟಿ.—ನೀವು ಮಂತ್ರಿಯಾಗಿರಲಿ. ಅವರು ಮಂತ್ರಿಯಾಗಿರಲಿ. ಎಷ್ಟೇ ವರ್ಷ ಅಧಿಕಾರದಲ್ಲಿರಲಿ, you must do some work and you must contribute.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ದಿಸೆಯಲ್ಲಿ ನಿರ್ಧಿಷ್ಟವಾಗಿ ಇವತ್ತು ನಾನು ಹೇಳದೇ ಹೋದರೂ. ಯೋಜನಾ ಇಲಾಖೆಯಿಂದ ಹೊರಡಿಸಿದ ನೀತಿ ನಿರೂಪಣೆ, ಸುತ್ತೋಲೆ ಏನಿದೆ ಅದರಲ್ಲಿ ಸ್ಪಷ್ಟವಾಗಿ ಹೇಳಿದೆ. ಆ ದಿಸೆಯಲ್ಲಿ ನಾವು ಹೆಜ್ಜೆ ಇಟ್ಟಿದ್ದೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಒಂದು ವರ್ಷಕ್ಕೆ ತೆಗೆದುಕೊಳ್ಳುತ್ತೀರೋ. ೧೦ ವರ್ಷಕ್ಕೆ ತೆಗೆದುಕೊಳ್ಳುತ್ತೀರೋ ಎಂಬುದನ್ನು ಇವತ್ತು ಹೇಳಿ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅವಧಿಯನ್ನು ಹೇಳುವುದಕ್ಕಾಗುವುದಿಲ್ಲ. ಸಾವಿರಾರು ಕೋಟಿ ರೂಪಾಯಿಗಳನ್ನು ಇದಕ್ಕೆ ಖರ್ಚು ಮಾಡಬೇಕಾಗಿದೆ. ಆದುದರಿಂದ ಅವಧಿ ಹೇಳುವ ಅವಶ್ಯಕತೆ ಇಲ್ಲ. ಇದು ಸರಿ ಬರಬೇಕಾದರೆ ಸಾವಿರಾರು ಕೋಟಿ ಖರ್ಚು ಮಾಡಬೇಕಾಗುತ್ತದೆ. ಈ ದಿಸೆಯಲ್ಲಿ ಈಗಾಗಲೇ ಹೆಜ್ಜೆ ಇಟ್ಟಿದ್ದೇವೆ. ಇರತಕ್ಕಂಥ ಸಂಪನ್ಮೂಲವನ್ನು ನಾವು ಖರ್ಚು ಮಾಡುವಾಗ. ಹಿಂದುಳಿದ ಪ್ರದೇಶಗಳಿಗೆ. ಬ್ಯಾಕ್‌ಲಾಗ್ ಇರುವ ಕಡೆಗಳಿಗೆ ಆದ್ಯತೆ ಕೊಡುತ್ತಿದ್ದೇವೆ. ವರ್ಷೇ ವರ್ಷೇ ಇದನ್ನು ಹೆಚ್ಚಿಸತಕ್ಕದ್ದು ಸರಕಾರದ ಕರ್ತವ್ಯ. ಸರಕಾರಕ್ಕೆ ಮನಸ್ಸಿದೆ. ವಿಲ್ ಇದೆ. ಆದರೆ ಸ್ವಲ್ಪ ಹಣಕಾಸಿನ ತೊಂದರೆ ಮಾತ್ರ ಇದೆ.

ಶ್ರೀ ಎಸ್. ಎಸ್. ಕಡಪಟ್ಟಿ.—ಯಾವಾಗಲಿಂದ ಕೊಡುವುದಕ್ಕೆ ಪ್ರಾರಂಭ ಮಾಡುತ್ತೀರಿ ಹೇಳಿರಿ?

ಶ್ರೀ ಎಸ್. ಆರ್. ಬೊಮ್ಮಾಯಿ.—ಹೋದವರ್ಷದಿಂದ ಪ್ರಾರಂಭ ಮಾಡಿದ್ದೇವೆ. ಆ ಸುತ್ತೋಲೆಯನ್ನು ನಾನು ತಮಗೆ ಕೊಡುತ್ತೇನೆ. ಅದರಲ್ಲಿ ನಿರ್ಧಿಷ್ಟವಾಗಿ ಹೇಳಿದ್ದೇವೆ. ಹಿಂದುಳಿದ ಪ್ರದೇಶಗಳಿಗೆ ಎಷ್ಟು ಹಣ ಕೊಡಬೇಕೆಂಬ ಬಗ್ಗೆ ಎಲ್ಲ ಆಧಾರ ಇಟ್ಟುಕೊಂಡು ಒಂದು ನೀತಿಯನ್ನು ರೂಪಿಸಿದ್ದೇವೆ. ಇದನ್ನು ಹೋದ ವರ್ಷದಿಂದ ಪ್ರಾರಂಭ ಮಾಡಿದ್ದೇವೆ. ವರ್ಷೇ ವರ್ಷೇ ಹೆಚ್ಚು ಮಾಡತಕ್ಕ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಡಿ. ಬಸವರಾಜ್ (ಸಕಲೇಶಪುರ).—ಮಾನ್ಯ ಅಧ್ಯಕ್ಷರೇ. ನಮ್ಮ ಮಲೆನಾಡಿನ ವಿಚಾರ ಮಾತನಾಡಬೇಕಾದರೆ. ಇದೇನು ನಮ್ಮ ದುರಾದೃಷ್ಟವೋ ಏನೋ ಗೊತ್ತಿಲ್ಲ. ಹಿಂದೆ ಮೈಸೂರು

ರಾಜ್ಯ ಎಂದು ಇದ್ದಾಗ ಈ ಪ್ರದೇಶವೆಲ್ಲ ಮೈಸೂರು ರಾಜ್ಯದಲ್ಲಿ ಸೇರಿಕೊಂಡಿತ್ತು. ಕರ್ನಾಟಕ ಎಂದು ಆದಮೇಲೆ ನಮ್ಮನ್ನು ಬೈನಾಕ್ಯುಲರ್ ಹಾಕಿಕೊಂಡು ಕೂಡಾ ನೋಡುತ್ತಿಲ್ಲ. ಈ ಮಟ್ಟಕ್ಕೆ ನಾವು ಬಂದಿದ್ದೇವೆ. ಮಾನ್ಯ ಶ್ರೀನಿವಾಸ್‌ರವರು ಇದರ ಬಗ್ಗೆ ಮಾತನಾಡಿದ್ದಾರೆ. ಅವರ ಸಲಹೆಯನ್ನು ತಾವು ಪೂರ್ತಿ ಒಪ್ಪಿಕೊಳ್ಳಬೇಕು. ಸಲಹೆ ಕೇವಲ ಸಲಹೆಯಾಗಿಯೇ ಉಳಿದರೆ ಏನೂ ಉಪಯೋಗ ಇಲ್ಲ. ವೆಸ್ಟರ್ನ್ ಘಾಟ್ಸ್ ಡೆವೆಲಪ್‌ಮೆಂಟ್ ಎಂದು ಹೇಳುತ್ತಿದ್ದಾರೆ. ಆದರೆ ಈ ಘಟ್ಟ ಪ್ರದೇಶಗಳ ಅಭಿವೃದ್ಧಿಗೆ ಹಾಕುತ್ತಿರುವ ಹಣ ಕಣ್ಣಿಗೇ ಕಾಣುತ್ತಿಲ್ಲ. ಮಲೆನಾಡು ಅಭಿವೃದ್ಧಿ ಸಮಿತಿ ಎಂದೂ ಸಹ ಮಾಡಲಾಗಿತ್ತು, ಬಹುಶಃ ಅದು ಸತ್ತೇ ಹೋಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಹೊಸದಾಗಿ ಅದನ್ನು ರಚನೆ ಮಾಡಿ. ಬರೀ ಸಲಹೆಯ ಮೇಲೆ ನಡೆಯುವುದು ಬೇಡ, ಆದಷ್ಟೂ ಹಣ ಕೊಟ್ಟು ಅಭಿವೃದ್ಧಿ ಮಾಡಬೇಕು. ಮತ್ತು ನಾವು ಇಲ್ಲಿ ಏನು ಹೇಳಿದರೂ ಕೂಡಾ, ಈ ಹೈದರಾಬಾದ್ ಕರ್ನಾಟಕದವರ ಸಂಖ್ಯೆ ಜೋರಾಗಿ ಮಲೆನಾಡಿನಿಂದ ಬಂದವರ ಸಂಖ್ಯೆ ಬಹಳ ಕಡಿಮೆಯಾಗಿ ನಮಗೆ ಬಹಳ ಕಷ್ಟವಾಗಿದೆ. ದಯವಿಟ್ಟು ಇದನ್ನು ತಾವು ಸರಿಪಡಿಸಬೇಕೇ ಹೊರತು ಇನ್ನು ಬೇರೆ ಯಾರ ಕೈಯಲ್ಲೂ ಈ ಕೆಲಸ ಆಗುವುದಿಲ್ಲ ಎಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗಾಗಲೇ ನಾನು ಉತ್ತರ ಕೊಟ್ಟಿದ್ದೇನೆ. ಶ್ರೀನಿವಾಸ್‌ರವರು ಮಲೆನಾಡಿನ ವಿಶೇಷ ಸಮಸ್ಯೆಗಳ ಬಗ್ಗೆ ಸಭೆಯನ್ನು ಕರೆದು ಚರ್ಚೆ ಮಾಡಬೇಕೆಂದು ಹೇಳಿದ್ದಾರೆ. ಅದರಂತೆ ಚರ್ಚೆ ಮಾಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ (ಮುಳುಬಾಗಿಲ್).—ಅಧ್ಯಕ್ಷರೇ, ಪ್ಲಾನಿಂಗ್‌ನಲ್ಲಿ ವಿಕೇಂದ್ರೀಕರಣ ಮಾಡಿದ್ದೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ನಮ್ಮ ಏರಿಯಾದಲ್ಲಿ ಅದರಲ್ಲೂ ಸ್ಪೆಷಲ್ ಆಗಿ ಕೋಲಾರ ಜಿಲ್ಲೆಯ ಅನೇಕ ತಾಲ್ಲೂಕುಗಳಲ್ಲಿ ಫಾರೆಸ್ಟ್ ಏರಿಯಾ ಇಲ್ಲ, ಸಿ ಅಂಡ್ ಡಿ ಕ್ಲಾಸ್ ಲ್ಯಾಂಡ್ ಇಲ್ಲ. ಆದರೂ ಕೂಡಾ ಇಲ್ಲಿನ ಮಂಡಲ್ ಪಂಚಾಯತ್‌ಗಳಿಗೆ ಪ್ಲಾನ್ ಮಾಡುವಾಗ ಒಂದು ಪ್ರೊಫಾರ್ಮಾ ಕೊಟ್ಟಿದ್ದೀರಿ. ಅದರಲ್ಲಿ ಫಾರೆಸ್ಟ್‌ಗೆ ೨೫ ಪರ್ಸೆಂಟ್ ಕಂಪಲ್ಸರಿಯಾಗಿ ಖರ್ಚು ಮಾಡಬೇಕೆಂದು ಮಾಡಿದ್ದೀರಿ. ಹೀಗೆ ಬೇರೆ ಬೇರೆಯದೂ ಸೇರಿ ಒಟ್ಟು ೬೫ ಪರ್ಸೆಂಟ್ ಕಂಪಲ್ಸರಿ ಮಾಡಿರುತ್ತೀರಿ. ಇಂಥಿಂತಹ ಐಟಮ್‌ಗಳಿಗೇ ಹಣ ಖರ್ಚು ಮಾಡಬೇಕೆಂದು ಹೇಳಿರುತ್ತೀರಿ. ಆದರೆ ನಮ್ಮ ಜಿಲ್ಲೆಯಲ್ಲಿ ನಾವು ಫಾರೆಸ್ಟನ್ನು ಹುಡುಕಬೇಕು. ಆದುದರಿಂದ ಈ ಪ್ರೊಫಾರ್ಮಾ ಏನು ಫಿಕ್ಸ್ ಮಾಡಿರುತ್ತೀರಿ, ಅದನ್ನು ಸ್ವಲ್ಪ ಸಡಿಲ ಮಾಡಿ. ಲೋಕಲ್ ಪರಿಸ್ಥಿತಿಗನುಗುಣವಾಗಿ ಹಣ ಖರ್ಚು ಮಾಡುವುದಕ್ಕೆ ಅವಕಾಶ ಮಾಡಿ ಕೊಟ್ಟರೆ ಒಳ್ಳೆಯದು. ಇದನ್ನು ಸೀರಿಯಸ್ ಆಗಿ ತಾವು ಯೋಚನೆ ಮಾಡಬೇಕು. ತಾಲ್ಲೂಕು ಸಮಿತಿ ಅಧ್ಯಕ್ಷನಾಗಿ ಎಲ್ಲಾ ೧೨ ಮಂಡಲ್‌ಗಳಲ್ಲೂ ನೋಡಿದ ಮೇಲೆ ಇದು ನನ್ನ ಅನುಭವಕ್ಕೆ ಬಂದಿದೆ. ಪ್ರತಿಯೊಂದು ಮಂಡಲ್‌ನಲ್ಲಿ ನಾವು ಸಿ ಅಂಡ್ ಡಿ ಲ್ಯಾಂಡ್ ಹುಡುಕಬೇಕು. ಇತ್ತೀಚೆಗೆ ಇದಕ್ಕೆ ಎರಡು ಲಕ್ಷ ರೂಪಾಯಿ ಬರುತ್ತದೆ. ಪ್ರತಿ ಮಂಡಲ್‌ನಲ್ಲಿ ೨೫ ಪರ್ಸೆಂಟ್ ಸೋಷಿಯಲ್ ಫಾರೆಸ್ಟ್ರಿಗೆ ಕೊಡಿ ಎಂದರೆ ಅಲ್ಲಿ ಜಮಾನೇ ಇರುವುದಿಲ್ಲ. ಆದರೂ ನೀವು ಅದಕ್ಕೇ ಕೊಡಿ ಎಂದು ಹೇಳುತ್ತೀರಿ, ಇದನ್ನು ಸಡಿಲ ಮಾಡದೇ ಹೋದರೆ ನೀವು ಕೊಡುವ ದುಡ್ಡು ಲ್ಯಾಪ್ಸ್ ಆಗುತ್ತದೆ. ಇಲ್ಲದೇ ಹೋದರೆ ದುರುಪಯೋಗ ಪಡಿಸಿಕೊಳ್ಳಬೇಕಾಗುತ್ತದೆ. ಆದುದರಿಂದ ಇದನ್ನು ರಿವೈಸ್ ಮಾಡಿ ಈ ನಿಯಮವನ್ನು ಸಡಿಲಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ವೆಂಕಟರಾಮಯ್ಯನವರು ಹೇಳುವುದು ಸರಿ ಇದೆ. ಆದರೂ ಈ ಎನ್.ಆರ್.ಇ.ಪಿ. ಮತ್ತು ಆರ್.ಎಲ್.ಇ.ಜಿ.ಪಿ. ಇವುಗಳಿಗೆ ಕೇಂದ್ರ ಸರ್ಕಾರದಿಂದ ಹಣ ಬರುತ್ತದೆ. ಕೇಂದ್ರ ಸರಕಾರ ಅದರಲ್ಲಿ ನಿರೂಪಣೆ ಮಾಡಿಬಿಟ್ಟಿದೆ. ಅಫಾರ್‌ಸ್ಟೇಷನ್‌ಗೆ ಇಷ್ಟು ಖರ್ಚು ಮಾಡಲೇಬೇಕೆಂದು ಅವರು ನಿಗದಿ ಮಾಡಿದ್ದಾರೆ. ಆದ್ದರಿಂದ ರಾಜ್ಯ ಸರಕಾರಕ್ಕೆ ಇದನ್ನು ಸಡಿಲ ಮಾಡುವ ಸ್ವಾತಂತ್ರ್ಯ ಇಲ್ಲ. ನಾನು ಪ್ರಾರಂಭದಲ್ಲೇ ಇದನ್ನು ಹೇಳಿದೆ, ಈ ರಿಜಿಡಿಟಿ ಏನಿದೆ ಇದು ಹೋಗಿ ಅದು ಫ್ಲೆಕ್ಸಿಬಲ್ ಆಗಬೇಕೆಂದು ಹೇಳಿದೆ. ಇದನ್ನೇ ನಾವು ಕೇಂದ್ರದ ಜೊತೆ ವಾದ ಮಾಡುತ್ತಿದ್ದೇವೆ. ಬರಗಾಲದಲ್ಲಿ ನಮಗೆ ಅಫಾರ್‌ಸ್ಟೇಷನ್‌ಗೆ ಸುಮಾರು ೨೦ ಕೋಟಿ ರೂಪಾಯಿ ಕೊಟ್ಟರು. ಮಳೆ ಇಲ್ಲ, ಕೆಲವು ಕಡೆ ಜಮೀನೇ ಇಲ್ಲ, ಹೇಗೆ ಅಫಾರ್‌ಸ್ಟೇಷನ್ ಮಾಡಬೇಕು ಎಂದು ಹೇಳಿದೆವು. In fact, when I brought it to the notice of the Prime

ಎಂದರೆ ನಕ್ಷತ್ರಗಳು ಉದುರುವುದಿಲ್ಲ. ನಾವು ಸುಮ್ಮನೆ ಇದ್ದರೆ ಇನ್ನು ಯಾರೋ ಎತ್ತಿಕೊಳ್ಳುತ್ತಾರೆ. ಮಲೆನಾಡಿನ ಬಗ್ಗೆ ಬೇರೆಯೇ ಆದ ಮಂಡಲಿ ಮಾಡಬೇಕೆಂದು ಮಹಾರಾಜರ ಕಾಲದಿಂದಲೂ ಸಲಹೆಗಳು ಬಂದಿವೆ. Even a Bill was prepared during that Government. ಮಲೆನಾಡು ಅಭಿವೃದ್ಧಿಯಾಗಬೇಕೆಂದು ಒಂದು ಬಿಲ್ ಕೂಡ ತಯಾರು ಮಾಡಿದ್ದರು. ಇಂತಹ ಸಂದರ್ಭದಲ್ಲಿ ಇದರ ಬಗ್ಗೆ ತಾವು ಗಮನಹರಿಸಬೇಕೆಂದು ನೂರಾರು ಸಲ ಹೇಳಿದ್ದೇವೆ. ಅನೇಕ ಜನ ಸ್ನೇಹಿತರು ಕೂಡ ಹೇಳಿದ್ದಾರೆ. ಕಳೆದ ಅಧಿವೇಶನದಲ್ಲಿ ಮಾನ್ಯ ನಜೀರ್‌ಸಾಬ್ ಅವರು ಆ ಭಾಗದ ಎಂ.ಎಲ್.ಎ.ಗಳ ಮೀಟಿಂಗ್ ಅನ್ನು ಕರೆಯುತ್ತೇನೆ ಎಂದು ಹೇಳಿದ್ದರು. ಈ ಅಧಿವೇಶನದಲ್ಲಾದರೂ ಈ ಸಭೆಯನ್ನು ಕರೆದರೆ ಇದಕ್ಕೆ ಏನಾದರೂ ರೂಪ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಯಾವ್ಯಾವ ಪ್ರದೇಶದ ಸಾಧ್ಯತೆ ಏನಿದೆ, ಅಲ್ಲಿಯ ಕಷ್ಟ ಏನಿದೆ, ಅದಕ್ಕೆ ಅನುಗುಣವಾಗಿ ಯೋಜನೆಗಳನ್ನು ಮಾರ್ಪಾಡು ಮಾಡುವುದಕ್ಕೆ, ಸಲಹೆ ಮಾಡುವುದಕ್ಕೆ ಏನಾದರೂ ತಾವು ವ್ಯವಸ್ಥೆ ಮಾಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಶ್ರೀನಿವಾಸ್ ಅವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಆದರೆ ಇದರಲ್ಲಿ ವೆಸ್ಟರ್ನ್ ಘಾಟ್ ಡೆವಲಪ್‌ಮೆಂಟ್ ಎಂದು ಒಂದು ಯೋಜನೆ ಇದೆ. ಈ ಭಾಗದ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದವರು ಕೂಡ ಹಣ ಕೊಡುತ್ತಿದ್ದಾರೆ. ಅದನ್ನು ನಾವು ಖರ್ಚು ಮಾಡುತ್ತಿದ್ದೇವೆ. ಇದು ವಿಶೇಷವಾದಂಥ ಯೋಜನೆ. ಇದರ ಜೊತೆಗೆ ತಾವು ಹೇಳಿದಂತೆ ಕೆಲವು ವಿಶೇಷವಾದಂಥ ಸಮಸ್ಯೆಗಳಿವೆ. ಅದನ್ನು ನಾವು ಚರ್ಚೆ ಮಾಡುತ್ತೇವೆ. ಚರ್ಚೆ ಮಾಡಿ ಏನು ಮಾಡಬೇಕೋ ಅದನ್ನು ಮಾಡುತ್ತೇವೆ. Plan should be integrated plan for the development of the entire State. ಅದರಲ್ಲಿ ಅಂತಹ ವಿಶೇಷವಾದಂಥ ಸಮಸ್ಯೆಗಳು ಇದ್ದ ಪ್ರದೇಶದಲ್ಲಿ ವಿಶೇಷವಾದ ರಿಯಾಯ್ತಿಗಳನ್ನು ಕೊಡುವ ಬಗ್ಗೆ ಆಲೋಚನೆ ಮಾಡಬೇಕಾಗುತ್ತದೆ. ಇದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಹೆಚ್. ವಿಶ್ವನಾಥ ಪಾಟೀಲ್.— ಸನ್ಮಾನ್ಯ ಅಧ್ಯಕ್ಷರೇ, ನಾವು ಹೈದರಾಬಾದ್ ಕರ್ನಾಟಕ ಬೋರ್ಡ್ ಎಂದು ಮಾಡಿ ಎಂದು ಬೊಬ್ಬೆ ಹಾಕುವುದಕ್ಕೆ ಕಾರಣ ಇದೆ. ಅದು ಏನೆಂದರೆ. ಈಗ ಉದಾಹರಣೆಗೆ ಹೇಳಬೇಕಾದರೆ ರೆವಿನ್ಯೂ ಇಲಾಖೆಯನ್ನೇ ತೆಗೆದುಕೊಳ್ಳೋಣ. ಬಜೆಟ್‌ನಲ್ಲಿ ಕೆಲವು ಕಾಮಗಾರಿಗಳನ್ನು ಸೇರಿಸಿಕೊಂಡರು ಆ ಕಾಮಗಾರಿಗಳಿಗೆ ೮೭-೮೮ರ ಬಜೆಟ್‌ನಲ್ಲಿ ದುಡ್ಡನ್ನು ಕೊಟ್ಟಿದ್ದರು ಆದರೆ ಆ ದುಡ್ಡು ಮಾತ್ರ ನಮ್ಮ ಜಿಲ್ಲೆಗೆ ಬೇಕಾದಂಥ ಕೆಲಸಕ್ಕೆ ಬರಲಿಲ್ಲ. ಇದು ಒಂದೇ ಇಲಾಖೆಯಲ್ಲ. ಬೇರೆಬೇರೆ ಇಲಾಖೆಗಳಲ್ಲಿ ಕೂಡ ಇದೇ ರೀತಿ ಆಗುತ್ತದೆ. ಬಜೆಟ್‌ನಲ್ಲಿ ಕಾಮಗಾರಿಗಳನ್ನು ಸೇರಿಸಿ ಒಂದನೇ ಮೂರರಷ್ಟು ಪ್ರಾವಿಜನ್ ಮಾಡಿ ದುಡ್ಡು ಕೊಡುತ್ತಾರೆ. ಅದು ಕೂಡ ಬರುವುದಿಲ್ಲ. ಆದ್ದರಿಂದ ಬೋರ್ಡ್ ಅಂತ ಮಾಡಿದರೆ ಬೋರ್ಡಿಗೆ ಕೊಟ್ಟಂಥ ಹಣವನ್ನು ಹಿಂದಕ್ಕೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಈ ದುಡ್ಡನ್ನು ಸಂಪೂರ್ಣವಾಗಿ ಆ ಜಿಲ್ಲೆಗೇ ಖರ್ಚುಮಾಡಬೇಕಾಗುತ್ತದೆ. ಈ ದೃಷ್ಟಿಯಿಂದಲಾದರೂ ಬೋರ್ಡ್ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮತ್ತು ಎರಡನೆಯದಾಗಿ ಏಳನೇ ಪಂಚವಾರ್ಷಿಕ ಯೋಜನೆ ಮುಗಿಯುತಾ ಬಂದಿದೆ. ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಾದರೂ ಪ್ರತಿವರ್ಷ ನೂರು ಕೋಟಿ ರೂಪಾಯಿಗಳನ್ನು ನಮ್ಮ ಜಿಲ್ಲೆಗೆ ಏಕೆ ಕೊಡಬಾರದು? ಈ ರಾಜ್ಯಯೋಜನೆಯಲ್ಲಿ ಕೊಟ್ಟರೆ ಅದು ಕೂಡ ಮುಟ್ಟುವುದಿಲ್ಲ. ನೂರು ಕೋಟಿ ಅಲ್ಲದಿದ್ದರೂ ೫೦ ಕೋಟಿಯಾದರೂ ಕೊಡಲಿ. ಆಮೇಲೆ ಗಾಡ್ಗೀಳ್ ಫಾರ್ಮುಲಾ ಪ್ರಕಾರ ಡಿಸ್ಟ್ರಿಕ್ಟ್ ಸೆಂಟರ್‌ಗೆ ಹಣ ಬಿಡುಗಡೆ ಮಾಡುತ್ತೇವೆ ಎಂದು ಹೇಳಿದ್ದರು. ೫೦ ಪರ್ಸೆಂಟ್ ವೆಯಿಟೇಜನ್ನು ಪಾಪ್ಯುಲೇಶನ್ ಮೇಲೆ ಕೊಟ್ಟರೆ ನಮ್ಮ ಹಿಂದುಳಿದ ಜಿಲ್ಲೆಗಳು ಪೂರ್ತಿಯಾಗಿ ಹಿಂದೆ ಬೀಳುತ್ತವೆ. ನಮ್ಮ ಜಿಲ್ಲೆ ಆಗ ನಾಲ್ಕನೆಯದ್ದೋ ಐದನೇಯದ್ದೋ ಆಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು, ಮತ್ತು ಮಾನ್ಯ ಸಚಿವರು ಗುಲ್ಬರ್ಗಾ ಜಿಲ್ಲೆಗೆ ಬಂದಾಗ ಗಾಡ್ಗೀಳ್ ಫಾರ್ಮ್ಯುಲಾ ಪ್ರಕಾರ ದುಡ್ಡು ಬಿಡುಗಡೆ ಮಾಡಿದರೆ ಅನ್ಯಾಯವಾಗುತ್ತದೆ ಎಂದು.........

ಉಪಾಧ್ಯಕ್ಷರು.— ಪ್ರಶ್ನೆ ಕೇಳಿ.

ಶ್ರೀ ಹೆಚ್. ವಿಶ್ವನಾಥ ಪಾಟೀಲ್.— ಪ್ರಶ್ನೆಯನ್ನೇ ಕೇಳುತ್ತಿದ್ದೇನೆ. ಡಿಸ್ಟೆನ್ಸ್‌ನ್ನು ಕನ್ಸೀಡರ್ ಮಾಡುತ್ತೇವೆ ಎಂದು ಹೇಳಿದ್ದರು. ದಯವಿಟ್ಟು ಗಾಡ್ಗೀಳ್ ಫಾರ್ಮ್ಯುಲಾ ಪ್ರಕಾರ ಅನುಕೂಲವಾಗುವ ರೀತಿಯಲ್ಲಿ ಸಹಾಯ ಮಾಡುತ್ತೇವೆ ಎಂದು ಸ್ಪಷ್ಟವಾಗಿ ತಿಳಿಸಬೇಕು.

ಮಂಜೂರನೆಯಾದ ಸ್ಟೇಟ್ ಸೆಕ್ಟರ್‌ನಲ್ಲಿ ಕಾಮಗಾರಿಗಳು ನಡೆಯುತ್ತವೆ, ಅದಕ್ಕೆ ಏನು ದುಡ್ಡು ಕೊಡುತ್ತಾರೆ, ಅದನ್ನು ಸಂಪೂರ್ಣವಾಗಿ ಏಕೆ ಬಿಡುಗಡೆ ಮಾಡುತ್ತಿಲ್ಲ? ಸ್ಟೇಟ್ ಪ್ಲಾನ್‌ನಲ್ಲಿ ಕಟ್ ಆಗಿದೆ, ಆದ್ದರಿಂದ ನಿಮಗೆ ಕಟ್ ಮಾಡಿದ್ದೇವೆ ಎಂದು ಹೇಳಿದರೆ ಅದು ೨೦ ಪರ್ಸೆಂಟ್ ಮಾಡುತ್ತೀರೋ ೧೫ ಪರ್ಸೆಂಟ್ ಮಾಡುತ್ತೀರೋ ಎಂದು ಕ್ಲಿಯರ್ ಆಗಿ ಹೇಳಬೇಕು. ೮೦ ಪರ್ಸೆಂಟ್ ಕಟ್ ಮಾಡಿದರೆ ಕೊಡುವುದಕ್ಕಿಂತ ಕೊಡದೇ ಇರುವುದು ಚೆನ್ನಾಗಿರುತ್ತದೆ, ಬೆಣ್ಣೆತೊರೆ ಯೋಜನೆ ಸ್ಟೇಟ್ ಪ್ಲಾನ್‌ನಲ್ಲಿ ಬರುತ್ತದೆ. ೭೭–೭೮ರಲ್ಲಿ ಇದಕ್ಕೆ ನಾಲ್ಕೈದು ಕೋಟಿ ಇಟ್ಟಿದ್ದರೂ ಕೊಟ್ಟಿದ್ದು ಒಂದು ಕೋಟಿ ಮಾತ್ರ. ಸ್ಟೇಟ್ ಸೆಕ್ಟಾರ್‌ನಲ್ಲಿ ಇಷ್ಟು ಕಡಿಮೆ ಕೊಟ್ಟುಕೊಂಡು ಹೋದರೆ ಏನೂ ಪ್ರಯೋಜನ ಆಗುವುದಿಲ್ಲ.

ಶ್ರೀ ಎಸ್ ಆರ್. ಬೊಮ್ಮಾಯಿ.—ಈಗಾಗಲೇ ಇದಕ್ಕೆ ಉತ್ತರ ಕೊಟ್ಟಿದ್ದೇನೆ. ಪ್ಲಾನ್‌ನಲ್ಲಿ ಮತ್ತು ಯಾವ ಯಾವ ಸೆಕ್ಟಾರ್‌ನಲ್ಲಿ ಎಷ್ಟು ಖರ್ಚು ಮಾಡಿದ್ದೀರಿ ಎಂದು ಕೇಳಿದ್ದಾರೆ. ಆ ಭಾಗದಲ್ಲಿ ಸುಮಾರು ೮೦–೯೦ ಪರ್ಸೆಂಟ್ ಹಣ ಖರ್ಚಾಗಿದೆ ಎಂದು ಹೇಳಿದ್ದೇನೆ. ಜಿಲ್ಲಾ ಪರಿಷತ್‌ಗೆ ಕೊಟ್ಟಿದ್ದ ಹಣ ಖರ್ಚಾಗಿಲ್ಲವೆಂದು ಹೇಳುತ್ತಿದ್ದಾರೆ ಗುಲ್ಬರ್ಗಾ ಜಿಲ್ಲೆಗೆ ೧೯೭೭–೭೮ರಲ್ಲಿ ಪ್ರಾವಿಷನ್ ಮಾಡಿದ್ದು ೨ ಕೋಟಿ ೩೮ ಲಕ್ಷ ರೂಪಾಯಿಗಳು, ಖರ್ಚಾದದ್ದು ೨ ಕೋಟಿ, ೨೨ ಲಕ್ಷ ರೂಪಾಯಿಗಳು. ಅಂದರೆ ೯೩ ಪರ್ಸೆಂಟ್ ಹಣ ಖರ್ಚಾಗಿದೆ. ರಾಯಚೂರಿನಲ್ಲಿ ೯೪ ಪರ್ಸೆಂಟ್, ಬಳ್ಳಾರಿಯಲ್ಲಿ ೨೨ ಪರ್ಸೆಂಟ್, ಬೀದರ್‌ನಲ್ಲಿ ೭೩ ಪರ್ಸೆಂಟ್ ಹಣ ಖರ್ಚಾಗಿದೆ. ಆದ್ದರಿಂದ ಮಾನ್ಯ ಸದಸ್ಯರು ೨೫ ಪರ್ಸೆಂಟ್ ಖರ್ಚಾಗಿದೆ ಎಂದು ಹೇಳುವುದು ಸರಿಯಲ್ಲ. ಇನ್ನು ಬೋರ್ಡ್ ಮಾಡುವ ಬಗ್ಗೆ ಹೇಳಿದ್ದಾರೆ, ಇದರ ಬಗ್ಗೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಸಭೆ ಕರೆದು ಚರ್ಚೆ ಮಾಡುತ್ತಿದ್ದೇವೆ. ಬೋರ್ಡ್ ಬಗ್ಗೆ ಕ್ಯಾಬಿನೆಟ್‌ನಲ್ಲಿ ಪಾಸ್ ಮಾಡಿದ್ದೇವೆ. ೧ ಕೋಟಿ ರೂಪಾಯಿ ಪ್ರಾವಿಷನ್ ಮಾಡಿದರೆ, ಬೋರ್ಡ್ ಇಟ್ಟು ಏನು ಪ್ರಯೋಜನ? ಹಣ ಇದ್ದರೆ ಮಾತ್ರ ಬೋರ್ಡ್. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಶೇಷವಾಗಿ ಹಣ ಒದಗಿಸಿದರೆ ಮಾತ್ರ ಇದು ಉಪಯೋಗಕ್ಕೆ ಬರುತ್ತದೆ. ಸುಮ್ಮನೆ ಬೋರ್ಡ್ ಮಾಡುವುದರಿಂದ, ಬರೀ ಬೋರ್ಡಿಗೆ ಹಣ ಖರ್ಚಾಗುತ್ತದೆ......

ಶ್ರೀ ಹೆಚ್. ವಿಶ್ವನಾಥ ಪಾಟೀಲ್.—ಗಾಡ್ಗೀಳ್ ಫಾರ್ಮುಲಾ ಬಗ್ಗೆ ಹೇಳಿ ಮತ್ತು ಡಿಸ್ಟೆನ್ಸ್‌ನ್ನು ಕನ್‌ಸಿಡರೇಷನ್‌ಗೆ ತೆಗೆದುಕೊಳ್ಳುವ ಬಗ್ಗೆ ಹೇಳಿ......

ಶ್ರೀ ಎಸ್. ಆರ್. ಬೊಮ್ಮಾಯಿ.—ಗಾಡ್ಗೀಳ್ ಫಾರ್ಮುಲಾ ಪ್ರಕಾರ ಮಾಡಿಲ್ಲ. ಜಿಲ್ಲಾ ಪರಿಷತ್ತಿಗೆ ನಮ್ಮದೇ ಆದ ನೀತಿ ಇದೆ. ಈ ವಿಷಯಕ್ಕೆ ಸಂಬಂಧಪಟ್ಟಂತ ಸೂತ್ರೋಕ್ತಿಯನ್ನು ಹೊರಡಿಸಿದ್ದೇವೆ. ಅದರ ಪ್ರಕಾರ ಜಿಲ್ಲೆಯ ವಿಸ್ತೀರ್ಣ, ಜನಸಂಖ್ಯೆ ಆಧಾರದ ಮೇಲೆ ಹಣ ಕೊಡುತ್ತೇವೆ.

ಶ್ರೀ ಧರ್ಮಸಿಂಗ್.—೧೯೮೨ರಲ್ಲಿ ಕ್ಯಾಬಿನೆಟ್ ತೀರ್ಮಾನ ಮಾಡಿದೆ. ಆ ರಿಪೋರ್ಟ್ ಮೇಲೆ, ಮಾನ್ಯ ವಿಶ್ವನಾಥ ಪಾಟೀಲ್‌ರವರು ಹೇಳಿದಹಾಗೆ. ವಿವರವಾಗಿ ಚರ್ಚೆ ಮಾಡಿದ್ದೇವೆ. ಈ ರಿಪೋರ್ಟ್‌ಗಿಂತ ಹೊಸದಾಗಿ ಪ್ರಿಪೇರ್ ಮಾಡುವುದು ಏನೂ ಇಲ್ಲ. ಅಂಕಿಅಂಶಗಳ ಆಧಾರದಮೇಲೆಯೇ ರಿಪೋರ್ಟ್ ಕೊಟ್ಟಿದ್ದೇವೆ. ಅದನ್ನು ಸರ್ಕಾರವೂ ಒಪ್ಪಿದೆ. ನೀವೂ ಒಪ್ಪಿದ್ದೀರಿ. ಮುಂದೆ ಹೇಗೆ ಮಾಡಬೇಕು ಎಂಬ ಬಗ್ಗೆ ಒಂದು ಸಭೆ ಕರೆದು. ಅಲ್ಲಿ ಚರ್ಚೆ ಮಾಡಬೇಕಾಗಿದೆ.

† ಶ್ರೀ ಎಸ್. ಎಸ್. ಕಡಪಟ್ಟಿ.—ಅಧ್ಯಕ್ಷರೇ. ಮಹಾರಾಷ್ಟ್ರದಲ್ಲಿ ರೀಜನಲ್ ಇಂಬ್ಯಾಲೆನ್ಸ್ ಎಲ್ಲಾ ಮಟ್ಟದಲ್ಲೂ. ಎಲ್ಲಾ ಇಲಾಖೆಗಳಲ್ಲೂ ಇದ್ದುದನ್ನು ಮನಗಂಡರು. ಆ ರೀಜನಲ್ ಇಂಬ್ಯಾಲೆನ್ಸ್ ಅನ್ನು ಸಂಪೂರ್ಣವಾಗಿ ಅಭ್ಯಾಸ ಮಾಡುವುದಕ್ಕೆ ಏನು ವ್ಯವಸ್ಥೆ ಮಾಡಿದ್ದಾರೆ. ಅದೇರೀತಿ ನಾವು ಮಾಡುವುದು ಬೇಡ. ಪ್ಲಾನಿಂಗ್‌ನವರು ಏನು ಮಾಡಿದ್ದಾರೆ. ಅದರ ಮೇಲೆ ಏನು ಬ್ಯಾಕ್‌ಲಾಗ್ ಇದೆ, ಅದನ್ನು ಸಂಪೂರ್ಣವಾಗಿ ಸರಿಪಡಿಸುತ್ತೇವೆಂಬುದನ್ನು ಹೇಳಬೇಕು. ೫ ವರ್ಷದೊಳಗೆ ಆಗುತ್ತದೋ ೪ ವರ್ಷದೊಳಗೆ ಆಗುತ್ತದೋ ಎಂಬುದನ್ನು ನಿಶ್ಚಿತವಾಗಿ ಹೇಳುವಂಥ ಒಂದು

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

Minister, when he visited here, ಆಗ ಮಾತ್ರ ಇದನ್ನು ರಿಲೀಸ್ ಮಾಡಿದರು. ನೀವು ಇದೊಂದು ವರ್ಷದ ಮಟ್ಟಿಗೆ ಇದನ್ನು ನೀರಾವರಿಗೆ, ಕೆರೆಗಳ ಹೂಳು ತೆಗೆಯುವುದಕ್ಕೆ ಉಪಯೋಗಿಸಿ ಕೊಳ್ಳಿ ಎಂದರು, ಒಂದು ಸಲ ಅವಕಾಶ ಸಿಕ್ಕಿತು. ನಾವು ಕೇಂದ್ರ ಸರಕಾರಕ್ಕೆ ಒತ್ತಾಯ ಮಾಡುತ್ತಿದ್ದೇವೆ. ಫ್ಲೆಕ್ಸಿಬಿಲಿಟಿ ಇರಬೇಕೆಂದು ಹೇಳುತ್ತಿದ್ದೇವೆ. ಆದ್ದರಿಂದ ಇದು ಸಧ್ಯಕ್ಕೆ ಸಾಧ್ಯವಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ನಾವು ಆ ಹಣವನ್ನು ಏನು ಮಾಡಬೇಕು ? ಲ್ಯಾಪ್ಸ್ ಮಾಡಬೇಕಾಗುತ್ತದೆ. ಮೊದಲೇ ದುಡ್ಡು ಬರುವುದು ಕಡಿಮೆ, ಅದನ್ನೂ ಲ್ಯಾಪ್ಸ್ ಮಾಡಬೇಕು. ಇಲ್ಲದೇ ಹೋದರೆ ಯಾರಿಗಾದರೂ ಅವಕಾಶ ಕೊಟ್ಟು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರನ್ನು ತಂದು ಬಿಟ್ಟು, ಕಣಿ ಆಗದಿದೆ ಎಂದು ಶಿಂದುಬಿಡಿ ಎಂದು ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ಕೂಲ್ ಗಾರ್ಡನ್ ಮಾಡಲು ಮತ್ತು ವಿಲೇಜ್ ಪಂಚಾಯತ್ ಗಾರ್ಡನ್ ಮಾಡಲು ಎಷ್ಟು ಸಾಧ್ಯವೋ ಅಷ್ಟನ್ನು ಖರ್ಚು ಮಾಡಬೇಕಾಗುತ್ತದೆ. ಕೇಂದ್ರದ ನೀತಿ ಬದಲಾವಣೆ ಆಗುವವರೆಗೆ ಈ ರೀತಿ ಮಾಡಬೇಕಾಗುತ್ತದೆ.

ಶ್ರೀ ಪಟಪಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೇ, ಈಗ ಯೋಜನೆಗೆ ಸಂಬಂಧಪಟ್ಟಂತೆ ನಮ್ಮ ಮಾನ್ಯ ಸದಸ್ಯರಾದ ಶ್ರೀ ಕೆ.ಹೆಚ್. ಶ್ರೀನಿವಾಸ್‌ರವರು ಮಾತನಾಡುತ್ತಾ ಮಲೆನಾಡು ಅಭಿವೃದ್ಧಿಗೆ ಸಂಬಂಧಪಟ್ಟಂತೆ ಅನೇಕ ವಿಷಯಗಳನ್ನು ತಮ್ಮ ಗಮನಕ್ಕೆ ತಂದಿದ್ದಾರೆ. ಈಗ ಮಲೆನಾಡು ಅಭಿವೃದ್ಧಿಗೆ ಇರತಕ್ಕಂಥ ಯೋಜನೆಗಳು ಮೂಗಿಗೆ ತುಪ್ಪ ಹಚ್ಚಿದಂತೆ, ಒಂದೆರಡು ಕಾಲು ಸೇತುವೆ ಗಳನ್ನು ಒಂದೆರಡು ರಸ್ತೆಗಳನ್ನು ಕೊಟ್ಟ ತಕ್ಷಣ ಸಮಗ್ರ ಮಲೆನಾಡು ಅಭಿವೃದ್ಧಿಯಾಗುವುದಿಲ್ಲ. ಇದನ್ನು ದಯಮಾಡಿ ಮಂತ್ರಿಗಳು ತಿಳಿದುಕೊಳ್ಳಬೇಕು. ಈಗ ತಾವು ಅಧಿಕಾರ ವಿಕೇಂದ್ರೀಕರಣದ ತುತ್ತೂರಿಯನ್ನು ಊದಿದ್ದೀರಿ. ಅದೇ ರೀತಿ ಯೋಜನಾ ವಿಕೇಂದ್ರೀಕರಣದ ತುತ್ತೂರಿಯನ್ನು ಮಲೆನಾಡಿನವರೆವಿಗೂ ಊದುತ್ತೀರಾ? ಅಥವಾ ಈ ಬಗ್ಗೆ ಚಿಂತನೆ ಏನಾದರೂ ಮಾಡುತ್ತೀರಾ ? ಅಲ್ಲಿರತಕ್ಕಂಥ ಮಲೆನಾಡು ಅಭಿವೃದ್ಧಿಯ ಸಾಧ್ಯತೆ ಆದ್ಯತೆಗೆ ಗಮನ ಕೊಟ್ಟರೆ ಆಗ ಖಂಡಿತವಾಗಿ ಮಲೆನಾಡು ಅಭಿವೃದ್ಧಿಯಾಗುತ್ತದೆ, ಇಲ್ಲದಿದ್ದರೆ ಆಗುವುದಿಲ್ಲ ಈ ಬಗ್ಗೆ ದಯಮಾಡಿ ಉತ್ತರ ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ತುತ್ತೂರಿಯನ್ನು ಬೆಂಗಳೂರಿನಲ್ಲಿ ಮಾತ್ರವಲ್ಲ ಅಲ್ಲಿಯ ವರೆವಿಗೂ ಊದಬೇಕೆನ್ನುವುದೇ ನಮ್ಮ ಮನಸ್ಸು. ಈ ದಿಸೆಯಲ್ಲಿಯೇ ನಾವು ವಿಕೇಂದ್ರೀಕರಣ ನೀತಿ ಯನ್ನು ಹಾಕಿಕೊಂಡಿರುವುದು. ಮತ್ತು ತಾವು ಹೇಳಿದ ಬಗ್ಗೆ ಆ ಭಾಗದ ಶಾಸಕರನ್ನು ಕರೆದು ಚರ್ಚೆ ಮಾಡಿ ಆಲೋಚನೆ ಮಾಡೋಣ.

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ಅತಿ ಮುಖ್ಯವಾಗಿ ನಾನು ಕಂದಾಯ ಇಲಾಖೆಗೆ ಸಂಬಂಧಪಟ್ಟಂತೆ ಕೇಳುತ್ತೇನೆ. ನಮ್ಮ ರಾಜ್ಯದ ಆಸ್ತಿ ವಿವರವಾದ ರೀತಿಯಲ್ಲಿ ಟಿಪ್ಪಣಿ, ಪಟ್ಟಿ ಇರುವುದು ಬಹಳ ಮುಖ್ಯ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಂದಾಯ ಇಲಾಖಾ ಬೇಡಿಕೆ ಮೇಲೆ ನಾನು ಇನ್ನು ಉತ್ತರ ಕೊಟ್ಟಿಲ್ಲ.

ಶ್ರೀ ಕೆ. ಮಲ್ಲಪ್ಪ.—ಹಾಗಾದರೆ ನಾನು ಆಮೇಲೆ ಕೇಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಮಲೆನಾಡು ಅಭಿವೃದ್ಧಿಗೆ ಒದಗಿಸಿರತಕ್ಕಂಥ ಹಣ ಹೆಚ್ಚು ಭಾಗ ಚನ್ನಗಿರಿ, ಹೊನ್ನಾಳಿ ಇಂತಹ ಬಯಲು ಸೀಮೆ ಪ್ರದೇಶಗಳಿಗೆ ಹೆಚ್ಚು ಹೋಗುತ್ತದೆ. ಈ ಬಗ್ಗೆ ನಾವು ಜಿಲ್ಲಾ ಪರಿಷತ್ ಸಭೆಯಲ್ಲಿಯೂ ಚರ್ಚೆ ಮಾಡಿದ್ದೇವೆ. ಇದರಲ್ಲಿ ಮಂತ್ರಿಗಳ ಪ್ರಭಾವ ದಿಂದಲೂ ಅಥವಾ ಅಧಿಕಾರಿಗಳ ಕೈ ಚಳಕದಿಂದಲೂ ಹೆಚ್ಚು ಹಣ ಈ ಭಾಗಕ್ಕೆ ಖರ್ಚು ಆಗುತ್ತಿದೆ. ಪಶ್ಚಿಮಘಟ್ಟಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ ಕಾಲು ಸೇತುವೆಗಳನ್ನು ಮಾಡಿದ್ದಾರೆ. ನಮ್ಮ ಭಾಗದಲ್ಲಿ ಒಂದು ಕಡೆ ಮಾತ್ರ ಅಪ್ರೋಚ್‌ಗಳು ಆಗಿವೆ. ಇಲ್ಲಿ ಗಾಡಿಗಳು ಹೋಗುವುದಕ್ಕೆ ಆಗುವುದಿಲ್ಲ, ವಾಹನಗಳು ಹೋಗುವುದಕ್ಕೆ ಆಗುವುದಿಲ್ಲ. ಬೇಕಾದರೆ ನಾನು ಆ ಬಗ್ಗೆ ದಾಖಲೆಗಳು

ಕೊಡುತ್ತೇನೆ. ಶಿವಮೊಗ್ಗದ ಹತ್ತಿರ ಒಂದು ಸೇತುವೆ ಕಟ್ಟಿದ್ದಾರೆ. ತುಂಗಭದ್ರಾ ಹತ್ತಿರ ಒಂದು ಸೇತುವೆಯನ್ನು ಕಟ್ಟಿದ್ದಾರೆ. ಇಲ್ಲಿ ಬೀದಿಗಳಲ್ಲಿ ಅಪ್ರೋಚ್‌ಗಳು ಆಗಿಲ್ಲ. ಇಂತಹ ಕೆಲಸ ಏತಕ್ಕೆ ಮಾಡಬೇಕು? ಮತ್ತೆ ಸಭೆ ಕರೆಯುತ್ತೇನೆಂದು ಮಾನ್ಯ ಮಂತ್ರಿಗಳು ಹೇಳಿದರು, ಯಾವಾಗ ಸಭೆ ಕರೆದು ಚರ್ಚೆಮಾಡುತ್ತೀರೆಂದು ನಿಖರವಾಗಿ ಹೇಳಬೇಕು?

ಶ್ರೀ ಎಸ್. ಆರ್ ಬೊಮ್ಮಾಯಿ.—ಶಾಸನ ಸಭೆ ಮುಗಿಯುವಷ್ಟರಲ್ಲಿ.

ಶ್ರೀ ಎನ್. ಎಸ್. ಖೇಡ್.—ನಾನು ಮಾನ್ಯ ಮಂತ್ರಿಗಳಲ್ಲಿ ಕಳೆದ ಮೂರು ವರ್ಷಗಳಿಂದ ರಾಜ್ಯದ ಹಿತದೃಷ್ಟಿಯಿಂದ ಒಂದು ವಿಷಯವನ್ನು ಅವರ ನಜರಿಗೆ ತರುತ್ತಿದ್ದೇನೆ. ಏನೆಂದರೆ, ಈ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಕೊರತೆ ಬಹಳ ಇರುವುದರಿಂದ ಹೊಸ ಮಾಡ್ರನ್ ಟೆಕ್ನಾಲಜಿ ಸೋಲಾರ್ ಎನರ್ಜಿ ಬಗ್ಗೆ ನಮ್ಮ ನೆರೆಹೊರೆಯ ರಾಜ್ಯಗಳಾದ ಆಂಧ್ರಪ್ರದೇಶ್ ಮತ್ತು ತಮಿಳುನಾಡುಗಳಲ್ಲಿ ೩೦೦—೪೦೦ ಕೋಟಿ ರೂಪಾಯಿಗಳ ಒಂದು ಅಂದಾಜು ತಯಾರಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟು ಅದನ್ನು ಅಪ್ರೂವ್ ಮಾಡಿಸಿಕೊಂಡು ಈಗ ಕೆಲಸ ಪ್ರಾರಂಭ ಮಾಡುತ್ತಿದ್ದಾರೆ. ನಮ್ಮ ರಾಜ್ಯ ವಿದ್ಯುಚ್ಛಕ್ತಿಯಲ್ಲಿ ತೊಂದರೆ ಇರತಕ್ಕಂಥ ರಾಜ್ಯ. ಈ ಕೆಲಸವನ್ನು ಕಳೆದ ಮೂರು ವರ್ಷಗಳಿಂದ ಮಾಡಲಾಗಲಿಲ್ಲ. ನಾನು ಮಾನ್ಯ ಮಂತ್ರಿಗಳಿಗೆ ಒಂದು ಬುಕ್‌ಲೆಟ್ ಸಹ ತಂದು ತೋರಿಸಿದೆ. ಆಗ ಅವರು ಹೇಳಿದರು, ಇದರಲ್ಲಿ ನ್ಯೂನ್ಯತೆಗಳು ಇವೆ ಸರಿಪಡಿಸುತ್ತೇನೆಂದರು. ಮೂರು ವರ್ಷಗಳಾದವು ಇದುವರೆವಿಗೂ ಆಗಲಿಲ್ಲ. ಮಾನ್ಯ ಮಂತ್ರಿಗಳು ರವಿನ್ಯೂ ಹಾಗೂ ಪ್ಲಾನಿಂಗ್ ಮಂತ್ರಿಗಳು ಸಹ ಆಗಿದ್ದಾರೆ. ಈ ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಮಾನ್ಯ ಮಂತ್ರಿಗಳು ಎರಡು ಖಾತೆಗಳ ಜವಾಬ್ದಾರಿಯನ್ನು ಹೊತ್ತಿರುವುದರಿಂದ ಅವರೇ ಇದಕ್ಕೆ ಉತ್ತರ ಕೊಡಬೇಕು. ಮತ್ತು ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಸಾರಿ ವಿಜಿಟ್ ಮಾಡಿ ಅವರ ಖಾತೆಗಳಿಗೆ ಸಂಬಂಧಪಟ್ಟಂತೆ ರಿವ್ಯೂ ಮಾಡಿದ್ದಾರೆಂಬುದನ್ನು ತಿಳಿಸಬೇಕು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಸೋಲಾರ್ ಎನರ್ಜಿ ಬಗ್ಗೆ ಎರಡು ಅಭಿಪ್ರಾಯಗಳು ಇವೆ. ಆಂಧ್ರಪ್ರದೇಶದವರು ಎಷ್ಟು ಮಾಡಿದ್ದಾರೆ ? ಅದು ಎಷ್ಟು ಪ್ರಗತಿಯಾಗಿದೆ ಎಂಬುದನ್ನು ನೋಡೋಣ. ಈ ವಿಚಾರದಲ್ಲಿ ನಾನು ಪವರ್ ಮಿನಿಸ್ಟರ್‌ಗೆ ಹೇಳಿದ್ದೇನೆ. ಇದರಲ್ಲಿ ಎರಡು ಅಭಿಪ್ರಾಯಗಳು ಇವೆ. ಈಗ ನಮ್ಮಲ್ಲಿಯೂ ಸಹ ಎರಡು ಸಂಸ್ಥೆಗಳವರು ಮಾಡಿದ್ದಾರೆ. ಪವರ್ ಮಂತ್ರಿಗಳ ಜೊತೆ ಅವರು ಚರ್ಚೆಮಾಡಿದ್ದಾರೆ. ಪವರ್ ಡಿಮ್ಯಾಂಡ್ಸ್ ಬಂದಾಗ ಈ ಬಗ್ಗೆ ವಿವರವಾದ ಉತ್ತರ ಕೊಡುವುದಕ್ಕೆ ಹೇಳುತ್ತೇನೆ. ನಾನು ಎಷ್ಟು ಸಲ ಎಷ್ಟು ಜಿಲ್ಲೆಗಳಿಗೆ ಪ್ರವಾಸ ಮಾಡಿದ್ದೇನೆ. ಎನ್ನುವುದನ್ನು ಕಂದಾಯ ಇಲಾಖೆಯ ಬೇಡಿಕೆಗಳು ಚರ್ಚೆಗೆ ಬಂದಾಗ ಮತ್ತು ಅದಕ್ಕೆ ಉತ್ತರ ಹೇಳುವಾಗ ನಾನು ಪ್ರವಾಸ ಹೋಗಿರುವ ಒಂದು ಪಟ್ಟಿಯನ್ನು ಕೊಡುತ್ತೇನೆ.

ಶ್ರೀ ಎನ್. ಎಸ್. ಖೇಡ್.—ಪ್ಲಾನಿಂಗ್ ಸಲುವಾಗಿಯೇ ನಾನು ಕೇಳುತ್ತಿದ್ದೇನೆ. ಸೋಲಾರ್ ಎನರ್ಜಿ ಬಗ್ಗೆ ನಾನು ನಿಮಗೆ ಒಂದು ಬುಕ್‌ಲೆಟ್ ಕೊಟ್ಟಿದ್ದೆ. ತಾವು ಅದನ್ನು ನೋಡಿದ್ದೀರಿ. ಸೋಲಾರ್ ಎನರ್ಜಿಯನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಈಗಾಗಲೇ ರೀಸರ್ಚ್ ನಡೆದಿದೆ. ಇದರ ಬಗ್ಗೆ ಸಾಕಷ್ಟು ಚರ್ಚೆಯೂ ಆಗಿದೆ. ನಮ್ಮ ರಾಜ್ಯ ಸರ್ಕಾರ ಸೋಲಾರ್ ಎನರ್ಜಿಯನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದೆ ಎಂದು ನಾನು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸೋಲಾರ್ ಎನರ್ಜಿಯನ್ನು ಉಪಯೋಗ ಮಾಡಿಕೊಳ್ಳುವ ಬಗ್ಗೆ ಬಹಳ ಚರ್ಚೆಯಾಗಿದೆ. ಸೋಲಾರ್ ಎನರ್ಜಿಯು ಇನ್ನೂ ಯಶಸ್ವಿಯಾಗಿಲ್ಲ. ಪ್ರಯೋಗ ಇನ್ನೂ ನಡೆಯುತ್ತಿದೆ. ಪವರ್ ಬಗ್ಗೆ ಡಿಮ್ಯಾಂಡ್ ಬಂದಾಗ ಸೋಲಾರ್ ಎನರ್ಜಿ ಬಗ್ಗೆ ಮಾನ್ಯ ಸದಸ್ಯರು ಪವರ್ ಮಿನಿಸ್ಟರ್‌ರವರ ಗಮನವನ್ನು ಸೆಳೆಯ ಬಹುದು. ಆಗ ಪವರ್ ಮಿನಿಸ್ಟರ್‌ರವರು ಅದರ ಬಗ್ಗೆ ಹೇಳುತ್ತಾರೆ.

ಶ್ರೀ ಪಂಪಾಪತಿ.—ಅಧ್ಯಕ್ಷರೇ, ಮಾನ್ಯ ಸಚಿವರು ಯೋಜನಾ ಇಲಾಖೆ ಬಗ್ಗೆ ಸಾಕಷ್ಟು ವಿಷಯಂಗಳನ್ನು ತಿಳಿಸಿದ್ದಾರೆ. ಆದರೆ, ಭದ್ರಾ ಅಣೆಕಟ್ಟು ಕಟ್ಟುವುದರ ಕೆಲಸ ಪ್ರಾರಂಭವಾಗಿ ಇಪ್ಪತ್ತು ಅಥವಾ ಇಪ್ಪತ್ತೈದು ವರ್ಷಗಳಾಗಿರಬಹುದು. ನೀರಾವರಿ ಕೆಲಸ ಕಾರ್ಯಗಳು ಈಗ ಕಾರ್ಯಗತಗೊಂಡಿವೆ, ಭದ್ರಾ ಜಲಾಶಯದಿಂದ ನೀರು ಹೋಗುವ ಕಾಲುವೆಗಳನ್ನು ಸರಿಪಡಿಸುವುದಕ್ಕೆ ಹೆಚ್ಚಿನ ಹಣವನ್ನು ಒದಗಿಸಿದರೆ ಒಳ್ಳೆಯದು. ಹಣ ಇಲ್ಲದಿದ್ದರೆ ಏನೂ ಕೆಲಸವಾಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಹಣ ಬಿಡುಗಡೆ ಮಾಡುವ ವಿಷಯ ಹಣಕಾಸು ಇಲಾಖೆಯ ಬೇಡಿಕೆಗೆ ಸಂಬಂಧಿಸಿರುತ್ತದೆ. ಪ್ಲಾನಿಂಗ್ ಡಿಪಾರ್ಟ್‌ಮೆಂಟಿಗೆ ಹಣ ಬಿಡುಗಡೆ ಮಾಡುವ ಅಧಿಕಾರ ಇರುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ 20 ಪರ್ಸೆಂಟ್‌ನಷ್ಟು ಜನರು ಹಳ್ಳಿಗಳಲ್ಲಿ ವಾಸ ಮಾಡುತ್ತಾರೆ. ಹಳ್ಳಿಗಳ ಅಭಿವೃದ್ಧಿಗಾಗಿ ಈ ವರ್ಷ ಏನು ಹಣ ಇಟ್ಟಿದೆಯೋ ಅದರ ಬಗ್ಗೆ ತಮಗೆ ತೃಪ್ತಿ ಇದೆಯೇ ಎಂದು ಕೇಳುತ್ತೇನೆ. ಕಡಿಮೆ ಹಣವನ್ನು ಕೊಡುವುದರಿಂದ ಏನು ಕೆಲಸವಾಗುತ್ತದೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನನಗೆ ತೃಪ್ತಿ ಇದೆಯೆಂದು ನಾನು ಹೇಳುವುದಿಲ್ಲ. ನಾನು ಉತ್ತರ ಕೊಡುವಾಗ ಎಲ್ಲಾ ವಿಷಯಗಳನ್ನು ಅಂಕಿ ಸಂಖ್ಯೆಗಳನ್ನು ಕೊಡುವುದರ ಮೂಲಕವೇ ಹೇಳಿದ್ದೇನೆ. ಹೋದ ವರ್ಷ ಹಳ್ಳಿಗಳ ಅಭಿವೃದ್ಧಿಗಾಗಿ ೧೨ ಪರ್ಸೆಂಟ್ ಹಣವನ್ನು ಖರ್ಚು ಮಾಡಿದ್ದೇವೆ. ಈ ವರ್ಷವೂ ನಾವು ಹಳ್ಳಿಗಳ ಅಭಿವೃದ್ಧಿಗೆ ಖರ್ಚಾಗುವ ಹಣದಲ್ಲಿ ಕಟ್ ಮಾಡಿಲ್ಲ.

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಕಂದಾಯ ಮತ್ತು ಪ್ಲಾನಿಂಗ್ ಮಂತ್ರಿಗಳಾದ ಶ್ರೀ ಬೊಮ್ಮಾಯಿಯವರು ಉತ್ತರ ಕೊಟ್ಟಿದ್ದಾರೆ. ನಾನು ಅವರನ್ನು ಕೇಳುವುದೇನೆಂದರೆ, ಜಿಲ್ಲಾ ಉಸ್ತುವಾರಿ ಮಂತ್ರಿಗಳು ಆಯಾ ಜಿಲ್ಲೆಗೆ ಸರಿಯಾಗಿ ಭೇಟಿ ಕೊಡದೆ ಜಿಲ್ಲೆಯ ಉಸ್ತುವಾರಿಯನ್ನು ಏಕೆ ಮಾಡುತ್ತಿಲ್ಲ ? ಮತ್ತು ಕೋ-ಆಪರೇಟಿವ್ ಶುಗರ್ ಇಂಡಸ್ಟ್ರೀಗಳು ಕರ್ನಾಟಕದಲ್ಲಿ ತುಂಬಾ ಹದಗೆಟ್ಟಿವೆ. ಈ ಹದಗೆಟ್ಟ ಶುಗರ್ ಇಂಡಸ್ಟ್ರೀಗಳನ್ನು ಸರಿಯಾದಂಥ ಇಂಡಸ್ಟ್ರೀಗಳಾಗಿ ಮಾಡುವುದಕ್ಕೆ ತಾವು ಏನು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಜಿಲ್ಲಾ ಉಸ್ತುವಾರಿ ಮಂತ್ರಿಗಳು ಅವರವರ ಜಿಲ್ಲೆಗೆ ಎಷ್ಟು ಸಾರಿ ಪ್ರವಾಸ ಮಾಡಿದ್ದಾರೆಂಬ ಬಗ್ಗೆ ನನ್ನ ಹತ್ತಿರ ಈಗ ವಿವರಗಳು ಇಲ್ಲ. ಆಮೇಲೆ ಸಿಕ್ ಶುಗರ್ ಫ್ಯಾಕ್ಟರಿಗಳ ಪುನರ್‌ವಸತಿ ಮಾಡುವ ವಿಚಾರ ಕ್ಯಾಬಿನೆಟ್ ಸಬ್ ಕಮಿಟಿ ಮುಂದೆ ಇದೆ. ಈ ಸಭೆಯು ಎರಡು ಸಾರಿ ಸಭೆ ಸೇರಿ ಚರ್ಚೆ ಮಾಡಿದೆ. ಇದರ ಬಗ್ಗೆ ಎಕ್ಸ್‌ಪರ್ಟ್‌ಗಳ ಅಭಿಪ್ರಾಯವನ್ನು ಪಡೆಯಲಾಗುತ್ತದೆ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನರ ಕಲ್ಯಾಣ ಕೆಲಸಗಳಿಗೆ ಎಲ್ಲಾ ಜಿಲ್ಲಾಪರಿಷತ್ತುಗಳಿಗೂ ಹಣವನ್ನು ಬಿಡುಗಡೆ ಮಾಡಿರುವ ಬಗ್ಗೆ ಬಜೆಟ್‌ನಲ್ಲಿ ತೋರಿಸುತ್ತೀರಿ. ವಿಶೇಷ ಘಟಕ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರುಗಳಿಗೆ ಎಷ್ಟು ಹಣವನ್ನು ಖರ್ಚು ಮಾಡಬೇಕೆಂದು ಸರ್ಕಾರ ತಿಳಿಸಿರುತ್ತದೆಯೋ ಅಷ್ಟು ಹಣವನ್ನು ಜಿಲ್ಲಾಪರಿಷತ್ತಿನವರು ಖರ್ಚು ಮಾಡಿಲ್ಲ ಎಂಬುದೇ ನನ್ನ ಆಪಾದನೆ. ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ವಿಶೇಷ ಘಟಕ ಯೋಜನೆಯಲ್ಲಿ ಅಲಾಟ್ ಆಗಿರತಕ್ಕ ಹಣದಲ್ಲಿ ೨೫ ಪರ್ಸೆಂಟ್ ಹಣವನ್ನು ಸಹ ಯಾವ ಇಲಾಖೆಯವರೂ ಖರ್ಚು ಮಾಡಿಲ್ಲ. ಇದರ ಬಗ್ಗೆ ತಾವು ರಿವ್ಯೂ ಮಾಡಿದ್ದೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಬಗ್ಗೆ ವಿವರಗಳು ನನ್ನ ಹತ್ತಿರ ಇಲ್ಲ. ರಾಜ್ಯದಲ್ಲಿ ಸರಾಸರಿ ೬ ಪರ್ಸೆಂಟ್ ಹಣವನ್ನು ಇದಕ್ಕಾಗಿ ಖರ್ಚು ಮಾಡಿದ್ದೇವೆ. ಜಿಲ್ಲಾವಾರು ವಿವರಗಳು ನನ್ನ ಹತ್ತಿರ ಇಲ್ಲ.

ಶ್ರೀ ಯು. ಭೂಪತಿ.—ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ವಿಶೇಷ ಘಟಕ ಯೋಜನೆ ಪ್ರಕಾರ ಎಷ್ಟು ಮೊತ್ತವನ್ನು ಅಲಾಟ್ ಮಾಡಿದ್ದೀರಿ ? ಅದರ ಗುರಿ ಸಾಧನೆಯನ್ನು ಯಾವ ಯಾವ ಜಿಲ್ಲಾಪರಿಷತ್‌ನಲ್ಲಿ ಮಾಡಿಲ್ಲ ಏಕೆಂದರೆ, ಆ ಸಾಧನೆಯು ಗುರಿ ಮುಟ್ಟಿಲ್ಲ ಎಂದು ನನ್ನ

ಆಪಾದನೆಯಾಗಿದೆ. ಸ್ಪೆಷಲ್ ಕಾಂಪೋನೆಂಟ್ ಸ್ಕೀಮ್‌ನಲ್ಲಿ ಮಂಜೂರಾದ ಹಣ ಏನಿದೆ ಅದನ್ನು ಖರ್ಚು ಮಾಡಲೇ ಇಲ್ಲ. ಏತಕ್ಕಾಗಿ ಖರ್ಚು ಮಾಡಿಲ್ಲ ಮತ್ತು ಇದರ ಬಗ್ಗೆ ತಾವೇನಾದರೂ ರೀವ್ಯೂ ಮಾಡಿದ್ದೀರಾ ? ಯಾವ ಯಾವ ಜಿಲ್ಲೆಗಳಲ್ಲಿ ಏನೇನು ಪರಿಸ್ಥಿತಿ ಇದೆ ? ಇದರಲ್ಲಿ ೨೫ ಪರ್ಸೆಂಟ್‌ನಷ್ಟು ಹಣವನ್ನು ಕೂಡ ಖರ್ಚು ಮಾಡಿಲ್ಲ ಎಂದು ತಿಳಿದು ಬರುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಡೀ ಪರಿಷತ್‌ನದ್ದು ಹೇಳಿದ್ದೇನೆ. ೬ ಪರ್ಸೆಂಟ್‌ನಷ್ಟು ಖರ್ಚು ಮಾಡಿದ್ದೇವೆ. ಹಿಂದೆ ೩ ಪರ್ಸೆಂಟ್ ಇತ್ತು. ಈಗ ಜಿಲ್ಲಾವಾರು ವಿವರಗಳು ನನ್ನ ಹತ್ತಿರ ಇಲ್ಲ. ಅದನ್ನು ತರಿಸಿಕೊಡುತ್ತೇನೆ.

ಶ್ರೀ ಬಿ. ಬಿ. ನಿಂಗಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿಯವರು ನಮ್ಮ ಚಿಕ್ಕಮಗಳೂರು ಜಿಲ್ಲೆಗೆ ಬಂದಾಗ ಕರ್ನಾಟಕ ರಾಜ್ಯದಲ್ಲಿ ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಸಿ. ಮತ್ತು ಡಿ. ಭೂಮಿಯನ್ನು ವರ್ಗಾವಣೆ ಮಾಡಿದರೆ ಬಡವರಿಗೆ ಹಂಚುತ್ತೇವೆ ಎಂದು ಹೇಳಿದ್ದರು. ಇನ್ನು ಭದ್ರಾ ಮೇಲ್ದಂಡೆ ಯೋಜನೆ ಬಗ್ಗೆ, ಆ ಯೋಜನೆ ಆದರೆ, ಅದರಿಂದ ಪ್ರಯೋಜನ ಪಡೆಯುತಕ್ಕಂಥದ್ದರ ಬಗ್ಗೆ ಮಾನ್ಯ ಶಾಸಕ ಸ್ನೇಹಿತರು ಈಗಾಗಲೇ ಮಾತನಾಡಿದ್ದಾರೆ. ಇವೊತ್ತು ಅರಣ್ಯಭೂಮಿ ನಷ್ಟ ಆಗತಕ್ಕಂಥ ಸಂದರ್ಭಗಳಲ್ಲಿ ಇದನ್ನು ಏನಾದರೂ ಮಾಡಿದ್ದೇ ಆದರೆ, ಸಂಪೂರ್ಣ ಅರಣ್ಯವು ಮುಳುಗಡೆಯಾಗುತ್ತದೆ. ಇದನ್ನು ಮಾಡಕೂಡದು ಎನ್ನುವುದನ್ನು ನಾವು ಮಾಡಿದ್ದು. ಅರಣ್ಯ ಯೋಜನೆಯನ್ನು ಹಾಕಿಕೊಳ್ಳುವುದಕ್ಕಾಗಿ ಭದ್ರಾ ಮೇಲ್ದಂಡೆ ಯೋಜನೆಯನ್ನು ತೆಗೆದುಕೊಳ್ಳುತ್ತೀರಾ ಇಲ್ಲವೇ ಎಂಬ ಬಗ್ಗೆ ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿನ್ನೆಯ ದಿವಸ ನಾನು ನೀರಾವರಿ ಬಗ್ಗೆ ಉತ್ತರ ಕೊಡುವಾಗ ಈ ಬಗ್ಗೆ ಉತ್ತರಿಸಿದ್ದೇನೆ. ಭದ್ರಾ ಮತ್ತು ಅಪ್ಪರ್ ತುಂಗಾ ಯೋಜನೆಗಳು ಸರಕಾರದ ಪರಿಶೀಲನೆಯಲ್ಲಿದೆ. ನಮಗೆ ದೊರೆಯುತಕ್ಕಂಥ ನೀರಿನ ಪಾಲಿನ ಮೇಲೆ ಅದು ಆಧಾರವಾಗಿರುತ್ತದೆ. ಈಗಾಗಲೇ ಭದ್ರಾ ಯೋಜನೆಯನ್ನು ತೆಗೆದುಕೊಳ್ಳ ಬಾರದು ಎಂದು ವಿರೋಧ ಕೂಡ ಇದೆ. ಈ ಬಗ್ಗೆ ಸರಕಾರದಲ್ಲಿ ಈಗಾಗಲೇ ಗಂಭೀರವಾಗಿ ಆಲೋಚನೆ ಇದೆ. ಆ ಬಗ್ಗೆ ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಗಂಗಣ್ಣ.—ಮಾನ್ಯ ಅಧ್ಯಕ್ಷರೇ, ಶಾಶ್ವತವಾಗಿ ಕ್ಷಾಮಕ್ಕೆ ತುತ್ತಾಗಿರತಕ್ಕಂಥ ಕೋಲಾರ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಿಗೆ ಶಾಶ್ವತವಾದ ಪರಿಹಾರ ಒದಗಿಸಲು ಯಾವ ಯಾವ ಯೋಜನೆಗಳನ್ನು ತೆಗೆದುಕೊಂಡಿದ್ದೀರಿ ಎಂದು ದಯವಿಟ್ಟು ತಿಳಿಸಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.— ಡಿ.ಪಿ. ಎ. ಪಿ ಯೋಜನೆಯ ಕೆಳಗೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಇದರ ಜೊತೆಗೆ ಇನ್ನೂ ಕೆಲವು ವಿಶೇಷವಾದಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವ ಬಗ್ಗೆ ಸರಕಾರ ಆಲೋಚನೆ ಮಾಡುತ್ತದೆ.

ಉಪಾಧ್ಯಕ್ಷರು.— ಈಗ ಬೇಡಿಕೆಗಳ ಮೇಲಿನ ಚರ್ಚೆ ಮುಕ್ತಾಯವಾಯಿತು ಬೇಡಿಕೆಗಳನ್ನು ಮತಕ್ಕೆ ಹಾಕುತ್ತೇನೆ.

"ದಿನಾಂಕ ೩೧-೩-೧೯೮೫ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯೋಜನಾ ಇಲಾಖೆಯ ಅಭಿಯಾಚನೆಗಳು ಇತ್ಯಾದಿ ಸಂದಾಯ ಮಾಡುವಲ್ಲಿ, ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫,೯೧,೦೫,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಭಂಡವಾಳ ಖಾತೆಯಲ್ಲಿ ೧೧,೦೦,೦೦೦-ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ. ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡುತ್ತದೆ."

ಪ್ರಸ್ತಾವವು ಅಂಗೀಕೃತವಾಗಿದೆ

ಉಪಾಧ್ಯಕ್ಷರು.— ಈಗ ಕಂದಾಯ ಇಲಾಖೆ ಮೇಲಿನ ಚರ್ಚೆಗೆ ಉತ್ತರ.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೇ, ಕಂದಾಯ ಇಲಾಖೆಯ ಬಗ್ಗೆ ಚರ್ಚೆ ಆದಾಗ, ಎಲ್ಲಾ ಮಾನ್ಯ ಸದಸ್ಯರುಗಳು ಇದು ಬಹಳ ಮುಖ್ಯವಾದಂಥ ಇಲಾಖೆ, ಇದ್ದು ಮದರ್ ಆಫ್ ಆಲ್ ಡಿಪಾರ್ಟ್‌ಮೆಂಟ್ಸ್ ಎಂದು ಹೇಳಿದ್ದಾರೆ. ಆ ಕುರಿತು ನನ್ನ ಅಭಿಪ್ರಾಯ ಗಳನ್ನು ಕೂಡ ಹೇಳಿದ್ದೇನೆ. ಈ ಇಲಾಖೆಯ ಕೆಲಸವು ಶ್ರೀಸಾಮಾನ್ಯನಿಗೆ ಹೆಚ್ಚಿನ ಸಂಪರ್ಕ ಇರುವು ದರಿಂದ ಸಾಮಾನ್ಯವಾಗಿ ಈ ಇಲಾಖೆಯ ಮೇಲಿನ ಚರ್ಚೆಯಾದಾಗ, ಗ್ರಾಮ ಲೆಕ್ಕಿಗಳು, ಸಬ್ ರಿಜಿಸ್ಟ್ರರ್ ಮತ್ತು ತಹಶೀಲ್ದಾರ್ ಕಛೇರಿಗಳ ಬಗ್ಗೆ ಕಟುವಾಗಿ ಟೀಕೆಗಳು ಬರುತ್ತವೆ. ನಮ್ಮ ರಾಜ್ಯದಲ್ಲಿ ಜಿಲ್ಲಾ ಪರಿಷತ್ತಿನ ಏರ್ಪಾಡು ಬಂದ ಮೇಲೆ ಕಂದಾಯ ಇಲಾಖೆಯ ಅಧಿಕಾರ ಬಹಳ ಕಡಿಮೆಯಾಗಿದೆ. ಮೊದಲು ಬೇರೆ ಬೇರೆ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಕಂದಾಯ ಇಲಾಖೆ ಪಾಲ್ಗೊಳ್ಳುತ್ತಾ ಇತ್ತು. ಆದರೆ ಇವೊತ್ತು ಬೇರ್ಪಡೆಯಾಗಿದೆ. ಈಗ ಕಂದಾಯ ಇಲಾಖೆಯವರು ಇನ್ನೂ ಹೆಚ್ಚು ಇಲಾಖೆಗಳ ಕೆಲಸಗಳ ಬಗ್ಗೆ ಗಮನ ಕೊಡಬೇಕಾಗಿದೆ. ಅದೇ ರೀತಿಯಲ್ಲಿ ಹೆಚ್ಚು ಗಮನಕೊಡಲು ಪ್ರಾರಂಭ ಮಾಡಿದ್ದಾರೆ. ಈ ಇಲಾಖೆಯ ಬಗ್ಗೆ ಚರ್ಚೆ ಮಾಡುವಾಗ ಪ್ರಾಮುಖ್ಯ ವಾಗಿ ಬಗರ್‌ಹುಕುಂ ಸಾಗುವಳಿ ಮಾಡುವಂಥ ಜಮೀನುಗಳನ್ನು ಸಕ್ರಮಗೊಳಿಸತಕ್ಕಂಥ ಕಾಲದಲ್ಲಿ ಮತ್ತು ಲ್ಯಾಂಡ್ ರಿಫೋರ್ಮ್ಸ್ ಜಾರಿಗೊಳಿಸುವಂಥ ಕಾಲದಲ್ಲಿ ಆಗಿರುವಂಥ ವಿಳಂಬದ ಬಗ್ಗೆ ಅನೇಕ ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ.

೧೨-೩೦ ಪಿ. ಎಂ.

ಅನೇಕ ಸದಸ್ಯರು ಅನಧಿಕೃತಸಾಗು ಮಾಡಿರುವವರ ಬಗ್ಗೆ ಕೇಳಿದ್ದಾರೆ. ಅದ ರವಿವರ ಹೀಗಿದೆ: ೧-೭-೭೯ರಳ ರವರೆಗೆ ಅನಧಿಕೃತ ಸಾಗು ಮಾಡಿರುವವರಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರ ಸಂಖ್ಯೆ ೮೦,೭೯, ವಿಸ್ತೀರ್ಣ ೧,೫೧,೫೧೨ ಎಕರೆ ಒಟ್ಟು ಪ್ರಮಾಣ ೨೯.೯ ಪರ್ಸೆಂಟ್. ಭೂಹೀನರ ಸಂಖ್ಯೆ ೬೩,೬೩೩, ವಿಸ್ತೀರ್ಣ ೨,೫೫,೫೬೪ ಎಕರೆ. ಪ್ರಮಾಣ ೨೨.೯ ಪರ್ಸೆಂಟ್. ಅತಿ ಸಣ್ಣ ರೈತರ ಸಂಖ್ಯೆ ೫೮,೧೪೬, ವಿಸ್ತೀರ್ಣ ೧,೦೭,೧೬ ಎಕರೆ, ಪ್ರಮಾಣ ೨೦.೯ ಪರ್ಸೆಂಟ್ ಇತರರು, ಸಂಖ್ಯೆ ೭೫, ೩೨೧ ವಿಸ್ತೀರ್ಣ ೧,೪೬, ೫೨೧ ಎಕರೆಗಳು. ಈ ವಿವರಗಳನ್ನು ನೋಡಿದರೆ ಕೇವಲ ಸಿರಿವಂತರು ಮಾತ್ರ ಕಬಳಿಸಿಲ್ಲ. ಎಂಬುದು ತಿಳಿಯುತ್ತದೆ. ಪರಿಶಿಷ್ಟ ಜಾತಿ ಪಂಗಡದವರು ಕೂಡ ಹೆಚ್ಚಿಗೆ ಬಗರ್‌ಹುಕುಂ ಮಾಡುತ್ತಿದ್ದಾರೆ. ಅ ೀ ರೀತಿ ೮೪ ರಿಂದ ಈಚೆಗೆ ನಾವು ಮಾಡಿದ ಕಾನೂನು ವಿಚಾರ ಸಾರ್ವಜನಿಕರಿಗೆ ತಿಳಿದ ಮೇಲೆ ಕೆಲವರು ಒತ್ತುವರಿ ಮಾಡಿದ್ದಾರೆ. ನಾನು ಈ ಬಗ್ಗೆ ಹೇಳುವುದು ಇಷ್ಟು; ೯೮೪ ರಿಂದ ಈಚೆಗೆ ಅಕ್ರಮ ಸಾಗುವಳಿ ಮಾಡಿದವರಿಗೆ ಸಕ್ರಮ ಪಡಿಸುವ ಪ್ರಶ್ನೆಯೇ ಇಲ್ಲ. ಇನ್ನು ಪ್ಲಾಂಟೇಷನ್ ಕ್ರಾಪ್ಸ್ ವಿಚಾರದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡ ದವರು ೮೬೩, ವಿಸ್ತೀರ್ಣ ೧,೮೮೯ ಎಕರೆ ಒಟ್ಟು ೯ ಪರ್ಸೆಂಟ್. ಭೂಹೀನರು ೧,೯೬೬. ವಿಸ್ತೀರ್ಣ ೪,೪೦೭, ಒಟ್ಟು ೧೯.೭ ಪರ್ಸೆಂಟ್. ಅತಿ ಸಣ್ಣ ರೈತರು ೨೭೯೮, ವಿಸ್ತೀರ್ಣ ೫.೩೬೩ ಎಕರೆ ಒಟ್ಟು ೬೩ ಪರ್ಸೆಂಟ್, ಇತರರು ೪,೮೪೨, ೧೯,೩೦೭ ಎಕರೆ ೪೮ ಪರ್ಸೆಂಟ್ ಇದು ಎನ್‌ಕ್ರೋಚಾಗಿರುವ ವಿವರ. ಈ ಬಗ್ಗೆ ಈ ಸದನದ ಮುಂದೆ ಮಸೂದೆ ಇದೆ. ಅದರ ಬಗ್ಗೆ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಒಮ್ಮತದಿಂದ ಒಂದು ರಿಪೋರ್ಟನ್ನು ಕೊಟ್ಟಿದ್ದು ಸಮಾಜದ ಅನೇಕ ಕಡೆಗಳಿಂದ ಅದನ್ನೆಲ್ಲಾ ಸಕ್ರಮಗೊಳಿಸಬೇಕೆಂದು ಬಹಳ ಒತ್ತಾಯ ಇದೆ. ಈ ಸದನದ ಮುಂದೆ ನಾನು ವಿನಯಪೂರ್ವಕ ಮನವಿ ಮಾಡುವುದೇನೆಂದರೆ ಈ ಅಧಿವೇಶನದಲ್ಲೇ ಆ ಮಸೂದೆಯನ್ನು ಪಾಸು ಮಾಡಿಕೊಟ್ಟರೆ ಅವರು ಬೇರೆ ಸಂಘಸಂಸ್ಥೆಗಳಿಂದ ಸಾಲ ಪಡೆಯಲು ಭೂಮಿಯನ್ನು ಅಭಿವೃದ್ಧಿ ಪಡಿಸಲು ಈ ಕಾನೂನು ಬಂದ ಮೇಲೆ ಅನುಕೂಲವಾಗುತ್ತದೆ ಎಂಬುದು.

ಇನ್ನು ಭೂಸುಧಾರಣೆ ಕಾನೂನು ಜಾರಿಗೆ ಬಂದ ಮೇಲೆ ರೈತರಿಂದ ಬಂದ ಅರ್ಜಿಗಳ ಸಂಖ್ಯೆ ೮,೧೫,೫೮೭, ವಿಲೇವಾರಿ ಆದವುಗಳು ೮,೧೪,೬೫೫, ಬಾಕಿ ಉಳಿದಿರುವುದು ೧,೧೩೨. ಈ ಅರ್ಜಿ ಗಳಲ್ಲಿ ೪,೮೫,೫೫೭ ರೈತರ ಪರವಾಗಿ ಆಗಿವೆ. ಖರ್ಗೆಯವರು ಬಸವಲಿಂಗಪ್ಪನವರು ಇದನ್ನೆಲ್ಲ ಕೇಳ

ಬೇಕಾಗಿತ್ತು, ಹೈಕೋರ್ಟಿನಿಂದ ಸುಮಾರು ೬೦,೯೯೩ ಕೇಸ್‌ಗಳು ಮತ್ತು ಅಪಿಲೇಟ್ ಅಥಾರಿಟಿಗೆ ರಿಮಾಂಡಾಗಿವೆ. ಅಪಿಲೇಟ್ ಅಥಾರಿಟಿಗೆ ೨೪,೧೩೮ ಕೇಸುಗಳು ಟ್ರಾನ್ಸ್‌ಫರ್ ಆಗಿದೆ. ಟ್ರಿಬ್ಯೂನಲ್‌ಗೆ ಟ್ರಾನ್ಸ್‌ಫರ್ ಆದಂತಹ ಕೇಸುಗಳು ೩೬,೮೧೫. ಇಲ್ಲಿ ವಿಳಂಬವಾಗುತ್ತದೆಂದು ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಪ್ರಾರಂಭದಲ್ಲಿ ಅಪಿಲೇಟ್ ಅಥಾರಿಟಿಗಳು ಕೆಲಸ ಮಾಡಲಿಕ್ಕೆ ಅನೇಕ ರೀತಿಯ ತೊಂದರೆಗಳು ಇದ್ದವು ಕಟ್ಟಡಗಳ ಅಭಾವ, ಸ್ಟಾಫ್ ಅಭಾವ ಮತ್ತು ಜಿಲ್ಲಾ ನ್ಯಾಯಾಧೀಶರನ್ನು ಅಲ್ಲಿಗೆ ನೀಡುವ ಬಗ್ಗೆ ತೊಂದರೆಯಿತ್ತು. ಆದರೆ ಇತ್ತೀಚಿಗೆ ಎಲ್ಲಾ ಟ್ರಿಬ್ಯೂನಲ್‌ಗಳು ಕೆಲಸ ಮಾಡುತ್ತಿದೆ. ಟ್ರಿಬ್ಯೂನಲ್‌ನಲ್ಲಿ ಜ್ಯುಡಿಷಿಯಲ್ ಮೆಂಬರ್ ಇರಲಿಲ್ಲ; ಈಗ ಹೈಕೋರ್ಟಿನವರು ಒಪ್ಪಿಕೊಂಡಿರುವುದರಿಂದಾಗಿ ಜ್ಯುಡಿಷಿಯಲ್ ಮೆಂಬರ್ ಕೂಡ ಅಲ್ಲಿಗೆ ಹೋಗುತ್ತಿದ್ದಾರೆ. ಮಾನ್ಯ ಶ್ರೀನಿವಾಸ್‌ರವರು ಅನೇಕ ಸಲ ಪ್ರಶ್ನೆಯನ್ನು ಎತ್ತಿದ್ದಾರೆ. ಅಪಿಲೇಟ್ ಅಥಾರಿಟಿಯವರು ಈಗಾಗಲೇ ನಿಕಾಲಿ ಮಾಡಿರತಕ್ಕಂತಹ ಪ್ರಕರಣಗಳು ೬೬೧೪ ಇವರಲ್ಲಿ ೨೧೪೭ ಪ್ರಕರಣಗಳು ಗೇಣಿದಾರರ ಪರವಾಗಿದೆ ೧೯೬೫ ಪ್ರಕರಣಗಳು ಭೂ ಮಾಲೀಕರ ಪರವಾಗಿ ಆಗಿದೆ. ಈ ಕೇಸುಗಳು ಯಾದಂತಹ ಆತಂಕವಿತ್ತು ಒಂದು ರೀತಿ ಭೂ ಒಡೆಯರ ಪರವಾಗಿ ಆಗುತ್ತದೆಂದು ಮಾನೀಟರಿ ಮಾಡತಕ್ಕಂತಹ ರೆವ್ಯೂ ವಿಚಾರವನ್ನು ಕೂಡ ಕೆಲವರು ವ್ಯಕ್ತಪಡಿಸಿದ್ದಾರೆ. ಪ್ರತಿ ತಿಂಗಳ ವಿವರನ್ನು ತರಿಸಿ ಜಡ್ಜ್‌ಮೆಂಟ ಗಳನ್ನು ತರಿಸಿ ಅದನ್ನು ಅಧ್ಯಯನ ಮಾಡಿ ಇವರಲ್ಲಿ ಕೊಟ್ಟಂತಹ ಕಾರಣಗಳು ಸರಿಯಿದೆಯೋ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡತಕ್ಕಂಥಹ ವಿಚಾರವನ್ನು ಕೂಡ ಸರಕಾರ ಮಾಡುತ್ತಿದೆ. ಮಾನ್ಯ ಶ್ರೀನಿವಾಸ್‌ರವರು ಆಗಾಗ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿರುತ್ತಾರೆ ಗೇಣಿದಾರರ ತೀರ್ಮಾನಗಳ ಸಮೀಕ್ಷೆಯಲ್ಲಿ ೩೨೦೦೦ ಪ್ರಕರಣಗಳನ್ನು ಸರಕಾರಕ್ಕೆ ಕಳುಹಿಸಲಾಗಿದೆ. ಹತ್ತು ವರ್ಷಗಳಿಂದ ಪೆಂಡಿಂಗ್ ಇರತಕ್ಕಂಥದ್ದು ಇದೆ. ಇದಕ್ಕೆ ಸರಕಾರವೇ ಅಪೀಲು ಮಾಡತಕ್ಕಂತಹ ನಿರ್ಣಯವನ್ನು ಮಾಡಿದೆ. ೩೨,೦೦೦ ಪ್ರಕರಣಗಳ ಪೈಕಿ ೩೫೦೦ ಪ್ರಕರಣಗಳಿಗೆ ರಿಟ್ ಅರ್ಜಿಗಳನ್ನು ಹಾಕಿದೆ. ಉಳಿದ ಅರ್ಜಿಗಳಿಗೆ ಟೈಮ್ ಬಾರ್ ಆಗಿದೆ. ಇದನ್ನು ಮತ್ತೆ ಪರಿಶೀಲನೆ ಮಾಡತಕ್ಕಂಥಾದ್ದು ಪ್ರಯೋಜನ ವಿಲ್ಲವೆಂದು ಸರಕಾರ ಕೈ ಬಿಟ್ಟಿದೆ.

SRI K. H. SRINIVAS.— I have come to know reliably even these 3,500 writ petitions which you have filed, all of them have been rejected and have not been admitted. You can please check up.

ಶ್ರೀ ಎಸ್. ಆರ್. ಬೊಮ್ಮಾಯಿ.— ಇದರ ಬಗ್ಗೆ ವಿವರ ನನ್ನ ಹತ್ತಿರವಿಲ್ಲ. I will check up. ಸರ್ವೆ ಇಲಾಖೆಯ ಬಗ್ಗೆ ಟೀಕೆ ಇದೆ. ಆದರೆ ಸರ್ವೆ ಇಲಾಖೆಯ ಕೆಲಸ ಕೂಡ ಅಷ್ಟೇ ಕಷ್ಟಕರವಾದುದು. ಹರಿಬರಿಯಲ್ಲಿ ಏನೋ ಮಾಡತಕ್ಕಂಥಾದ್ದು ಅಲ್ಲ. ಇಂಚು ಇಂಚೂ ಭೂಮಿಯನ್ನು ಅಳತೆ ಮಾಡಿ ನಕಾಶೆ ತಯಾರು ಮಾಡತಕ್ಕಂಥಾದ್ದು. ಅವುಗಳನ್ನು ಒದಗಿಸತಕ್ಕಂಥಾದ್ದು ಏನು ಇದೆ, ಅದೆಲ್ಲಾ ಶಾಸ್ತ್ರೀಯವಾಗಿ ನಡೆಯಬೇಕಾಗುತ್ತದೆ. ಅಲ್ಲಿ ಹಳೆಯ ಪದ್ಧತಿಯಿಂದ ಮಾಡುತ್ತಿದ್ದಾರೆ. ದಾರ ಮುಂತಾದವನ್ನೆಲ್ಲಾ ಹಿಡಿದುಕೊಂಡು ಅಳೆಯತಕ್ಕಂಥಾದ್ದು ಇದೆ. ಇದು ಬದಲಾವಣೆಯಾಗಬೇಕೆಂದು ಸರಕಾರ ವಿಚಾರ ಮಾಡುತ್ತಿದೆ. ಅದನ್ನು ಆಲೋಚನೆ ಮಾಡುತ್ತಿದ್ದೇವೆ ಬಳ್ಳಾರಿಯ ೨೬ ಗ್ರಾಮಗಳ ಬಗ್ಗೆ......

ಶ್ರೀ ರೇವಣಸಿದ್ದಯ್ಯ.— ಮಾನ್ಯ ಮಂತ್ರಿಗಳು ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ ಹೇಳಿದರು, ನಾನು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದೆ. ಅದಕ್ಕೆ ಉತ್ತರ ಹೇಳಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.— ನಾನು ಈ ಬಗ್ಗೆ ಮುಕ್ತಾಯ ಮಾಡುತ್ತೇನೆ ನಂತರ ಕೇಳಿ. ಬಳ್ಳಾರಿಯ ೨೬ ಗ್ರಾಮಗಳಲ್ಲಿ ಸರ್ವೆ ಮಾಡತಕ್ಕಂಥಹ ಪ್ರಶ್ನೆ ಇಲ್ಲಿ ಬಂದಿದೆ. ಅದನ್ನು ಈಗಾಗಲೇ ಕಾನೂನು ಇಲಾಖೆಗೆ ಕಳಿಸಿಕೊಟ್ಟಿದೆ. ಅವರು ನೋಟಿಫಿಕೇಷನ್ ಅನ್ನು ಹೊರಡಿಸುತ್ತಾರೆ. ಸರ್ವೆ ಮಾಡತಕ್ಕಂತಹ ಕೆಲಸವನ್ನು ಆದಷ್ಟು ಬೇಗ ಪ್ರಾರಂಭ ಮಾಡುತ್ತಿದ್ದೇವೆ.

ಶ್ರೀ ಯು. ಭೂಪತಿ.— ಸಂಡೂರು ತಾಲ್ಲೂಕಿನಲ್ಲಿ ಪೆಂಡಿಂಗ್ ಜಾಸ್ತಿ ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಇನ್ನೊಂದು ಪ್ರಮುಖ ವಿಚಾರವಾದ ಸರ್‌ಪ್ಲಸ್ ಲ್ಯಾಂಡ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ವರ್ಷದಲ್ಲಿ ೨೮೬೭ ಎಕರೆ ಸರ್‌ಪ್ಲಸ್ ಲ್ಯಾಂಡ್‌ನ್ನು ಡಿಸ್ಟ್ರಿಬ್ಯೂಷನ್ ಮಾಡಿದ್ದೇವೆ. ಇನ್ನು ಲ್ಯಾಂಡ್ ಲಾರ್ಡ್‌ಗೆ ಕಾಂಪನ್‌ಸೇಷನ್ ಕೊಡತಕ್ಕಂತಹ ವಿಚಾರ ೨೦ ವರ್ಷಗಳಿಂದ ನನೆಗುದಿಗೆ ಬಿದ್ದಿತ್ತು. ೧,೧೯,೯೩೦ ಜನ ಒಡೆಯರಿಗೆ ಈಗಾಗಲೇ ಎನ್. ಎಸ್. ಸಿ. ಸರ್ಟಿಫಿಕೇಟ್ ಮುಖಾಂತರವಾಗಿ ಕಾಂಪನ್‌ಸೇಷನ್ ಕೊಟ್ಟಿದ್ದೇವೆ. ಇನ್ನೂ ೧೮ ಕೋಟಿ ಬಾಕಿ ಕೊಡತಕ್ಕಂಥಾದ್ದು ಇದೆ.

ಈ ವರ್ಷ ಇದಕ್ಕಾಗಿ ೧೫ ಕೋಟಿ ರೂಪಾಯಿಯನ್ನು ಬಜೆಟ್‌ನಲ್ಲಿ ನಾವು ಒದಗಿಸಿದ್ದೇವೆ. ಎಲ್ಲಾ ಲ್ಯಾಂಡ್ ಲಾರ್ಡ್ಸ್‌ಗೆ ಸಲ್ಲತಕ್ಕಂಥ ಕಾಂಪೆನ್‌ಸೇಷನ್‌ನ್ನು ಈ ವರ್ಷದ ಅಂತ್ಯದೊಳಗಾಗಿ ಕೊಡತಕ್ಕಂಥ ನಿರ್ಧಾರವನ್ನು ಸರ್ಕಾರ ಮಾಡಿದೆ. ಹರಿಜನಗಿರಿಜನರ ಭೂಮಿಯನ್ನು ಪರಭಾರೆ ಮಾಡುವಂಥ ವಿಚಾರವನ್ನು ಮಾನ್ಯ ಬಸವಲಿಂಗಪ್ಪನವರು, ಮಾನ್ಯ ಖರ್ಗೆಯವರು ಎತ್ತಿದರು. ಪಿಟಿಎಲ್‌ಆರ್‌ಸಿ ಆಕ್ಟ್ ಕೆಳಗೆ ನಾನು ಈ ಮೊದಲೇ ಹೇಳಿದಂತೆ ಈ ಕಾನೂನು ಬಂದಿದ್ದರೂ ಕೂಡಾ ಅದು ಜಾರಿಯಲ್ಲಿರಲಿಲ್ಲ. ನಮ್ಮ ಸರ್ಕಾರ ಬಂದಮೇಲೆ ಇವರ ಬಗ್ಗೆ ತೀವ್ರವಾಗಿ ಗಮನವನ್ನು ಹರಿಸಿದ್ದೇವೆ. ಏಕೆಂದರೆ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಜನ ಮುಂದೆ ಅರ್ಜಿ ಕೊಡಲಿಕ್ಕೆ ಹಿಂದೆ ಮುಂದೆ ನೋಡುತ್ತಿದ್ದರು. ಇದರ ಪ್ರಗತಿ ಈ ರೀತಿ ಇದೆ. ವಾಪಸ್ ತೆಗೆದುಕೊಳ್ಳುವುದು ಬಹಳ ಕಷ್ಟದ ಕೆಲಸ ಏಕೆಂದರೆ ಅವರಿಗೆ ಸೇಲ್ ಡೀಡ್ ಆಗಿರುತ್ತದೆ. ಖರೀದಿ ಮಾಡಿದಂಥವರು ಅದರಲ್ಲಿ ಹಣವನ್ನು ಹಾಕಿರುತ್ತಾರೆ. ಆ ಜಮೀನನ್ನು ಅಭಿವೃದ್ಧಿ ಮಾಡಿರುತ್ತಾರೆ. ವಾಪಸ್ ಕಿತ್ತುಕೊಳ್ಳತಕ್ಕಂಥದ್ದು ಬಹಳ ಕಷ್ಟದ ಕೆಲಸ, ಆದರೆ ಕಾನೂನನ್ನು ಜಾರಿಗೊಳಿಸಲಿಕ್ಕೆ ಸರ್ಕಾರ ಹಿಂದೆ ಮುಂದೆ ನೋಡುವುದಿಲ್ಲ. ೧೯೮೩-೮೪ರಲ್ಲಿ ೧೨,೧೦೨ ಜನರಿಗೆ ೨೬,೯೬೭ ಎಕರೆ ಭೂಮಿಯನ್ನು ಕೊಡಿಸಿದ್ದೇನೆ. ೧೯೮೪-೮೫ರಲ್ಲಿ ೨೮೯೦ ಜನರಿಗೆ ೧೩,೯೨೨ ಎಕರೆ ಭೂಮಿಯನ್ನು ಕೊಡಿಸಲಾಗಿದೆ. ೧೯೮೫-೮೬ರಲ್ಲಿ ೬,೪೭೭ ಜನರಿಗೆ ೨೦,೮೬೫ ಎಕರೆ ಜಮೀನನ್ನು ಕೊಡಿಸಿದ್ದೇವೆ. ೧೯೮೬-೮೭ರಲ್ಲಿ ೧೩,೪೭೩ ಜನರಿಗೆ ೩೭,೭೩೨ ಎಕರೆ ಜಮೀನನ್ನು ಕೊಡಿಸಿದ್ದೇವೆ. ೧೯೮೭-೮೮ರಲ್ಲಿ ೧,೭೪೬ ಜನರಿಗೆ ೩೦೭೨ ಎಕರೆ ಭೂಮಿಯನ್ನು ಕೊಡಿಸಿದ್ದೇವೆ. ಒಟ್ಟು ೧೯೮೩-೮೪ರಿಂದ ೧೯೮೮ರವರೆಗೆ ೩೪,೨೮೯ ಜನರಿಗೆ ೧,೦೯,೫೫೯ ಎಕರೆ ಜಮೀನನ್ನು ವಾಪಸ್ ಕೊಡಿಸಿದ್ದೇವೆ, ಒಟ್ಟಿನಲ್ಲಿ ಹರಿಜನ ಗಿರಿಜನರ ವಿಚಾರದಲ್ಲಿ ಅವರಿಗೆ ಕಾನೂನು ಪ್ರಕಾರ ದೊರೆಯತಕ್ಕಂಥ ಹಕ್ಕುಗಳ ಬಗ್ಗೆ ಬಹಳ ಚುರುಕಾಗಿ ಈ ಇಲಾಖೆ ಕೆಲಸ ಮಾಡಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಶ್ರೀ ಕೆ ಹೆಚ್. ಶ್ರೀನಿವಾಸ್.—ಒಂದೇ ನಿಮಿಷ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕ್ಲಾರಿಫಿಕೇಷನ್ ಆಮೇಲೆ ಕೇಳಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇದರಲ್ಲಿ ತಾವು ಹೇಳುತ್ತಿರತಕ್ಕಂಥದ್ದು ಅಸಿಸ್ಟೆಂಟ್ ಕಮೀಷನರ್ ಲೆವೆಲ್‌ನಲ್ಲಿ ಆರ್ಡರ್ ಆಗಿ ಕಬ್ಜಾ ಕೊಡಬೇಕು ಎನ್ನುವ ಆಧಾರದ ಮೇಲೆ ಆ ಅಂಕಿಸಂಖ್ಯೆಯನ್ನು ಹೇಳುತ್ತಿದ್ದೀರಿ ಎಂದು ನನ್ನ ಭಾವನೆ. ಅದರ ನಂತರ ಏನಾಗಿದೆ ಎಂದರೆ ಸುಪ್ರೀಂ ಕೋರ್ಟ್ ಆರ್ಡರ್ ಪ್ರಕಾರ ಡೆಪ್ಯುಟಿ ಕಮೀಷನರ್ ಹತ್ತಿರ ಹೋಗಿ ಎಲ್ಲಾ ಕೇಸ್‌ಗಳ ಮೇಲೂ ಸ್ಟೇ ತೆಗೆದುಕೊಂಡು ಬಿಟ್ಟಿದ್ದಾರೆ ಸ್ಟೇ ತೆಗೆದುಕೊಂಡು ಏನಾಗಿದೆ, ಕಬ್ಜಾ ಕೊಟ್ಟಿದ್ದನ್ನು ವಾಪಸ್ ಪೋಲೀಸ್ ಪ್ರೊಟೆಕ್ಷನ್‌ನಿಂದ ತೆಗೆದುಕೊಂಡಿದ್ದಾರೆ. ಇಷ್ಟೇ ಅಲ್ಲದೇ ಕೆಲವು ಕೇಸ್‌ಗಳು ಡಿಸ್‌ಪೋಸ್ ಆಗಿದೆ, ಲ್ಯಾಂಡ್‌ಲಾರ್ಡ್ಸ್ ಪರವಾಗಿ ರೀ-ಗ್ರ್ಯಾಂಟ್ ಮಾಡುತ್ತಿದ್ದಾರೆ ಎಂದು ನಾನು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಬಗ್ಗೆ ಯಾವುದಾದರೂ ನಿರ್ದಿಷ್ಟ ಉದಾಹರಣೆ ಇದ್ದರೆ ಕೊಡಿ, ಅದನ್ನು ನೋಡುತ್ತೇನೆ. ಸುಪ್ರೀಂ ಕೋರ್ಟ್ ನಿರ್ಣಯ ಕೂಡಾ ಈ ಕಾನೂನು ಸಿಂಧು ಎಂದಿದೆ. ಹಿಂದೆ ಸುಪ್ರೀಂ ಕೋರ್ಟ್ ಸ್ಟೇ ಕೊಟ್ಟಿತ್ತು ಆದಾದಮೇಲೆ ಸುಪ್ರೀಂಕೋರ್ಟಿನ ಕೊನೆಯ ನಿರ್ಣಯ ಬಂದಿದೆ. Validity has been upheld ಎಂದು. ಒಂದು ಅರ್ಥ ಮಾಡುತ್ತಿದ್ದರು ಅದು ಅಡ್ವರ್ಸ್ ಪೊಸೆಷನ್ ವಿಚಾರ. ೧೨ ವರ್ಷದ ವಿಚಾರ ಎತ್ತಿದರು. ೧೨ ವರ್ಷ ಆದಮೇಲೆ ಈ ಕೇಸ್ ಟೈಮ್ ಬಾರ್ ಆಗಿದೆ. ಇದಕ್ಕೆ ಸರ್ಕಾರದ ಸುತ್ತೋಲೆಯನ್ನು ಕಳುಹಿಸಿದ್ದೇವೆ, ಈ ಜಮೀನನ್ನು ಸರ್ಕಾರ ಗ್ರ್ಯಾಂಟ್ ಮಾಡಿದೆ. ಈ ಗ್ರ್ಯಾಂಟ್ ಆದ ಜಮೀನುಗಳ ಕಂಡೀಷನ್ಸ್, ಈ

ಟರ್ಮ್ಸ್ ಆಫ್ ಗ್ರಾಂಟ್ ಏನು ಇದೆ. ಅದು ಪೂರ್ತಿಗೊಳ್ಳುವವರೆಗೆ ಅಲ್ಲಿಯವರೆಗೆ ಅದಕ್ಕೆ ಸರ್ಕಾರವೇ ಒಡೆಯ. ಅದು ಆಗುವುದಕ್ಕೆ ಮೂವತ್ತು ವರ್ಷಗಳು ಆಗಬೇಕಾಗುತ್ತದೆ. ನಾವು ಈಗಾಗಲೇ ವಿವರಣೆಯನ್ನು ಆ ಕೇಸ್‌ಗಳಿಗೆ ಕೊಟ್ಟು ಬಿಟ್ಟಿದ್ದೇವೆ. ಅದು ಲಿಮಿಟೇಷನ್ ಒಳಗೆ ಬರುವುದಿಲ್ಲ. ೧೨ ವರ್ಷದ ವಿಚಾರ ಹೆಚ್ಚಾಗಿ ಇಲ್ಲಿ ಹತ್ತುವುದಿಲ್ಲ. ನಾವು ಮೂವತ್ತು ವರ್ಷಕ್ಕಿಂತ ಒಳಗೆ ಇರತಕ್ಕಂಥ ಎಲ್ಲಾ ಕೇಸ್‌ಗಳನ್ನು ಕಾನೂನು ಪ್ರಕಾರ ಇತ್ಯರ್ಥ ಮಾಡಬೇಕೆಂದು ಆದೇಶವನ್ನು ಕೊಟ್ಟಿದ್ದೇವೆ. ಇದರ ಬಗ್ಗೆ ಕ್ಲಾರಿಫಿಕೇಷನ್ ಕೂಡಾ ಕೊಟ್ಟಿದ್ದೇವೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.- ಇಲ್ಲಿ ಸರಿ ಇದೆ. ಯಾವುದೂ ತಪ್ಪಿಲ್ಲ. ಅಲ್ಲಿ ಒಂದು ಬುದ್ಧಿವಂತಿಕೆ ಏನಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಸುಪ್ರೀಂ ಕೋರ್ಟ್‌ನಲ್ಲಿ ಡೆಪ್ಯುಟಿ ಕಮೀಷನರ್‌ಗೆ ಅಪೀಲ್ ಮಾಡುವುದಕ್ಕೆ ಒಂದು ಪ್ರಾವಿಷನ್ ಇಟ್ಟು ಸ್ಟೇ ಕೊಡುವುದಕ್ಕೆ ಏನು ಒಂದು ಅಧಿಕಾರವನ್ನು ಕೊಟ್ಟರು, ಅದರ ಸಂಪೂರ್ಣ ಉಪಯೋಗವನ್ನು ಹಿಂದಿನ ಭೂಮಾಲೀಕರು ಮಾಡಿಕೊಳ್ಳುತ್ತಿದ್ದಾರೆ. ಡೆಪ್ಯುಟಿ ಕಮೀಷನರ್‌ಗೆ ಅಪೀಲನ್ನು ಹಾಕಿ ಸ್ಟೇ ತೆಗೆದುಕೊಳ್ಳುವುದು ಮತ್ತು ಪೋಲೀಸರನ್ನು ಹಿಡಿದುಕೊಂಡು ಹೋಗಿ ಕಬ್ಜಾವನ್ನು ವಾಪಸ್ ತೆಗೆದುಕೊಂಡು ಬಂದು ಕುಳಿತುಕೊಳ್ಳುವುದು. ಆ ಅಪೀಲ್ ಎಂದೆಂದೂ ತೀರ್ಮಾನವಾಗುವ ಪ್ರಶ್ನೆಯೇ ಇಲ್ಲ, ಆ ಪರಿಸ್ಥಿತಿ ಇದೆ. ಡೆಪ್ಯುಟಿ ಕಮೀಷನರ್ ಅವರಿಂದ ಈ ಬಗ್ಗೆ ಅಂಕಿಸಂಖ್ಯೆ ತೆಗೆದುಕೊಂಡು ಎಷ್ಟು ಸ್ಟೇ ಆರ್ಡರ್ ಕೊಟ್ಟಿದ್ದಾರೆ ಎಂದು ಕೇಳಿ, ಆಗ ನಿಮಗೇ ಗೊತ್ತಾಗುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ಈ ಜನರಿಗೆ ನೀವು ಕೊಟ್ಟಿರುವ ಜಮೀನನ್ನು ಬೇರೆಯವರು ೩೦ ವರ್ಷಗಳವರೆಗೆ ಕೊಂಡುಕೊಳ್ಳುವುದಕ್ಕೆ ಬರುವುದಿಲ್ಲವೆಂದು ತಾವು ಈಗ ತಾನೇ ಹೇಳಿದಿರಿ ಮತ್ತು ಈ ಬಗ್ಗೆ ಎಲ್ಲ ಅಧಿಕಾರಿಗಳಿಗೂ ಸುತ್ತೋಲೆ ಕಳುಹಿಸಿಕೊಟ್ಟಿರುವುದಾಗಿ ಹೇಳಿದಿರಿ. ಆದರೆ ಈ ಜಮೀನುಗಳಿಗೆ ಸಂಬಂಧಪಟ್ಟಂತೆ ಅನೇಕ ಕೇಸ್‌ಗಳು ಹೈಕೋರ್ಟಿನ ಮುಂದಿವೆ. ಇಂತಹ ಜಮೀನುಗಳನ್ನು ಎಸ್.ಸಿ. ಮತ್ತು ಎಸ್.ಟಿ. ಜನರಿಂದ ಖರೀದಿ ಮಾಡಿ ೧೨ ವರ್ಷಗಳಾಗಿ ಬಿಟ್ಟರೆ, ಅಂತಹ ಕೇಸ್‌ಗಳನ್ನು ಅಡ್ಮಿಟ್ ಮಾಡಿಕೊಳ್ಳುವುದಕ್ಕೆ ಬರುವುದಿಲ್ಲ, ಟೈಮ್-ಬಾರ್ ಆಗಿದೆ ಎನ್ನುವಂತಹ ವಾದವನ್ನು ಕೆಲವರು ಮಾಡುತ್ತಿದ್ದಾರೆ. ಇದಕ್ಕೆ ತಾವು ಏನು ಹೇಳುತ್ತೀರಿ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಇಂತಹ ವಾದವಿವಾದದ ಕಾರಣ ಈ ಬಗ್ಗೆ ಹೈಕೋರ್ಟಿನಿಂದ ತೀರ್ಮಾನ ಬರುವುದು ತಡವಾಗಿದೆ ಇಷ್ಟರವರೆಗೆ ಹೈಕೋರ್ಟಿನಲ್ಲಿ ತೀರ್ಮಾನವಾಗಿದ್ದರೆ ಇಂತಹ ಸಮಸ್ಯೆಗಳು ನಮಗೆ ಬರುತ್ತಿರಲಿಲ್ಲ. ಆದರೂ ಈ ಬಗ್ಗೆ ಸರ್ಕಾರ ಏನು ಮಾಡಬೇಕೋ ಅದನ್ನು ಮಾಡಿದೆ. ಹೈಕೋರ್ಟಿನ ಮುಂದೆ ಕೇಸ್‌ಗಳಿದ್ದರೆ ಅದು ಅಲ್ಲಿ ಇತ್ಯರ್ಥ ಆಗಬೇಕಾಗುತ್ತದೆ. ಈ ಕೇಸ್‌ಗಳ ಬಗ್ಗೆ ಆದಷ್ಟು ಬೇಗ ನಿರ್ಣಯ ಕೊಡಬೇಕೆಂದು ಸರ್ಕಾರ ಅವರಲ್ಲಿ ಕೇಳಿಕೊಳ್ಳುತ್ತದೆ. ಇಂತಹ ಜಮೀನುಗಳನ್ನು ಕೊಂಡುಕೊಂಡವರ ಪೈಕಿ ಎಷ್ಟು ಜನರು ಜಿಲ್ಲಾಧಿಕಾರಿಗಳವರ ಹತ್ತಿರ ಹೋಗಿ ಅಪೀಲು ಮಾಡಿಕೊಂಡು ಅವರ ಕಡೆಯಿಂದ ಸ್ಟೇ ತೆಗೆದುಕೊಂಡಿದ್ದಾರೆಂಬ ಬಗ್ಗೆ ವಿವರಗಳನ್ನು ತರಿಸಿಕೊಳ್ಳಿ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇದರ ಬಗ್ಗೆ ಸಹ ನಾವು ಯೋಗ್ಯ ಕ್ರಮ ಕೈಕೊಳ್ಳುತ್ತೇವೆ.

ಇನ್ನು ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಕೆಳಗೆ ಇದುವರೆಗೆ ಹೆಚ್ಚುವರಿ ಭೂಮಿ ಎಂದು ಡಿಕ್ಲೇರ್ ಆಗಿದ್ದು ೨,೯೨,೪೫೮ ಎಕರೆಗಳು. ಇದರ ಪೈಕಿ ೧,೫೪,೪೭೮ ಎಕರೆಗಳನ್ನು ನಾವು ಹಂಚಿಕೆ ಮಾಡಿದ್ದೇವೆ. ಮತ್ತೆ ೧,೬೯,೯೦೬ ಎಕರೆಗಳಷ್ಟು ಜಮೀನಿನ ಹಂಚಿಕೆ ಬಗ್ಗೆ ಕೋರ್ಟಿನಲ್ಲಿ ಸ್ಟೇ ಇರುವುದರಿಂದ ನಾವು ಹಂಚಿಕೆ ಮಾಡಲು ಸಾಧ್ಯವಾಗಿಲ್ಲ. ಈ ಬಗ್ಗೆ ಕೋರ್ಟಿನಲ್ಲಿರುವಂತಹ ಕೇಸ್‌ಗಳನ್ನು ತ್ವರಿತಗತಿಯಲ್ಲಿ ಇತ್ಯರ್ಥ ಮಾಡಬೇಕೆಂದು ನಾವು ಅದರಲ್ಲಿ ಕೇಳಿಕೊಳ್ಳುತ್ತಿದ್ದೇವೆ.

ಇನ್ನು ಹಳೆಯ ರೆಕಾರ್ಡ್ಸ್ ಹಾಳಾಗುತ್ತಿವೆ ಎಂದು ಹೇಳಿದ್ದಾರೆ. ಈ ಬಗ್ಗೆ ಮಾನ್ಯ ಸದಸ್ಯರವಾದ ಸರಿಯಾಗಿದೆ. ನೂರಾರು ವರ್ಷಗಳ ಹಿಂದಿನ ರೆಕಾರ್ಡ್ಸನ್ನು ನಾವು ಕಾಪಾಡಿಕೊಳ್ಳಬೇಕಾಗಿದೆ. ಆದ್ದರಿಂದ ಅಂತಹ ರೆಕಾರ್ಡ್ಸ್‌ನ್ನು ಮೈಕ್ರೋ ಫಿಲಂ ಮಾಡಿ ಪ್ರಿಜರ್ವ್ ಮಾಡುವುದಕ್ಕೆ ಈ ವರ್ಷದಿಂದ ನಾವು ಪ್ರಯತ್ನ ಮಾಡುತ್ತಿದ್ದೇವೆ.

ಇನ್ನು ಲ್ಯಾಂಡ್ ರಿಫಾರಮ್ಸ್ ಆಕ್ಟ್ ಬಗ್ಗೆ ತಿದ್ದುಪಡಿಗಳನ್ನು ತರಬೇಕೆಂದು ಮೇಲಿಂದ ಮೇಲೆ ಈ ಸಭೆಯಲ್ಲಿ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ. ಈ ಬಗ್ಗೆ ಸಾರ್ವಜನಿಕರಿಂದಲೂ ಸಹ ಸರ್ಕಾರಕ್ಕೆ ಸಾಕಷ್ಟು ಬೇಡಿಕೆಗಳು ಬಂದಿವೆ. ಈ ಆಕ್ಟ್‌ನಲ್ಲಿರುವಂತಹ ಲೋಪದೋಷಗಳ ಬಗ್ಗೆ ಮತ್ತು ತೊಂದರೆಗಳ ಬಗ್ಗೆ ಸಾರ್ವಜನಿಕರು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಈ ಆಕ್ಟ್ ಜಾರಿಗೆ ಬಂದ ಮೇಲೆ ರೈತರಿಗೆ ತೊಂದರೆಗಳು ಆಗಿರಬಹುದು, ಭೂ ಒಡೆಯರಿಗೆ ತೊಂದರೆಗಳು ಆಗಿರಬಹುದು, ಹೊಸದಾಗಿ ಭೂಮಿಯನ್ನು ಕೊಂಡವರಿಗೆ ತೊಂದರೆಗಳು ಆಗಿರಬಹುದು, ಈ ಕೆಲವು ತೊಂದರೆಗಳ ಬಗ್ಗೆ ಮಾನ್ಯ ಸದಸ್ಯರು ಇಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ. ಆದ್ದರಿಂದ ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಸಮಗ್ರವಾದಂಥ ತಿದ್ದುಪಡಿಗಳನ್ನು ಮುಂದಿನ ಅಧಿವೇಶನದಲ್ಲಿ ತರುವಂತಹ ವಿಚಾರ ಸರ್ಕಾರಕ್ಕೆ ಇದೆ. ಈ ಬಗೆಗೆ ಡ್ರಾಫ್ಟ್ ಬಿಲ್‌ನ್ನು ತಯಾರು ಮಾಡಿ ಈ ಸಭೆಯ ಮುಂದೆ ತಂದಾಗ, ಮಾನ್ಯ ಸದಸ್ಯರುಗಳು ತಮ್ಮ ಸಲಹೆಗಳನ್ನು ಕೊಡಬಹುದು.

ಇನ್ನು ಲ್ಯಾಂಡ್ ಅಕ್ವಿಜಿಷನ್ ವಿಚಾರದಲ್ಲಿ ಸಹ ಒಂದು ನಿಗದಿತ ಸಮಯದಲ್ಲಿ ಅಂದರೆ ಮೂರು ವರ್ಷಗಳಲ್ಲಿ ಅವಾರ್ಡ್ ಪಾಸಾಗಬೇಕು. ಅವಾರ್ಡ್ ಪಾಸಾದ ಮೇಲೆ ನಾವು ಹಣ ಕೊಡಬೇಕಾಗುತ್ತದೆ. ಹಣ ಕೊಡುವುದು ತಡವಾದರೆ ಸರ್ಕಾರ ಆ ಹಣಕ್ಕೆ ಬಡ್ಡಿ ಕೊಡಬೇಕಾಗುತ್ತದೆ. ಆಗ ಸರ್ಕಾರಕ್ಕೆ ಹೆಚ್ಚಿನ ದೊಡ್ಡ ಭಾರವಾಗುತ್ತದೆ. ಈ ಲ್ಯಾಂಡ್ ಅಕ್ವಿಜಿಷನ್‌ಗೆ ಸಂಬಂಧಪಟ್ಟಂತೆ ಅವಾರ್ಡ್ ಆದಂಥ ಹಣ ಸಂಬಂಧಪಟ್ಟವರಿಗೆ ಸರಿಯಾಗಿ ಮುಟ್ಟುವುದಿಲ್ಲ ಎಂಬ ದೂರು ಇತ್ತು. ಆದ್ದರಿಂದ ಸರ್ಕಾರ ಇತ್ತೀಚೆಗೆ ಒಂದು ಆಜ್ಞೆ ಮಾಡಿದೆ. ಏನೆಂದರೆ, ಈ ಹಣವನ್ನು ಚೆಕ್ ಮುಖಾಂತರ ಜಿಲ್ಲಾಧಿಕಾರಿಗಳು ಅಥವಾ ಹಿರಿಯ ಅಧಿಕಾರಿಗಳ ಕಛೇರಿಯಲ್ಲಿ ಸಾಧ್ಯವಾದರೆ ಶಾಸಕರ ಸಮ್ಮುಖದಲ್ಲಿ ಇಲ್ಲವೇ ಸಾರ್ವಜನಿಕ ಪ್ರತಿನಿಧಿಗಳ ಸಮುಖದಲ್ಲಿ ಹಂಚಬೇಕು ಎಂದು ಆದೇಶ ಕೊಟ್ಟಿದ್ದೇವೆ. ಈ ಬಗ್ಗೆ ಅಲ್ಲಿ ಇಲ್ಲಿ ಬಂದಂಥ ದೂರುಗಳ ಬಗ್ಗೆ ಈಗಾಗಲೇ ನಾವು ಕ್ರಮ ಕೈಗೊಂಡಿದ್ದೇವೆ. ಕೆಲವು ಕಡೆ ಹಣ ಕೊಡತಕ್ಕಂಥಾದ್ದು ನಿಧಾನವಾಗಿದೆ. ಅದರ ಬಗ್ಗೆ ಕೂಡ ಸರ್ಕಾರ ಗಮನಹರಿಸುತ್ತದೆ. ಈ ಭೂಮಿಯನ್ನು ಕಳೆದುಕೊಂಡಂಥ ಜನರಿಗೆ ಆದಷ್ಟು ಬೇಗ ಅದರ ಪರಿಹಾರ ದೊರಕತಕ್ಕ ಕ್ರಮ ಕೈಗೊಳ್ಳುತ್ತಾ ಇದ್ದೇವೆ. ಕಂದಾಯ ಇಲಾಖೆ ಬಗ್ಗೆ ಇನ್ನೇನೂ ಹೆಚ್ಚಿಗೆ ಹೇಳುವುದಿಲ್ಲ. ಇದು ಹಳೆಯ ಇಲಾಖೆ, ಹಿರಿಯ ಇಲಾಖೆ. ಹಳ್ಳಿಯಿಂದ ದಿಲ್ಲಿವರೆಗೆ ಸಂಬಂಧಪಡತಕ್ಕ ಅಂಕಿಅಂಶಗಳನ್ನು, ರಿಕಾರ್ಡುಗಳನ್ನು ತಯಾರು ಮಾಡತಕ್ಕಂಥ ಈ ಇಲಾಖೆಯಲ್ಲಿ ಎಲ್ಲವೂ ಸರಿಯಾಗಿ ಇದೆ ಎಂದು ನಾನು ಹೇಳುವುದಿಲ್ಲ. ಆದರೆ ಅನೇಕ ಬದಲಾವಣೆಗಳನ್ನು ಮಾಡಿದ್ದೇವೆ. ಇವತ್ತು ಕಛೇರಿಗಳಲ್ಲಿ ಕೆಲಸ ಚೆನ್ನಾಗಿ ನಡೆಯುತ್ತಿದೆ ಎಂದು ನನ್ನ ಭಾವನೆ. ಕೆಲವು ಕಡೆ ಸರಿಯಾಗಿ ನಡೆಯದಿದ್ದರೆ ಅದನ್ನು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದರೆ ಅದರ ಬಗ್ಗೆ ಉಗ್ರಕ್ರಮ ಕೈಗೊಳ್ಳುವ ಭರವಸೆಯನ್ನು ಕೊಟ್ಟು, ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ ಸಮಗ್ರವಾದಂಥ ತಿದ್ದುಪಡಿಯನ್ನು ತರತಕ್ಕ ವಿಚಾರವನ್ನು ಈ ಸಭೆಗೆ ತಿಳಿಸಿ ನನ್ನ ಉತ್ತರವನ್ನು ಮುಗಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ ನಮ್ಮ ಸ್ನೇಹಿತರು ಹೇಳಿದರು. ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ನಲ್ಲಿ ಕ್ಲಿಯರಾಗಿದೆ. ೧೨ ಸಾವಿರ ರೂಪಾಯಿಗೆ ಮೇಲ್ಪಟ್ಟು ಇನ್‌ಕಂ ಇರತಕ್ಕವರು ವ್ಯವಸಾಯವಲ್ಲದ ಲ್ಯಾಂಡನ್ನು ಪರ್ಚೇಸ್ ಮಾಡಬಾರದು ಎಂದು ಇದೆ. ಇಂಥವು ಸಾವಿರಾರು ಘಟನೆಗಳು ಆಗಿದೆ. ರೇವಜಿತು ಪ್ರಕರಣ ಇದು ಒಂದೇ ಎಕ್ಸಾಂಪಲ್. ಅಂಥ ಘಟನೆಗಳು ಬೆಂಗಳೂರು ಸುತ್ತಮುತ್ತ ಬೆಳಗಾಂ, ಧಾರವಾಡದ ಸುತ ಮುತ್ತ ಸಾವಿರಾರು ಆಗಿವೆ. ಅದನ್ನು ಕಾನ್‌ಫಿಸಿಕೇಟ್ ಮಾಡಬಹುದು. ಇವು ೫೦೦ ಕೋಟಿ ಇಲ್ಲವಿದ್ದರೆ ಸಾವಿರ ಕೋಟಿ ರೂಪಾಯಿ ಬೆಲೆಬಾಳುವಷ್ಟು ಸ್ವತ್ತುಗಳಾಗಿವೆ. ಅದನ್ನು ಡಿಟೆಕ್ಟ್ ಮಾಡಿ ಅವರ ಮೇಲೆ ಕ್ರಮ ತೆಗೆದುಕೊಂಡು ಸರ್ಕಾರ ಏಕೆ ವಶಪಡಿಸಿಕೊಳ್ಳಲಿಲ್ಲ ? ಎರಡನೆಯದು, ಬಳ್ಳಾರಿ ಮತ್ತು ರಾಯಚೂರಿನಲ್ಲಿ ವಿಪರೀತ ಕ್ಯಾಂಪ್ಸ್ ಇವೆ. ಇದು ಮಾನ್ಯ ಅನ್ವರಿ ಸಾಹೇಬರಿಗೆ ಗೊತ್ತು. ಆ ಕ್ಯಾಂಪುಗಳಲ್ಲಿ ಸಾಧಾರಣವಾಗಿ ೫ ಸಾವಿರ ೬ ಸಾವಿರ ಜನ ಉಂಟು. ಆ ಕ್ಯಾಂಪುಗಳು ಸ್ಥಾಪನೆಯಾಗಿ ೨೦ ವರ್ಷಗಳಾಗಿದೆ. ಇಲ್ಲಿಯವರೆಗೆ ಅವನ್ನು ರೆಗ್ಯುಲರಾಗಿ ಹಳ್ಳಿ ಎಂದು ರೆಕಗ್ನೈಸ್ ಮಾಡಿಲ್ಲ. ಅದನ್ನು ಏಕೆ ಮಾಡಲಿಲ್ಲ ? ಮೂರನೆಯದು, ಹಿಂದಿನ ಮಂತ್ರಿಮಂಡಲದವರು ಜಿಲ್ಲಾಧಿಕಾರಿಗಳಲ್ಲಿ ಎರಡು ಕ್ಯಾಟಗರಿ ಮಾಡಿದ್ದಾರೆ.

ಧಾರವಾಡ, ಬೆಳಗಾಂ ಇಂತಹ ಹೆವಿ ಡಿಸ್ಟ್ರಿಕ್ಟ್‌ಗಳಿಗೆ ಜಿಲ್ಲಾಧಿಕಾರಿಗಳನ್ನು ಅಪಾಯಿಂಟ್‌ಮೆಂಟ್ ಮಾಡುವಾಗ ಐ.ಎ.ಎಸ್. ನವರು ೮ ವರ್ಷ ಅನುಭವ ಪಡೆದ ಮೇಲೆ ಅಂತಹವರನ್ನು ಮಾತ್ರ ಜಿಲ್ಲಾಧಿಕಾರಿಗಳನ್ನಾಗಿ ಅಲ್ಲಿ ಅಪಾಯಿಂಟ್ ಮಾಡುತ್ತಿದ್ದರು. ಏಕೆಂದರೆ ಸ್ವಲ್ಪ ಕೆಲಸದ ಬಗ್ಗೆ ಪರಿಣತಿ ಪಡೆದಿರುತ್ತಾರೆ ಎಂದು. ಈಗ ತಾವು ಅದನ್ನು ಪಾಲಿಸುತ್ತಾ ಇದ್ದೀರಾ ? ನಾಲ್ಕನೆಯದು, ಗವರ್ನಮೆಂಟ್ ಲ್ಯಾಂಡನ್ನು ಅನ್‌ಆಥರೈಸ್ಡ್ ಆಕ್ಯುಪೇಷನ್ ಮಾಡಿರುವ ಬಗ್ಗೆ ಒಂದು ಬಿಲ್ಲನ್ನು ೬ ವರ್ಷಗಳಿಂದ ಪ್ರತಿಯೊಂದು ಸೆಷನ್‌ನಲ್ಲಿಯೂ ಕಡೇ ದಿವಸ ತರುವುದು ಕಾಲ ಇಲ್ಲ ಎಂದು ಮುಂದೆ ಹೋಗುವುದು, ಇದೇ ರೀತಿ ಆಗುತ್ತಿದೆ. ನಾನು ಮೊನ್ನೆ ಪ್ರೊಟೆಸ್ಟ್ ಮಾಡಿದೆ. ಮಾನ್ಯ ಮಂತ್ರಿಗಳು ಈ ಸೆಷನ್‌ನಲ್ಲಿ ಇಂಪ್ಲಿಮೆಂಟ್ ಮಾಡುತ್ತೇನೆಂದು ಹೇಳಿದರು. ಅದನ್ನು ಮಾಡಲಿಲ್ಲ. ಈ ೪ ಪ್ರಶ್ನೆಗಳಿಗೆ ಸ್ಪಷ್ಟವಾಗಿ ಉತ್ತರ ಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ಆ ಕಾನೂನು ಈ ಸಭೆಯ ಮುಂದಿದೆ. ಅದು ಈ ಸಭೆಯ ಅಧಿಕಾರಕ್ಕೆ ಒಳಪಟ್ಟಿದ್ದು. ನಾನಂತೂ ಒಪ್ಪುತ್ತೇನೆ, ಈ ಅಧಿವೇಶನದಲ್ಲೇ ಪಾಸಾಗಬೇಕು ಎನ್ನುವುದು ಸರ್ಕಾರದ ಸ್ಪಷ್ಟವಾದ ಅಭಿಪ್ರಾಯ. ಇನ್ನೊಂದು ವಿಚಾರವೇನೆಂದರೆ, ಜಿಲ್ಲಾಧಿಕಾರಿಗಳನ್ನು ಅಪಾಯಿಂಟ್ ಮಾಡುವಾಗ ೮ ವರ್ಷ ಅನುಭವ ಇರತಕ್ಕವರು ಇರಬೇಕು ಎಂದು ಹೇಳಿದ್ದಾರೆ. ಜಿಲ್ಲಾ ಪರಿಷತ್ತುಗಳು ಆದ ಮೇಲೆ ಅಲ್ಲಿ ಐಎಎಸ್ ಆಫೀಸರ್ಸ್ ಮುಖ್ಯ ಕಾರ್ಯದರ್ಶಿಗಳಾಗಿ ಹೋಗಿದ್ದಾರೆ. ಚಿಕ್ಕವಯಸ್ಸಿನವರು ಒಂದೆರಡು ವರ್ಷ ಕಡಿಮೆ ಇದ್ದವರು ಡಿ.ಸಿ. ಗಳಾಗಿ ಬಂದಿದ್ದಾರೆ. ಅವರು ಚೆನ್ನಾಗಿ ಕೆಲಸ ಮಾಡುತ್ತಾ ಇದ್ದಾರೆ. ಎಲ್ಲಾದರೂ ತೊಂದರೆ ಇದ್ದರೆ ಹೇಳಿ. ವಯಸ್ಸಿಗಿಂತ ಚೆನ್ನಾಗಿ ಕೆಲಸ ಮಾಡುವುದು ಮುಖ್ಯ. ಆಮೇಲೆ ೧೨ ಸಾವಿರ ರೂಪಾಯಿ ಪರಮಾನಕ್ಕಿಂತ ಹೆಚ್ಚು ಇದ್ದವರು ಭೂಮಿಯನ್ನು ಖರೀದಿ ಮಾಡಿದಂಥ ವಿಚಾರ. ಈಗಾಗಲೇ ಡಿಟೆಕ್ಷನ್ ಆಗಿದೆ. ಸುಮಾರು ೪೦ರಿಂದ ೫೦ ಸಾವಿರ ಕೇಸುಗಳು ಡಿಟೆಕ್ಟ್ ಆಗಿದೆ. ಅದರಲ್ಲಿ ಕೆಲವು ಇತ್ಯರ್ಥವಾಗಿದೆ. ಅವರ ಬಗ್ಗೆ ತನಿಖೆ ನಡೆಯುತ್ತಿದೆ, ಅದರಲ್ಲಿ ಹಿಂದುಮುಂದೆ ಏನೂ ಇಲ್ಲ. ಆದರೆ ಕೆಲವು ಸದಸ್ಯರ ಅಭಿಪ್ರಾಯ ಏನಿದೆ ಎಂದರೆ, ೧೨ ಸಾವಿರ ಮಿತಿ ಕಡಿಮೆ ಇದೆ ಎನ್ನುವುದು, ಮಾನ್ಯ ರೇವಣ್ಣಸಿದ್ಧಯ್ಯನವರ ಅಭಿಪ್ರಾಯ ಸಹ ಇದೇ ಆಗಿದೆ. ನಿಮ್ಮ ಅಭಿಪ್ರಾಯ ಅವರ ಅಭಿಪ್ರಾಯ........

ಶ್ರೀ ಆರ್. ವೆಂಕಟರಾಮಯ್ಯ.—ಅವರು ಹೇಳುವುದು ನಾನ್ ಅಗ್ರಿಕಲ್ಚರಲ್ ಲ್ಯಾಂಡ್, ಅವರು ಹೇಳುವುದು ಒಂದೇ ಅಭಿಪ್ರಾಯ, ನಾನು ಹೇಳುವುದೂ ಒಂದೇ ಅಭಿಪ್ರಾಯ.

ಶ್ರೀ ಎಸ್. ಆರ್. ಬೊಮ್ಮಾಯಿ.—೧೨ ಸಾವಿರ ನಾನ್ ಅಗ್ರಿಕಲ್ಚರ್‌ಗೆ ಮಿತಿ ಏನಿದೆ ಅದನ್ನು ತೆಗೆದುಹಾಕಿ ಎಂದು ಅವರು ಹೇಳಿದ್ದಾರೆ. ನಾನು ತಿದ್ದುಪಡಿ ತರುತ್ತೇನೆ, ಆಗ ತಾವು ಚರ್ಚೆಮಾಡಿ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಕ್ಯಾಂಪುಗಳ ಬಗ್ಗೆ ಹೇಳಿದ್ದೇನೆ. ಇವತ್ತು ೩ ಲಕ್ಷ ಜನ ಅಲ್ಲಿ ಇದ್ದಾರೆ. ಅವನ್ನು ರೆಗ್ಯುಲರೈಸ್ ಮಾಡಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾಡೋಣ.

ಶ್ರೀ ಕೆ.ಹೆಚ್. ಪಾಟೀಲ್.—ಶಿರಹಟ್ಟಿ ತಾಲ್ಲೂಕಿನಲ್ಲಿ ಹರಿಜನರಿಗೆ ಕೊಟ್ಟಂತ ಜಮೀನನ್ನು ಖೊಟ್ಟಿ ಸಹಿ ಮಾಡಿ ಲಪಾಟಾಯಿಸಿರುವ ವಿಷಯವನ್ನು ತಮ್ಮ ನಜರಿಗೆ ತಂದಿದ್ದೆ. ಈ ವಿಚಾರದಲ್ಲಿ ಒಂದು ತಿಂಗಳೊಳಗೆ ಕ್ರಮ ತೆಗೆದುಕೊಳ್ಳುತ್ತೀವೆಂದು ತಾವು ಹೇಳಿದ್ದಿರಿ, ಆದರೆ ತಾವು ಇಲ್ಲಿಯವರೆಗೂ ಕ್ರಮ ತೆಗೆದುಕೊಂಡಿಲ್ಲ. ಅಲ್ಲಿರತಕ್ಕ ಅಸಿಸ್ಟೆಂಟ್ ಕಮಿಷನರ್‌ರವರು, ಸಬ್‌ರಿಜಿಸ್ಟ್ರಾರ್‌ರವರು, ಖೊಟ್ಟಿ ಸಹಿ ಮಾಡಿರುವಂತ ಡಾಕ್ಯುಮೆಂಟ್ಸ್‌ಗಳನ್ನು ಹೇಗೆ ರಿಜಿಸ್ಟರ್ ಮಾಡಿದರು. ಇದರಿಂದ ಸರ್ಕಾರ ಇದೆಯೋ ಇಲ್ಲವೋ ಎನ್ನುವ ಅನುಮಾನ ಬಂದಿದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಈ ವಿಚಾರದಲ್ಲಿ ಆದಷ್ಟು ಬೇಗ ರಿಪೋರ್ಟ್ ತರಿಸಿಕೊಂಡು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಪತ್ರವನ್ನು ಸಹ ಬರೆದುಕಳುಹಿಸಿದ್ದೇನೆ. ಗುಲ್ಬರ್ಗ ಜಿಲ್ಲೆಯಲ್ಲಿ ವಿಶೇಷವಾಗಿ ಯಾದಗಿರ್ ತಾಲ್ಲೂಕಿನಲ್ಲಿ ೧೯೫೪ರ ರಿಂದ ಲ್ಯಾಂಡ್ ರೆವಿನ್ಯೂ ಅರಿಯರ್ಸ್ ವಸೂಲು ಮಾಡುತ್ತಿದ್ದಾರೆ. ಹಿಂದೆ ಕಟ್ಟಿರತಕ್ಕ ರೈತರು ಅರಿಯರ್ಸ್ ಕಟ್ಟಿರತಕ್ಕ

ರಸೀತಿಗಳನ್ನು ಕಳೆದುಕೊಂಡಿದ್ದಾರೆ. ಕೆಲವು ಸಂದರ್ಭಗಳಲ್ಲಿ ವಿಲೇಜ್ ಅಕೌಂಟೆಂಟರು ರಸೀತಿಗಳನ್ನೆ ಕೊಟ್ಟಿಲ್ಲ. ನಾನು ಕೆಲವು ಕಡೆ ಕೊಟ್ಟಿರತಕ್ಕ ರಸೀದಿಗಳ ಸ್ಯಾಂಪಲ್‌ಗಳನ್ನು ಜೋಡಿಸಿ ಮುಖ್ಯಮಂತ್ರಿಗಳಿಗೂ ತಮಗೂ ಪತ್ರ ಬರೆದು ಕಳುಹಿಸಿದ್ದೇನೆ. ಅರಿಯರ್ಸ್ ವಸೂಲು ಮಾಡುವುದರಿಂದ ಅನೇಕ ಜನ ಬಡವರಿಗೆ ತೊಂದರೆಯಾಗಿದೆ. ಅಲ್ಲದೆ ಅರಿಯರ್ಸ್ ಹೆಸರಿನಲ್ಲಿ ಸಿಕ್ಕಪಟ್ಟೆ ಹಣವನ್ನು ಕಲೆಕ್ಟ್ ಮಾಡಿಕೊಂಡು ಅದರಲ್ಲಿ ಸ್ವಲ್ಪ ಜಮಾ ಮಾಡಿ ಉಳಿದಿದ್ದನ್ನು ತಮ್ಮ ಜೇಬಿಗೆ ಹಾಕಿಕೊಳ್ಳುತ್ತಿದ್ದಾರೆ. ಇದರ ಬಗ್ಗೆ ತಾವೇನು ಹೇಳಲಿಲ್ಲ. ಮತ್ತೆ ಸಾಮಾನ್ಯವಾಗಿ ೩ ವರ್ಷಗಳಿಗೊಮ್ಮೆ ಅಧಿಕಾರಿಗಳನ್ನು ವರ್ಗಾವಣೆ ಮಾಡುತ್ತೀರಿ. ಕೆಲವು ಸಂದರ್ಭಗಳಲ್ಲಿ ೨ ವರ್ಷಕ್ಕೆ ವರ್ಗಾವಣೆ ಮಾಡಿರುವುದು ಇದೆ. ನಮ್ಮಲ್ಲಿರತಕ್ಕ ಒಬ್ಬ ತಹಶೀಲ್ದಾರರು ಐದುವರೆ ವರ್ಷಗಳಿಂದ ಒಂದೇ ಕಡೆ ಇದ್ದು ನೂರಾರು ಅಪಾದನೆಗಳು ಅವರ ಮೇಲಿದೆ. ಆದ್ದರಿಂದ ಆಡಳಿತದ ಹಿತದೃಷ್ಟಿಯಿಂದ ಈ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಸಾಮಾನ್ಯವಾಗಿ ೩ ವರ್ಷಗಳಿಗೊಮ್ಮೆ ವರ್ಗಾವಣೆಯಾಗುತ್ತದೆ. ತಾವು ಹೇಳುವ ವಿಚಾರದಲ್ಲಿ ಡಿಲೆ ಆಗಿದೆ. ಈ ವರ್ಷ ವರ್ಗಾವಣೆ ಮಾಡೋಣ. ೧೯೫೪ ರಿಂದ ಬಾಕಿ ಇರತಕ್ಕ ಕಂದಾಯವನ್ನು ವಸಲು ಮಾಡುವುದಕ್ಕೆ ಬರುವುದಿಲ್ಲ. ಇದರ ಬಗ್ಗೆ ಕೂಡಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ರೆವಿನ್ಯೂ ಇಲಾಖೆಯನ್ನು ಪುನರ್‌ಸಂಘಟನೆ ಮಾಡುವ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ, ಹಿಂದೆ ಇದ್ದಂಥ ಸ್ಟೇಟಸ್ ಸ್ಟೇಟಸ್ ಅದಕ್ಕೆ ಹೋಗಿದೆ. ತಾಲ್ಲೂಕು ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ there should be a status and role to eveune Department. There should be one Department which represent the Government.

ರೆಸ್ಟೋರ್ ಮಾಡಬೇಕೆಂದು ಹೇಳಿದ್ದೆ ಇದರ ಬಗ್ಗೆ ಏನು ಹೇಳಲಿಲ್ಲ. ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ ಟೆನೆನ್ಸಿ ಅರ್ಜಿಯ ಬಗ್ಗೆ ಹೇಳಿದ್ದೆ. ೩೫೦೦ ಅರ್ಜಿಗಳ ಬಗ್ಗೆ ರಿಟ್ ಹಾಕಿದ್ದರು. ಅವುಗಳಲ್ಲಿ ಮೆರಿಟ್ ಇದ್ದಂಥ ಕೇಸುಗಳಾದರೂ ಕೂಡ, in its wisdom the High Court has rejected all the 3,500 cases. It is not as if the Government has come to the conclusion that rest of the cases are not fit for filing writ. ೩೫೦೦ ಅರ್ಜಿಗಳನ್ನು ರಿಜೆಕ್ಟ್ ಮಾಡಿದ್ದಾರೆ. The Secretariat also holds the opinion that they are fit cases, but the High Court has taken some view. It these cases deserve any amendment to the Act. the Government should not hesitate to do so. ದಯವಿಟ್ಟು ಇದರ ಬಗ್ಗೆ ಪರಿಶೀಲಿಸಿದರೆ ಒಂದು ಸಂದರ್ಭ ನ್ಯಾಯ ದೊರೆಯುವುದಕ್ಕೆ ಸಾಧ್ಯತೆ ಇದೆ. ನ್ಯಾಚುರಲ್ ಕೆಲಾಮಿಟೀಸ್‌ಗೆ ಸಂಬಂಧಪಟ್ಟ ಕೋಡ್‌ಗೆ ತಿದ್ದುಪಡಿ ಮಾಡಬೇಕೆಂದು ಹೇಳಿದ್ದೆ. ಭದ್ರಾವತಿಗೆ ಸಂಬಂಧಪಟ್ಟಂತೆ ತುಂಬಾ ಕ್ಯಾಷುಯಲ್ಲಾಗಿ ಟ್ರೀಟ್ ಮಾಡಿದ್ದೀರಿ. You must send a team so that what would be done after wards can be thought of. ಆಮೇಲೆ ಕೇಂದ್ರ ಸರ್ಕಾರಕ್ಕೆ ಕೇಳೋಣ. ನೀವು ಬರೀ ಸ್ಟೇಟ್‌ಮೆಂಟ್ ಕೊಟ್ಟರೆ ಜನಗಳಿಗೆ ಏನು ಮಾಡಂತಾಗುವುದಿಲ್ಲ

೧-೦೦ ಪಿ.ಎಂ.

ಶ್ರೀ ಎಸ್.ಆರ್. ಬೊಮ್ಮಾಯಿ.—ಭದ್ರಾವತಿ ವಿಚಾರದಲ್ಲಿ ಈ ಇಲಾಖೆಯ ಎಲ್ಲ ಮುಖ್ಯಾಧಿಕಾರಿಗಳನ್ನು ಮತ್ತು ಜಿಲ್ಲಾಧಿಕಾರಿಗಳನ್ನು ಒಳಗೊಂಡ ಒಂದು ಸಭೆಯನ್ನು ನಾಳೆ ಕರೆದಿದ್ದೇನೆ. Friday, I have calied the meeting to discuss and what relifef could be immediately given. ನಂತರ ಒಂದು ನಿರ್ಣಯವನ್ನು ನಾವು ತೆಗೆದುಕೊಳ್ಳುತ್ತೇವೆ.

ಇನ್ನು ಈ ಕಂದಾಯ ಇಲಾಖೆಗೆ ಮೊದಲು ಇದ್ದ ಗೌರವ ವಾಪಸು ಬರಬೇಕೆಂದು ಹೇಳಿದ್ದಾರೆ ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಡೀ ಜಿಲ್ಲೆಗೆ ಜಿಲ್ಲಾಧಿಕಾರಿಯವರು ಮುಖ್ಯಸ್ಥರು. ಮೊದಲು ಜಿಲ್ಲಾಧಿಕಾರಿ ಎಂದರೆ ಆತನೇ ಸರ್ಕಾರ ಎನ್ನುವಂತಿದ್ದ. ನಾವು ಈಗ ಬಂದು ಹೊಸ ನೀತಿಯನ್ನು ನಿರೂಪಿಸಿದ್ದೇವೆ. ಅಭಿವೃದ್ಧಿ ಕೆಲಸಕಾರ್ಯಗಳನ್ನು ನಾವು ಜಿಲ್ಲಾ ಪರಿಷತ್ತುಗಳಿಗೆ ವಹಿಸಿ

ಕೊಟ್ಟಿದ್ದೇವೆ. ಅಭಿವೃದ್ಧಿ ಕೆಲಸಗಳನ್ನು ಮಾಡಿಸತಕ್ಕ ಅಧಿಕಾರಿಗೆ ಮುಖ್ಯ ಕಾರ್ಯದರ್ಶಿ ಎಂತಲೂ ಕೂಡ ನಾವು ಕರೆದಿದ್ದೇವೆ. ಈಗ ಕಂದಾಯ ಇಲಾಖೆಯಲ್ಲಿ ಅಧಿಕಾರವನ್ನು ಚಲಾಯಿಸತಕ್ಕದ್ದು ಬೈಫರ್ಕೇಟ್ ಆಗಿದೆ. ಈಗ ಏನಾಗಿದೆ ಎಂದರೆ ಕೆ.ಇ.ಬಿ.ಯಲ್ಲಿ ಇರತಕ್ಕ ಅಧಿಕಾರಿಗಳಿಗೆ, ಅಸಿಸ್ಟೆಂಟ್ ಇಂಜನಿಯರ್‌ಗಳಿಗೆ, ಹಾರ್ಟಿಕಲ್ಚರ್ ಇಲಾಖೆಯ ಅಧಿಕಾರಿಗಳಿಗೆ ನಮ್ಮ ತಹಸೀಲ್ದಾರ್‌ರವರಿಗಿಂತಲೂ ಹೆಚ್ಚಿನ ಸಂಬಳ ಬರುತ್ತದೆ. ಆದ್ದರಿಂದ ತಹಸೀಲ್ದಾರ್‌ರವರು ಏನಾದರೂ ಸಭೆಯನ್ನು ಕರೆದರೆ ಈ ಅಧಿಕಾರಿಗಳಾರೂ ಅಲ್ಲಿಗೆ ಹೋಗುವುದಿಲ್ಲ. ಇದನ್ನು ಗಮನಿಸಿ ಇನ್ನು ಮುಂದೆ ತಹಸೀಲ್ದಾರ್‌ರವರಿಗೆ ಹೆಚ್ಚಿನ ಸ್ಥಾನಮಾನ ಕೊಡಬೇಕೆಂದಿದ್ದೇವೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ. ಮಾನ್ಯ ಸದಸ್ಯರು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ.

SRI K.H. SRINIVAS.—You should restore them some status or you should resort to mercy killing. ಆದರೆ ಈ ರೀತಿಯ ದುರವಸ್ಥೆ ಬೇಡ. ತಹಸೀಲ್ದಾರವರು ಮೀಟಿಂಗ್ ಕರೆದಾಗ ಈ ಅಧಿಕಾರಿಗಳು ಅಲ್ಲಿಗೆ ಹೋಗದಿದ್ದರೆ ಹೇಗೆ ?

SRI S R. BOMMAI.—Earlier Revenue Department was the mother of all departments. ಈಗ ಈ ಇಲಾಖೆ ತಾಯಿ ಅಲ್ಲ, ಅಜ್ಜಯಾದ್ದರಿಂದ ಯಾರೂ ಇದನ್ನು ಮಾತನಾಡಿಸುವುದಿಲ್ಲ. ಆದ್ದರಿಂದ ಪುನ: ಯಾವರೀತಿ ಈ ಇಲಾಖೆ ಸಮರ್ಥವಾಗಿ ಕೆಲಸಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಈಗ ಡಿಲೇ ಕಂಡೋನ್ ಮಾಡದೆ ಕೆಲವು ಡಿಸ್‌ಮಿಸ್ ಮಾಡಿದ್ದೇವೆ. ಇದಕ್ಕೆ ತಿದ್ದುಪಡಿಯನ್ನು ಮಾಡುವಾಗ ಇದನ್ನು ಯೋಚನೆ ಮಾಡುತ್ತೇವೆ.

ಶ್ರೀ ಬಿ. ಲಕ್ಕಪ್ಪ.—ಸ್ವಾಮಿ, ಫ್ರಾಗ್ಮೆಂಟೇಷನ್ ಕಾನೂನು ಏನಿದೆ ಇದನ್ನು ತಾವು ತೆಗೆದುಹಾಕ ಬೇಕು. ಇದರಿಂದಾಗಿ ನಿರುದ್ಯೋಗ ಸಮಸ್ಯೆ ಉದ್ಭವವಾಗುತ್ತದೆ. ಅಣ್ಣ ತಮ್ಮಂದಿರು ಆಸ್ತಿಗೋಸ್ಕರ ಹೊಡೆದಾಟ, ಬಡಿದಾಟ ಮಾಡಿಕೊಳ್ಳುವುದು ತಪ್ಪುತ್ತದೆ, ತಂದೆ ಬರೆದಿಟ್ಟ ವಿಲ್ ಇತ್ಯರ್ಥವಾಗುವುದಿಲ್ಲ. ನಮ್ಮ ರಾಜ್ಯದಲ್ಲೇ ಕೆಲವು ಕಡೆ ಈ ಕಾನೂನು ಜಾರಿಯಲ್ಲಿದೆ, ಮತ್ತೆ ಕೆಲವು ಕಡೆ ಜಾರಿಯಲ್ಲಿಲ್ಲ ಆದ್ದರಿಂದ ಇಡೀ ರಾಜ್ಯದಲ್ಲಿ ಏಕರೂಪವಾಗಿರುವಂತೆ ಈ ಕಾನೂನನ್ನು ತಿದ್ದುಪಡಿ ಮಾಡಬೇಕು ಇಲ್ಲವೇ ರದ್ದು ಮಾಡಬೇಕು.

ಇನ್ನು ಎರಡನೆಯದಾಗಿ ನಿಮ್ಮ ಸರ್ವೆ ಡಿಪಾರ್ಟ್‌ಮೆಂಟಿನಲ್ಲಿ ರೈತರಿಗೆ ಅವಶ್ಯಕವಾಗಿ ಬೇಕಾದ ನಕಾಸೆ ಸಿಕ್ಕುತ್ತಿಲ್ಲ. ರೈತರು ತಮ್ಮ ಜಮೀನಿನ ವಿಸ್ತೀರ್ಣ ಎಷ್ಟು ಇದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಇದೇ ಮುಖ್ಯ ಆಧಾರ. ರೈತರು ಈ ನಕಾಸೆಯನ್ನು ದುಡ್ಡು ಕೊಟ್ಟು ಕೊಂಡುಕೊಳ್ಳುವುದಕ್ಕೂ ತಯಾರಿದ್ದಾರೆ. ಆದರೆ ಇದು ಸಿಕ್ಕುತ್ತಿಲ್ಲ. ಆದ್ದರಿಂದ ನಕಾಸೆಗಳನ್ನು ವ್ಯವಸ್ಥಿತವಾಗಿ ಬರೆಸಿ ಅದನ್ನು ಹೆಚ್ಚು ಹೆಚ್ಚು ಅಚ್ಚು ಹಾಕಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮೂರನೆಯದಾಗಿ ಕಂಡೀಷನ್ ಲ್ಯಾಂಡ್ ಏನಿದೆ ಅದು ಹರಿಜನರಿಗೆ ಕೊಟ್ಟಿರತಕ್ಕದ್ದು. ಅದನ್ನು ರಿಜಿಸ್ಟರ್ ಮಾಡುವುದು ತಪ್ಪಲ್ಲವೆ? ಪಹಣಿ, ಟೈಟಲ್ ಡೀಡ್ ಇದ್ದರೆ ಮಾತ್ರ ಅಂಥ ಜಮೀನನ್ನು ಸಬ್ ರಿಜಿಸ್ಟ್ರಾರ್‌ರವರು ರಿಜಿಸ್ಟರ್ ಮಾಡಬೇಕು. ಆದರೆ ಪಹಣಿ, ಟೈಟಲ್ ಡೀಡ್ ಇಲ್ಲದೆ ಯಾವುದೋ ಒಂದು ಪೇಪರ್‌ನ ಆಧಾರದಮೇಲೆ ರಿಜಿಸ್ಟ್ರಾರ್‌ರವರು ರಿಜಿಸ್ಟರ್ ಮಾಡಿದ್ದಾರೆ. ಈ ರೀತಿ ಆದರೆ 1 ಪರ್ಸೆಂಟ್ ಕೂಡ ಹರಿಜನರು ತಮಗೆ ಕೊಟ್ಟ ಜಮೀನಿನಲ್ಲಿ ಇರುವುದಕ್ಕೆ ಸಾಧ್ಯವಿಲ್ಲ. ಹರಿಜನರಿಗೆ ಕೊಟ್ಟಿದ್ದ ಜಮೀನನ್ನು ತಹಶೀಲ್ದಾರ್‌ರವರು ಪೊಸಿಷನ್ ಕೊಡಿಸಿ ಬಂದರೆ ಹಿಂದಿನಿಂದ ಪೋಲೀಸರು ಹೋಗಿ ಅದನ್ನು ವಾಪಸು ಕೊಡಿಸಿ ಬರುತ್ತಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಫ್ರಾಗ್ಮೆಂಟೇಷನ್ ಕಾನೂನನ್ನು ತೆಗೆದುಹಾಕಬೇಕು, ತೆಗೆದುಹಾಕಬಾರದು ಎಂದು ಎರಡು ವಿಧವಾದ ಅಭಿಪ್ರಾಯಗಳಿವೆ. ಒಂದು ವರ್ಗ ಹೇಳುತ್ತದೆ ಈ ಕಾನೂನನ್ನು ತೆಗೆದುಹಾಕಬೇಕು ಎಂದು ಇನ್ನೊಂದು ವರ್ಗ ಹೇಳುತ್ತದೆ ಇದು ಇರುವುದರಿಂದ ಚಿಕ್ಕ ಪುಟ್ಟ ಹಿಡುವಳಿಯಿಂದ ಸರ್ಕಾರಕ್ಕೆ ಹೆಚ್ಚಿಗೆ ಆದಾಯ ಬರುತ್ತದೆ ಎಂದು ಈ ರೀತಿಯ ಎರಡು ವಿಧದ ಅಭಿಪ್ರಾಯ ಇರುವುದರಿಂದ ಅವಷ್ಟು ಬೇಗ ಇದರ ಬಗ್ಗೆ ಸರ್ಕಾರ ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತದೆ. ಮತ್ತೊಂದು ವಿಷಯವನ್ನು ಮಾನ್ಯ ಸದಸ್ಯರು ಹೇಳಿದರು, ಏನೆಂದರೆ ಲಂಚವನ್ನು

ಕೊಟ್ಟಮೇಲೂ ಕೂಡ ಭೂಮಿಯನ್ನು ಬಿಡಂತಿಲ್ಲವೆಂದು ಹೇಳಿದ್ದಾರೆ. ಈ ಬಗ್ಗೆ ವಿವರಗಳನ್ನು ಕೊಟ್ಟರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತೆ ನಕಾಶೆಬಗ್ಗೆ ಹೇಳಿದ್ದಾರೆ. ಆದಷ್ಟು ಜಾಗ್ರತೆಯಾಗಿ ನಕಾಶೆಗಳನ್ನು ಪ್ರಿಂಟ್ ಮಾಡಿಸಿ ಒದಗಿಸತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಫ್ರಾಗ್ಮೆಂಟೇಷನ್ ಆಕ್ಟ್ ಪ್ರಕಾರ ಪುನರ್ ಪರಿಶೀಲನೆ ಮಾಡತಕ್ಕಂಥ ಪ್ರಮೇಯವಿರುವುದಿಲ್ಲ. ರೂಲಾಕ್ಸ್ ಮಾಡಿದ್ದಾರೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಬಹಳ ಕಡೆ ಒತ್ತಡ ಇದೆ, ಸೌತ್ ಕೆನರಾಕ್ಕೆ ಮಾತ್ರ ರೂಲ್ಸನ್ನು ರಿಲಾಕ್ಸ್ ಮಾಡಿದ್ದೇವೆ.

SRI B. BASAVALINGAPPA.—I am so sorry. It was relaxed. Then large scale misuse of that relaxation was done particularly in Cities. Again, it was restored back. The Fragmentation Act was restored. ಅದಕ್ಕಾಗಿ ಹೇಳುತ್ತಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಾನೂನು ಇದೆ. ಮತ್ತೆ ಒತ್ತಾಯ ಮಾಡಿದ್ದರಿಂದ ಅದನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದೇನೆ.

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ಕಂದಾಯ ಇಲಾಖೆಯಲ್ಲಿ ಅತಿಮುಖ್ಯವಾದ ದಾಖಲಾತಿಗಳು ತುಂಡುತುಂಡಾಗಿದೆ. ಟಿಪ್ಪಣ ಕಾಪಿಗಳು ಪುಡಿಪುಡಿಯಾಗಿದೆ. ಮುಖ್ಯವಾಗಿ ಜಮೀನು ಮಾಲೀಕರು ತಮ್ಮ ಜಮೀನಿನ ಅದ್ದುಬಸ್ತನ್ನು ನೋಡಿಕೊಳ್ಳಬೇಕೆಂದರೆ ಟಿಪ್ಪಣಿ ಕಾಪಿ ಬೇಕಾಗುತ್ತದೆ. ಆದ್ದರಿಂದ ಇದನ್ನು ದುರಸ್ತು ಮಾಡಬೇಕೆನ್ನುವ ವಿಚಾರ ಒಂದು: ಮತ್ತೆ ಗ್ರಾಮಗಳ ಗಡಿ ಮ್ಯಾಪ್ಸ್ ಬಹಳ ಮುಖ್ಯವಾಗಿ ಬೇಕಾಗುತ್ತದೆ. ತೀವ್ರಗತಿಯಲ್ಲಿ ಅವುಗಳು ದೊರೆಯತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದೂ ನನ್ನ ಕೋರಿಕೆ. ಮತ್ತೆ ೩೦ ವರ್ಷಗಳ ಹಿಂದೆ ರಿಕ್ಲಾಸಿಫಿಕೇಷನ್ ಸರ್ವೆ ಆಗಿದ್ದು ಇಲ್ಲಿಯವರೆಗೆ ರಿಕ್ಲಾಸಿಫಿಕೇಷನ್ ಸರ್ವೆ ಆಗಿಲ್ಲ. ಆದ್ದರಿಂದ ತೀವ್ರಗತಿಯಲ್ಲಿ ರಿಕ್ಲಾಸಿಫಿ ಸರ್ವೆ ಮಾಡಿಸಬೇಕು. ಮತ್ತೆ ಭೂಹೀನ ರೈತರು ಸರ್ಕಾರಿ ಜಮೀನುಗಳನ್ನು ಸಾಗುವಳಿ ಮಾಡಿಕೊಂಡಿರುತ್ತಾರೆ. ಅವರಿಗೆ ಸಾಗುವಳಿ ಚೀಟಿಯನ್ನು ಕೊಡದಿರುವುದರಿಂದ ಸಾಗುವಳಿ ಮಾಡಿಕೊಂಡಿರುವವರ ಮೇಲೆ ದೌರ್ಜನ್ಯ ಮಾಡಿ ಭೂಮಿಯನ್ನು ಪಡೆದುಕೊಂಡು ಸ್ವಾಧೀನ ಮಾಡಿಕೊಳ್ಳುತ್ತಿರುವ ಕೆಲವೊಂದು ಪ್ರಕರಣಗಳು ಇರುತ್ತದೆ. ೧೯೭೮ಕ್ಕೆ ಮೊದಲಿನಿಂದಲೂ ಸಾಗುವಳಿ ಮಾಡುತ್ತಿರುವಂಥವರಿಗೆ ಸಾಗುವಳಿ ಚೀಟಿಯನ್ನು ಕೊಡಲು ಸಂಬಂಧಪಟ್ಟವರಿಗೆ ನಿರ್ದೇಶಿಸಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೇ, ಬಗರ್‌ಹುಕ್ಕುಂ ಸಾಗುವಳಿ ಬಗ್ಗೆ ಈಗಾಗಲೇ ಹೇಳಿದ್ದೇವೆ. ಕಾನೂನು ಪಾಸ್ ಮಾಡತಕ್ಕಂಥದ್ದರ ಬಗ್ಗೆ ಹೇಳಿದ್ದೇನೆ. ೧೯೭೮ಕ್ಕಿಂತ ಮೊದಲು ಸಾಗುವಳಿ ಮಾಡುತ್ತಿರುವವರನ್ನು ಹೊರಗೆ ಹಾಕದಹಾಗೆ ಸರ್ಕಾರದ ಆದೇಶ ಇದೆ. ವಿಶೇಷ ಪ್ರಕರಣಗಳಲ್ಲಿ ವಿವರಣೆಗಳನ್ನು ಕೊಟ್ಟಲ್ಲಿ ರಕ್ಷಣೆಯನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇನೆ. ಇನ್ನು ಮಾನ್ಯ ಸದಸ್ಯರು ರೆಕಾರ್ಡ್ಸ್ ಬಗ್ಗೆ ಹೇಳಿದ್ದಾರೆ. ಇದು ಬಹಳ ಸೂಕ್ತವಾದ ಸಲಹೆಯಾಗಿದೆ. ಇದರ ಬಗ್ಗೆ ಸರ್ಕಾರ ಈಗಾಗಲೇ ಹಂತಹಂತವಾಗಿ ಪ್ರಯತ್ನ ಮಾಡುತ್ತಿದೆ. ಮೈಕ್ರೋ ಫಿಲಮಿಂಗ್ ಇಂಟ್ರಡ್ಯೂಸ್ ಮಾಡತಕ್ಕಂಥದ್ದನ್ನು ಇದರಲ್ಲಿ ಮಾಡುತ್ತೇವೆ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ ಬಗರ್ ಹುಕ್ಕುಂ ಸಾಗುವಳಿ ೧೯೭೮ನೇ ಇಸವಿಯಿಂದ ಆಚೆಗೆ ಇರುವವರಿಗೆ ಮಾತ್ರ ಮಾನ್ಯ ಸಚಿವರು ಹೇಳಿದ್ದಾರೆ. ೧೯೭೮ನೇ ಇಸವಿಯಿಂದ ಈಚೆಗೆ ಸಾಗುವಳಿ ಮಾಡಿರತಕ್ಕಂಥವರು ಕೂಡ ಬಡವರೇ ಇರುತ್ತಾರೆ. ಅವರೇನು ಶ್ರೀಮಂತ ಜಮೀನುದಾರರಲ್ಲ. ಈಗ ಬಗರ್‌ಹುಕ್ಕುಂ ಸಾಗುವಳಿ ಮಾಡಿರುವವರಿಗೂ ಅನುಕೂಲವಾಗುವಂಥ ರೀತಿಯಲ್ಲಿ ತಾವು ಕಾನೂನನ್ನು ತರಬೇಕು. ಅವರಿಗೂ ಸಹಾಯವನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—೧೯೭೮ನೇ ಇಸವಿಯಿಂದ ಈಚೆಗೆ ಬಗರ್‌ಹುಕ್ಕುಂ ಸಾಗುವಳಿ ಮಾಡಿರುವವರಿಗೆ ಅನುಕೂಲವಾಗುವಂತೆ ಕಾನೂನನ್ನು ಮಾಡುವುದಕ್ಕೆ ಆಗುವುದಿಲ್ಲ. ಸರ್ಕಾರಿ

ಜಮೀನನ್ನು ಬಡವರ ಹೆಸರಿನಲ್ಲಿ ಶ್ರೀಮಂತರು ಕಬಳಿಸತಕ್ಕಂಥ ಪ್ರಯತ್ನಗಳು ನಡೆಯುತ್ತಿದೆ. ಬಡವರಿದ್ದರೆ ಅವರಿಗೆ ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರ ಕೊಡಲು ಪ್ರಯತ್ನ ಮಾಡೋಣ.

ಶ್ರೀ ಜಿ. ರಾಜೂಗೌಡ.—ಮಾನ್ಯ ಅಧ್ಯಕ್ಷರೇ, ಕೆಲವಾರು ರೈತರು ಜಮೀನನ್ನು ವ್ಯವಸಾಯ ಮಾಡದೆ ಹತ್ತಾರು ವರ್ಷಗಳಿಂದ ಬಂಜರು ಬಿಟ್ಟುಕೊಂಡಿರುತ್ತಾರೆ. ಅಂಥ ಭೂಮಿಯನ್ನು ಬಡವರಿಗೆ ಭೂರಹಿತರಿಗೆ ಹಂಚಿದರೆ ಉತ್ಪನ್ನ ಜಾಸ್ತಿಯಾಗುವುದಲ್ಲದೆ ಬಡವರಿಗೆ ಭೂಮಿಯು ದೊರೆತಂತಾಗುತ್ತದೆ. ಅದಕ್ಕೆ ಉತ್ತರ ಹೇಳಬೇಕು.

ಮತ್ತೆ ೧೯೭೦ರಕ್ಕಿಂತ ಹಿಂದೆ ಯಾರು ಬಗರ್‌ಹುಕುಂ ಸಾಗುವಳಿ ಮಾಡಿದ್ದರು ಅದನ್ನು ಪರಿಶೀಲನೆ ಮಾಡುವುದಕ್ಕೆ ಒಂದು ಸಮಿತಿಯನ್ನು ಮಾಡಿ ಅದಕ್ಕೆ ಡಿ.ಸಿ. ಯವರನ್ನು ಅಧ್ಯಕ್ಷರನ್ನಾಗಿ ಮತ್ತು ತಾಲ್ಲೂಕಿನ ಶಾಸಕರನ್ನು ಸದಸ್ಯರನ್ನಾಗಿ ಮಾಡಿದಿರಿ. ತಾಲ್ಲೂಕಿನಲ್ಲಿ ೩-೪ ಜನ ಶಾಸಕರು ಇರುತ್ತಾರೆ. ಆದ್ದರಿಂದ ಯಾರು ಎಂಬುದು ಪರ್ಟಿಕ್ಯುಲರ್ ಆಗಿ ಇಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಬಗ್ಗೆ ಈಗಾಗಲೇ ಉತ್ತರಿಸಿದ್ದೇನೆ, ೩ ಜನರಿದ್ದರೆ ಅವರಲ್ಲಿ ಒಬ್ಬರು ಸದಸ್ಯರಿರುತ್ತಾರೆ. ಸರ್ಕಾರ ಯಾರನ್ನು ನೇಮಿಸುತ್ತದೋ ಅವರು ಆಗುತ್ತಾರೆ.

ಶ್ರೀ ಜಿ. ರಾಜೂಗೌಡ.—೪ ವರ್ಷಗಳಿಂದ ಕೆಲವರು ತಮ್ಮ ತಮ್ಮ ಜಮೀನನ್ನು ಬಂಜರು ಬಿಟ್ಟಿದ್ದಾರೆ, ಇದರಿಂದ ಬಡವರಿಗೆ ಭೂಮಿ ಸಿಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರು ಹೇಳತಕ್ಕದ್ದು ಜಮೀನು ಸಾಗುವಳಿ ಮಾಡದೆ ಹಾಗೆ ಬಿಟ್ಟಿದ್ದಾರೆ ಎಂದು. ಆ ಬಗ್ಗೆ ಆಲೋಚಿಸುತ್ತಿದ್ದೇವೆ, ಹಾಗೆ ಬಿಡುವುದಕ್ಕೆ ಆಗದು. ಅಂಥ ಭೂಮಿಯನ್ನು ವಾಪಸ್ಸು ತೆಗೆದುಕೊಂಡು ಬೇರೆಯವರಿಗೆ ಕೊಡುವ ಆಲೋಚನೆ ಮಾಡುತ್ತೇವೆ.

ಶ್ರೀ ಸಿ.ಎಂ. ರೇವಣ್ಣಸಿದ್ದಯ್ಯ.—ಭೂಸುಧಾರಣಾ ಕಾನೂನು ಬಗ್ಗೆ ಮುಂದಿನ ಅಧಿವೇಶನದಲ್ಲಿ ತಿದ್ದುಪಡಿಗಳನ್ನು ತರುತ್ತೇವೆಂದು ಈ ಹಿಂದೆ ಹೇಳಿದ್ದರು. ಆದರೆ ತರಲಿಲ್ಲ, ನಾನು ಬಹಳ ಸಾರಿ ಹೇಳಿದ್ದೆ, ವಾಸ್ತವಿಕವಾಗಿ ಕೆಲವು ಕಲಂಗಳ ಪ್ರಕಾರ ಭೂ ಒಡೆಯರು ತೊಂದರೆಗೀಡಾಗಿದ್ದಾರೆ. ೭ನೇ ನಂಬರ್‌ನಲ್ಲಿ ಅದಂತಹ ಜಮೀನನ್ನು ಬಿಟ್ಟದ್ದು ಆಗಿದೆ, ಸರ್‌ಪ್ಲಸ್ ಭೂಮಿಯನ್ನು ಬಿಟ್ಟದ್ದು ಆಗಿದೆ. ಇನ್ನು ಕೆಲವು ಭೂಮಿಗಳ ಬಗ್ಗೆ ಅವಾಸ್ತವಿಕವಾಗಿ ಕೆಲವು ಸೆಕ್ಷನ್‌ಗಳು ಇವೆ, ಅವನ್ನು ಎಂದೂ ಅಳವಡಿಸುವುದಕ್ಕೆ ಸಾಧ್ಯವಿಲ್ಲ. ಅಂಥವನ್ನು ಇಟ್ಟಿದ್ದೀರಿ. ಅವುಗಳಿಗೆ ಆದಷ್ಟು ಜಾಗ್ರತೆ ತಿದ್ದುಪಡಿಗಳನ್ನು ತರಬೇಕೆಂದು ಮತ್ತೊಂದು ಸಾರಿ ಒತ್ತಾಯಿಸುತ್ತೇನೆ. ಆದಷ್ಟು ಮಟ್ಟಿಗೆ ಇದೇ ಅಧಿವೇಶನದಲ್ಲಿ ತಿದ್ದುಪಡಿಗಳನ್ನು ತಂದರೆ ಒಳ್ಳೆಯದು. ಈಗ ತುಂಡುಭೂಮಿಗಳು ರಿಜಿಸ್ಟರ್ ಆಗದಂತೆ ಕಾನೂನಾಗಿದೆ. ಅದು ಸರಿಯಲ್ಲವೆಂದು ಕೇಳಿದ್ದೇನೆ. ಅನೇಕ ಮಂದಿ ಬಡವರಿಗೆ ತುಂಡು ಭೂಮಿ ಇರುತ್ತದೆ. ಅಪತ್ಕಾಲದಲ್ಲಿ ಅದನ್ನು ಮಾರಿಕೊಳ್ಳಬೇಕಾಗುತ್ತದೆ. ತುಂಡು ಭೂಮಿಯನ್ನು ಮಾರಾಟ ಮಾಡಲೇ ಬಾರದು ಅಂದರೆ ಏನು ಅರ್ಥ? ಬೇರೆ ಯಾವ ಆಸ್ತಿಗಳಿಗೂ ಈ ರೀತಿ ಮಿತಿ ಇಲ್ಲ. ಆಸ್ತಿ ಎಷ್ಟೇ ಇರಲಿ ಅದನ್ನು ಮಾರಿಕೊಳ್ಳತಕ್ಕ ಹಕ್ಕು ಎಲ್ಲಾ ಜನರಿಗೂ ಇದೆ. ಆದರೆ ರೈತ ಮಾತ್ರ ತುಂಡು ಭೂಮಿಯನ್ನು ಮಾರಬಾರದು ಅಂದರೆ ಅದನ್ನು ಅವನು ಏನು ಮಾಡಬೇಕು ? ಪರ್ಮಿಷನ್ ಸೆಕ್ಷನ್ ಇಲ್ಲದಿದ್ದರೆ ಕೇಡವರಿಗೆ ಲಂಚ ಕೊಟ್ಟು ಮಾರುವ ವ್ಯವಸ್ಥೆ ಮಾಡಿಕೊಳ್ಳಬೇಕು. ಇದು ಸರಿಯಲ್ಲ. ಎಷ್ಟೇ ಭೂಮಿ ಇದ್ದರೂ ಅದನ್ನು ಮಾರಿಕೊಳ್ಳತಕ್ಕ ವ್ಯವಸ್ಥೆ ಆಗಬೇಕು. ಇಲ್ಲದಿದ್ದರೆ ಬಡವರಿಗೆ ಬಹಳಷ್ಟು ತೊಂದರೆ ಆಗುತ್ತದೆ. ಇದು ಎಲ್ಲಾ ರೈತ ಸಂಘಗಳ ಬೇಡಿಕೆ ಕೂಡ ಆಗಿದೆ. ೭ನೇ ನಂಬರ್‌ನಲ್ಲಿ ಭೂಮಿ ಕೊಂಡವರಿಗೆ ೧೦ ಎಕರೆ ಭೂಮಿ ಪರಿಮಿತಿಯವರೆಗೆ ೧೯೭೪ರಿಂದ ಈಚೆಗೆ ಇರತಕ್ಕ ಕಂತುಗಳನ್ನು ಮಾಫಿ ಮಾಡುತ್ತೇವೆಂದು ಹೇಳಿದ್ದೀರಿ. ೧೯೭೪ರ ನಂತರ ಕಂತುಗಳು ಏನಿವೆ ಅವಕ್ಕೆ ಪ್ರೀಮಿಯಂ ಕಟ್ಟಬೇಕಾಗಿಲ್ಲ. ೧೯೭೩ ರಿಂದ ೧೯೭೦ರ ಅವಧಿಯಲ್ಲಿ ಭೂಮಿ ಪಡೆದ ಸಣ್ಣ ಹಿಡುವಳಿದಾರರು ಕಂತುಗಳನ್ನು ಕಟ್ಟಿಲ್ಲ. ಅವರಿಗೆ ಲಾಭ ಸಿಗುವ ಹಾಗೆ ಇಲ್ಲ, ಆದ್ದರಿಂದ ಅವರಿಗೂ ಸಹ ಅನ್ವಯಿಸುವಂತೆ ಮಾಡಬೇಕು. ೧೯೭೪ರೊಳಗೆ ಇರತಕ್ಕವರಿಗೆ ಕಂತುಗಳು ಬಹಳ ಇದ್ದರೆ ೧೯೭೪ರ ನಂತರದ ಪ್ರೀಮಿಯಂ ಲಾಭ ದೊರಯಬೇಕು. ಅದಕ್ಕೆ ಹಿಂದೆ ಇರತಕ್ಕವರು ಪ್ರೀಮಿಯಂ ಡೀಫಾಲ್ಟರ್ ಆಗಿದ್ದರೆ ಅವರಿಗೂ ಇರತಕ್ಕ ಭಾಗವನ್ನು ಮಾಫಿ ಮಾಡಬೇಕು. ಹಳ್ಳಿಗಳಲ್ಲಿ ಮನೆ ಕಟ್ಟುವುದಕ್ಕೆ ಅನುಮತಿ ಪಡೆಯಲು ಟೌನ್ ಪ್ಲಾನಿಂಗ್ ಅಥಾರಿಟಿಯವರಿಗೆ ಬರಬೇಕಾಗಿದೆ. ಒಂದು

ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಕಡೆ ಟೌನ್ ಪ್ಲಾನಿಂಗ್ ಅಥಾರಿಟಿಯವರಿಗೆ ಅಧಿಕಾರ ಕೊಟ್ಟಿದ್ದೀರಿ. ಇದು ಸಾಧ್ಯವೇ ? ಅದೇನು ಸಾವಿರಾರು ರೂಪಾಯಿ ಬೆಲೆ ಬಾಳತಕ್ಕ ಭೂಮಿ ಅಲ್ಲ. ಅಂಥ ಕಡೆ ಒಂದು ಮನೆ ಕಟ್ಟಿಕೊಳ್ಳಲು ಟೌನ್ ಪ್ಲಾನಿಂಗ್ ಅಥಾರಿಟಿಯವರಿಗೆ ಬರುವುದು ದುಸ್ಸಾಧ್ಯ. ಆದ್ದರಿಂದ ಹತ್ತು ಸಾವಿರ ಜನಸಂಖ್ಯೆ ಕೆಳಗೆ ಇರತಕ್ಕ ಜನರಿಗೆ ತಹಶೀಲ್ದಾರರೇ ಅನುಮತಿ ಕೊಡುವಂತೆ ಮಾಡಬೇಕು. ಅಗ್ರಿಕಲ್ಚರಲ್ ಲ್ಯಾಂಡನ್ನು ನಾನ್ ಅಗ್ರಿಕಲ್ಚರಲ್ ಲ್ಯಾಂಡ್ ಆಗಿ ಪರಿವರ್ತಿಸುವುದಕ್ಕೆ ಅನೇಕ ಷರತ್ತುಗಳನ್ನು ಹಾಕಿದ್ದಾರೆಂದು ವೆಂಕಟರಾಮಯ್ಯನವರು ಹೇಳುತ್ತಿದ್ದರು. ಇದರಿಂದ ಬಹಳ ತೊಂದರೆ ಆಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ತುಂಡು ಭೂಮಿ ಬಗ್ಗೆ ಕೇಳಿದ್ದಾರೆ. ಆ ಬಗ್ಗೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಈ ವಿಷಯದಲ್ಲಿ ಎರಡು ಅಭಿಪ್ರಾಯಗಳಿವೆ. ಒಂದು ಅಭಿಪ್ರಾಯ ಕಾನೂನು ಜಾರಿಗೊಳಿಸಬೇಕು ಎಂಬುದು. ಇನ್ನೊಂದು ಸಡಿಲಗೊಳಿಸಬೇಕು ಎಂಬುದು. ಈ ಬಗ್ಗೆ ಕೃಷಿ ವಿಶ್ವವಿದ್ಯಾನಿಲಯದ ಅಭಿಪ್ರಾಯ ಕೇಳಿದ್ದೇವೆ. ಅದು ಬಂದಮೇಲೆ ನಿರ್ಣಯ ತೆಗೆದು ಕೊಳ್ಳುತ್ತೇವೆ. ಮಾರಾಟದ ಬಗ್ಗೆ ಕೇಳಿದ್ದಾರೆ, ಆ ನಿಯಮವನ್ನು ಸರಳೀಕರಣ ಮಾಡಿದ್ದೇವೆ. ಭೂಸುಧಾರಣೆ ಕಾಯಿದೆಗೆ ತಿದ್ದುಪಡಿ ತರುವ ಬಗ್ಗೆ ಹೇಳಿದ್ದಾರೆ. ಅದನ್ನು ಮುಂದಿನ ಅಧಿವೇಶನದಲ್ಲಿ ತರುತ್ತೇವೆ. ಚಿಕ್ಕ ರೈತರಿಗೆ ೧೦ ಎಕರೆಗಿಂತ ಕಡಿಮೆ ಜಮೀನು ಇರತಕ್ಕ ರೈತರಿಗೆ ಮುಂದೆ ಕಟ್ಟತಕ್ಕ ಪ್ರೀಮಿಯಂಗೆ ವಿನಾಯಿತಿ ಕೊಟ್ಟಿದ್ದೇವೆ. ಹಿಂದೆ ಕೊಟ್ಟಿದ್ದಕ್ಕೆ ವಿನಾಯಿತಿ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಅನೇಕ ಸಾರಿ ಹೇಳಿದ್ದೇನೆ. ನೋಟೀಸ್ ಕೊಟ್ಟಿಲ್ಲ ಅಂದರೆ ಇನ್‌ಸ್ಟಾಲ್‌ಮೆಂಟ್ ಕಟ್ಟಿಲ್ಲ ಅಂದರೆ ಅರ್ಜಿ ಹಾಕಿಕೊಳ್ಳಲಿ. ವಿನಾಯಿತಿ ಕೊಡುವ ಆಲೋಚನೆ ಮಾಡೋಣ.

ಶ್ರೀ ಯು. ಭೂಪತಿ.—ಮಾನ್ಯ ಸಚಿವರಿಂದ ಸಮಗ್ರವಾದ ಉತ್ತರವನ್ನು ನಾನು ನಿರೀಕ್ಷಣೆ ಮಾಡಿದ್ದೆ. ಆದರೆ ಅವರ ಉತ್ತರ ಪೂರ್ಣವಾಗಿ ಆಗಿಲ್ಲ ಎಂಬುದು ನನ್ನ ಅಭಿಪ್ರಾಯ. ಏಕೆಂದರೆ ಅವರು ರೆವಿನ್ಯೂ ಬಗ್ಗೆ ಮಾತನಾಡಿ ಸರ್ವೆ ಸೆಟಲ್‌ಮೆಂಟ್ ಬಗ್ಗೆ ಹೇಳಿದರು. ರಿಹ್ಯಾಬಿಲಿಟೇಷನ್, ನ್ಯಾಚುರಲ್ ಕೆಲಾಮಿಟೀಸ್ ಬಗ್ಗೆ ಹೇಳಲಿಲ್ಲ. ಇದರಲ್ಲಿ ಪೆಂಡಿಂಗ್ ಇರತಕ್ಕದ್ದು ಸಾಕಷ್ಟಿವೆ. ಸರ್ವೆ ಸೆಟಲ್‌ಮೆಂಟ್ ಬಗ್ಗೆ ಮಾತನಾಡುತ್ತಾ ಮುಂದೆ ಏನು ಮಾಡುತ್ತಾರೆ ಎಂಬುದನ್ನು ಹೇಳಿದರು. ಇವರು ಕಂದಾಯ ಸಚಿವರಾದ ಮೇಲೆ ಸರ್ವೆ ಸೆಟಲ್‌ಮೆಂಟ್ ವಿಚಾರವಾಗಿ ಜಿಲ್ಲಾವಾರು ಸಭೆಗಳನ್ನು ಮಾಡಿದ್ದಾರಾ ? ಸಚಿವರಾಗಿರುವ ಅವಧಿಯಲ್ಲಿ ಏನೇನು ಮಾಡಿದ್ದಾರೆ ಎಂಬ ಬಗ್ಗೆ ಇವರ ಅನುಭವ ಹೇಳಿದರೆ ಒಳ್ಳೆಯದು. ರಿಹ್ಯಾಬಿಲಿಟೇಷನ್ ಬಗ್ಗೆ ನನ್ನ ತಾಲ್ಲೂಕಿನ ಉದಾಹರಣೆ ಹೇಳುವುದಾದರೆ ಮಾದಾಪುರ ಎಂಬ ಗ್ರಾಮ ಟ್ಯಾಂಕ್ ಆಯಕಟ್ಟಿನ ಕೆಳಗೆ ಬರುತ್ತದೆ. ಇರಿಗೇಷನ್‌ನವರು ನಮಗೆ ಸಂಬಂಧ ಇಲ್ಲ ಎಂದು ಹೇಳುತ್ತಾರೆ. ಫೈನಾನ್ಸ್‌ನವರು ನಮಗೆ ಸಂಬಂಧ ಇಲ್ಲ ಎಂದು ಹೇಳುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಬಂದಾಗ ನಾವು ಕಪ್ಪು ಬಾವುಟ ಪ್ರದರ್ಶನ ಕೂಡ ಮಾಡಿದೆವು. ನಾನೂ ಕೂಡ ಭಾಗವಹಿಸಿದ್ದೆ. ಆಮೇಲೆ ನನ್ನ ವಿರುದ್ಧ ಹೇಳಿಕೆಯನ್ನೂ ಕೊಟ್ಟರು. ಆದರೆ ರಿಹ್ಯಾಬಿಲಿಟೇಷನ್ ಇನ್ನೂ ಆಗಿಲ್ಲ. ನ್ಯಾಚುರಲ್ ಕೆಲಾಮಿಟೀಸ್ ವಿಚಾರದಲ್ಲಿ ತಹಶೀಲ್ದಾರ್, ಅಸಿಸ್ಟೆಂಟ್ ಕಮೀಷನರ್ ಮತ್ತು ಜಿಲ್ಲಾಧಿಕಾರಿಗಳಿಗೆ ಹಣ ಮಂಜೂರು ಮಾಡುವ ಬಗ್ಗೆ ಕೊಟ್ಟಿರತಕ್ಕ ಅಧಿಕಾರದ ಮಿತಿ ಏನಿದೆ ಅದನ್ನು ಜಾಸ್ತಿ ಮಾಡಬೇಕು. ನಷ್ಟಕ್ಕೊಳಗಾದ ರೈತರಿಗೆ ಐದಾರು ಸಾವಿರ ರೂಪಾಯಿ ಹಣ ಮಂಜೂರು ಮಾಡುವುದಕ್ಕೆ ಅಧಿಕಾರ ಇಲ್ಲ. ಈಗ ೮೦೦ ರೂಪಾಯಿ ೧೦೦೦ ರೂಪಾಯಿ ಮಂಜೂರು ಮಾಡುವುದಕ್ಕೆ ಅಧಿಕಾರ ಇದೆ. ಈ ವ್ಯಾಪ್ತಿಯನ್ನು ವಿಸ್ತಾರ ಮಾಡ ಬೇಕೆಂದು ಹೇಳಿದ್ದೆ. ಅದರ ಬಗ್ಗೆ ಉತ್ತರ ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧಿಕಾರ ವಿಸ್ತಾರ ಮಾಡುವ ಬಗ್ಗೆ ಈಗ ಹೇಳದಿದ್ದರೂ ಈ ಸಭೆಯಲ್ಲಿ ಹಿಂದೆ ಹೇಳಿದ್ದೇನೆ. ೧೯೭೮ನೇ ಇಸವಿಯಲ್ಲಿ ಈ ಬಗ್ಗೆ ಆಜ್ಞೆಯಾಗಿದೆ. ಅದನ್ನು ಹೆಚ್ಚು ಮಾಡುವ ವಿಚಾರದಲ್ಲಿ ಪರಿಶೀಲನೆ ಮಾಡುತ್ತೇನೆ. ಫ್ಯಾಮಿನ್ ಕೋಡ್ ಮಾಡುವ ವಿಚಾರ ಹೇಳಿದ್ದೇನೆ, ರಿಹ್ಯಾಬಲಿಟೇಷನ್ ಬಗ್ಗೆ ಹೇಳಿದ್ದೀರಿ. ಈ ಬಗ್ಗೆ ವಿವರಗಳನ್ನು ಪಡೆದು ಯಾವ ರೀತಿ ಯಿಂದ ಅನುಕೂಲ ಮಾಡಬೇಕೋ ಆ ರೀತಿ ಮಾಡೋಣ.

ಶ್ರೀ ಡಿ. ಎ. ಚಿನ್ನಪ್ಪ.—ಕಳೆದ ವರ್ಷ ನೀವು ಕೊಡಗಿಗೆ ಬಂದು ಜಮ್ಮಾ ಬಗ್ಗೆ ಕೊಡಗಿನ ಜನರ ಮೀಟಿಂಗ್ ಮಾಡಿ ತೀರ್ಮಾನ ಮಾಡಿಕೊಡುತ್ತೇನೆ ಎಂದು ಹೇಳಿದಿರಿ. ಆಮೇಲೆ ಒಂದು ಕಮಿಟಿ ಮಾಡಿ ಕೂಡಲೇ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಹೇಳಿದಿರಿ. ಈಗ ಅಲ್ಲಿ ಸೇಲ್ ಮಾಡುವ ಹಾಗಿಲ್ಲ. ಪರ್ಚೇಸ್ ಮಾಡುವ ಹಾಗೆ ಇಲ್ಲ. ಸಬ್-ರಿಜಿಸ್ಟ್ರಾರ್‌ರವರಿಗೆ they have issued a notification to the Sub-Registrar not to register any Jamma land. ಪೊಸಿಷನ್‌ಗೆ ನಿಂತಿದೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಲಕ್ಷಗಟ್ಟಲೆ ಬೆಲೆ ಬಾಳುವ ಆಸ್ತಿಗಳನ್ನು ಮಾರಾಟ ಮಾಡುತ್ತಾರೆ. ಮಾರಾಟ ಮಾಡುವಾಗ ಸೇಲ್ ಡೀಡ್ ಮಾಡುವುದಿಲ್ಲ. ಅದು ಬಿಟ್ಟು ಮಾರಾಟ ಮಾಡಿದವರು ಇವರು ಸೇರಿ ಪಾರ್ಟ್‌ನರ್‌ಷಿಪ್ ಡೀಡ್ ಮಾಡಿಕೊಳ್ಳುತ್ತಾರೆ. ಅದಾದಮೇಲೆ the previous owner will immediately retire so that they can avoid the stamp duty. ಸ್ಟಾಂಪ್ ಡ್ಯೂಟಿ ಮೂಲಕ ಸರ್ಕಾರಕ್ಕೆ ಲಕ್ಷಗಟ್ಟಲೆ ದುಡ್ಡು ಕೊಡುವುದನ್ನು ಅವಾಯಿಡ್ ಮಾಡುತ್ತಾರೆ. ಇದರ ಬಗ್ಗೆ ಕಾನೂನು ಮಾಡಬೇಕು. ಮೂರನೆಯದಾಗಿ ಲ್ಯಾಂಡ್ ಗ್ರಾಂಟ್ ಮಾಡುತ್ತಾರೆ. ಅದು ಮಾಡಿದ ಮೇಲೆ that paper will go to the forest department. Forest department will have to extract timber from that land. But they fail to extrct timber for years together. So, what happens is they will not issue patta ಲ್ಯಾಂಡ್ ಗ್ರಾಂಟ್ ಮಾಡಿರುವುದು ಉಳಿದಿದೆ. ಫಾರೆಸ್ಟ್‌ನವರು ಮಾಡುವುದಕ್ಕೆ ಬರುವುದಿಲ್ಲ. ಪಟ್ಟಾ ಕೊಟ್ಟು ಎಕ್ಸ್‌ಟ್ರಾಕ್ಟ್ ಮಾಡುವ ಬಗ್ಗೆ ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಜಮ್ಮಾ ಲ್ಯಾಂಡ್ ಬಗ್ಗೆ ವಿಳಂಬವಾಗಿದೆ. ಕ್ಯಾಬಿನೆಟ್ ಸಬ್ ಕಮಿಟಿ ಮೀಟಿಂಗ್ ಆಗಿದೆ. ರಿಪೋರ್ಟ್ ಫೈನಲೈಸ್ ಆಗಿಲ್ಲ, ಆದಷ್ಟು ಜಾಗ್ರತೆ ಅದನ್ನು ಮಾಡುತ್ತೇವೆ. ಇನ್ನು ಸ್ಟಾಂಪ್ ಡ್ಯೂಟಿ ಬಗ್ಗೆ ಹೇಳಿದ್ದಾರೆ. ಸ್ಟಾಂಪ್ ಆಕ್ಟ್ ನಾವು ತಿದ್ದುಪಡಿ ಮಾಡಿದ್ದೇವೆ. ಮತ್ತೆ ಪಾರ್ಟ್‌ನರ್‌ಷಿಪ್ ಆಗಿ ಟ್ರಾನ್ಸ್‌ಫರ್ ಮಾಡುವ ಬಗ್ಗೆ ಒಂದು ತಿದ್ದುಪಡಿ ಹೋದ ಅಧಿವೇಶನದಲ್ಲಿ ಪಾಸ್ ಆಗಿದೆ.

We have already passed an act.

ಶ್ರೀ ಡಿ. ಎ. ಚಿನ್ನಪ್ಪ.—ಸೇಲ್ ಡೀಡ್ ಮಾಡುತ್ತಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದನ್ನು ಪ್ರೊಹಿಬಿಟ್ ಮಾಡುವಂತಹ ಕಾನೂನು ಮಾಡಿದ್ದೇವೆ. ಅದು ಈ ಮನೆಯಲ್ಲಿ ಪಾಸಾಗಿದೆ. ಪಾರ್ಟನರ್‌ಷಿಪ್ ಆಗುತ್ತಾರೆ, ನಂತರ ಅವರು ರಿಟೈರ್ ಆಗಿ ಲ್ಯಾಂಡ್ ಉಳಿದಂತಹ ಪಾರ್ಟನರ್‌ರವರಿಗೆ ಹೋಗುವಂತಹ ಮೋಸ ನಡೆಯುತ್ತಿದೆ, ಅದನ್ನು ತಪ್ಪಿಸುವ ಸಲುವಾಗಿ We have already amend the act.

ಶ್ರೀ ಡಿ. ಎ. ಚಿನ್ನಪ್ಪ.—ಅದನ್ನು ರೆಟ್ರಾಸ್ಪೆಕ್ಟಿವ್ ಎಫೆಕ್ಟ್ ಕೊಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದರ ಬಗ್ಗೆ ಯೋಚನೆ ಮಾಡಲಾಗುವುದು.

ಶ್ರೀ ಬಿ. ಎ. ಇದಿನಬ್ಬ.—ನಾನು ಮೊನ್ನೆ ಮಾತನಾಡುವಾಗ ಕೆಲವು ವಿಚಾರಗಳನ್ನು ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಹೇಳಿದ್ದೇನೆ. ಬಹಳ ಪ್ರಮುಖವಾಗಿ ಜನ ಸಂಪರ್ಕ ಸಭೆಗಳನ್ನು ಮಾಡಬೇಕೆಂಬ ಆದೇಶವನ್ನು ಅಧಿಕಾರಿಗಳಿಗೆ ಕೊಟ್ಟಿದ್ದೀರಿ ನಾವೂ ಕೂಡ ಆ ಬಗ್ಗೆ ಹೇಳಿದ್ದೆವು. ಇದರಿಂದ ಬಹಳ ಪ್ರಯೋಜನವೂ ಹಾಗೂ ಉಪಕಾರವೂ ಆಗಿತ್ತು. ಆದರೆ ನಮ್ಮ ಇಡೀ ಜಿಲ್ಲೆಯಲ್ಲಿ ಜನ ಸಂಪರ್ಕ ಸಭೆಗಳನ್ನು ಕರೆಯುವುದನ್ನೇ ಕಡಿಮೆ ಮಾಡಿದ್ದಾರೆ. ಮಂಗಳೂರು ತಾಲ್ಲೂಕಿನಲ್ಲಿ ಕಳೆದ ೮ ತಿಂಗಳಿಂದ ಜನ ಸಂಪರ್ಕ ಸಭೆಯನ್ನೇ ಕರೆದಿಲ್ಲ, ಈ ರೀತಿಯ ಸಭೆಗಳನ್ನು ಕರೆಯುವುದರಿಂದ, ಬಡವರಿಗೆ, ಹಿಂದುಳಿದ ವರ್ಗದವರಿಗೆ ಬಹಳ ಉಪಕಾರವಾಗುತ್ತದೆ. ಆದರೆ ಇಂತಹ ಸಭೆಗಳನ್ನೇ ಕರೆಯದೇ ಇರುವುದರಿಂದ ಬಡವರಿಗೆ ತುಂಬಾ ಅನುಕೂಲವಾಗುತ್ತಿದೆ. ಇದನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಮತ್ತೆ ಕನ್ವರ್ಷನ್ ಬಗ್ಗೆ ಹೇಳುವುದಾದರೆ, ಬಂಡೆ ಇರತಕ್ಕ ಜಮೀನು, ಕಣಿವೆ ಇರತಕ್ಕ ಜಮೀನು ಮರಳು ಇರತಕ್ಕ ಜಮೀನು ಎಲ್ಲವೂ ಕೃಷಿ ಭೂಮಿಯಾಗಿದೆ. ಆದ್ದರಿಂದ ಕನ್ವರ್ಷನ್‌ಗೆ ಬಹಳ ತೊಂದರೆಯಾಗಿದೆ. ಇದರಬಗ್ಗೆ ಏನಾದರೊಂದು ಏರ್ಪಾಡನ್ನು ಮಾಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಜನ ಸಂಪರ್ಕ ಸಭೆಗಳನ್ನು ಮಾಡಬೇಕೆಂಬುದರ ಬಗ್ಗೆ ಸ್ಪಷ್ಟವಾದ ಆದೇಶ ಇದೆ. ಆದರೂ ಕೆಲವು ಕಡೆಗಳಲ್ಲಿ ನಿರ್ಲಕ್ಷ ಮಾಡುತ್ತಿದ್ದಾರೆ. ಅಂತಹವರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಲಾಗುವುದು. ಸಭೆಯನ್ನು ಕರೆಯದಿದ್ದಂತಹವರ ಮೇಲೆ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳಲಾಗುವುದು. ಮತ್ತೆ ಮಾನ್ಯ ಸದಸ್ಯರು ಕೃಷಿ ಭೂಮಿಯ ಕನ್ವರ್ಷನ್ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಸಿ. ಎಂ. ಉದಾಸಿ.—೫೦೦ಕ್ಕಿಂತ ಹೆಚ್ಚು ಕೇಸುಗಳು ಪೆಂಡಿಂಗ್ ಇರುವಂತಹ ಕಡೆ ಬೇಗ ಇತ್ಯರ್ಥ ಮಾಡುವ ಸಲುವಾಗಿ ಪ್ರತ್ಯೇಕವಾದ ಟ್ರಿಬ್ಯೂನಲ್‌ನ್ನು ರಚಿಸಿ ಪ್ರತ್ಯೇಕವಾದ ಆಫೀಸರ್‌ನ್ನು ನೇಮಕ ಮಾಡಬೇಕು. ನಮ್ಮ ತಾಲ್ಲೂಕಿನಲ್ಲಿರತಕ್ಕ ಭೂ–ನ್ಯಾಯ ಮಂಡಲಿಯವರು ತಿಂಗಳಿಗೆ ೪ ಕೇಸುಗಳನ್ನು ಮಾತ್ರ ತೀರ್ಮಾನ ಮಾಡುತ್ತಿದ್ದಾರೆ. ಈ ಪರಿಸ್ಥಿತಿ ಈ ರೀತಿ ಇರುವುದರಿಂದ ೫೦೦ ಕೇಸುಗಳು ಇನ್ನೂ ಪೆಂಡಿಂಗ್‌ನಲ್ಲಿವೆ. ಅವುಗಳನ್ನು ತೀರ್ಮಾನ ಮಾಡುವ ಸಲುವಾಗಿ ಪ್ರತ್ಯೇಕವಾದ ಭೂ–ನ್ಯಾಯ ಮಂಡಲಿಯನ್ನು ರಚನೆ ಮಾಡಿ ಒಬ್ಬರು ಪ್ರತ್ಯೇಕವಾಗಿ ಸಹಾಯಕ ಆಯುಕ್ತರನ್ನು ಪೋಸ್ಟ್ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಮತ್ತೊಂದು ಮುಖ್ಯವಾದ ಪ್ರಶ್ನೆ ಏನೆಂದರೆ, ಗ್ರಾಮೀಣ ಭಾಗದಲ್ಲಿ ರೈತರ ಹೊಲದಿಂದ ಬೆಳೆದಂತಹ ಬೆಳೆಯನ್ನು ತರಬೇಕಾಗುತ್ತದೆ. ಹೊಲಕ್ಕೆ ಗೊಬ್ಬರ ತೆಗೆದುಕೊಂಡು ಹೋಗಬೇಕಾಗುತ್ತದೆ. ಗಾಡಿಯನ್ನು ತೆಗೆದುಕೊಂಡು ಹೋಗಬೇಕಾಗುತ್ತದೆ, ಹಂಗಾಮಿ ರಸ್ತೆಗಳು ಮೊದಲು ಇದ್ದವು. ಈಗ ಅವುಗಳು ಇಲ್ಲದೇ ಇರುವುದರಿಂದ ಬಹಳ ತೊಂದರೆಯಾಗಿದೆ. ಈ ರೀತಿಯ ಹಂಗಾಮಿ ರಸ್ತೆಯ ಬಗ್ಗೆ ನಕಾಶೆಯಲ್ಲೇ ದಾಖಲಾತಿ ಮಾಡಬೇಕಾಗುತ್ತದೆ. ಸರ್ಕಾರ ಈ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳಬೇಕು, ಇದರ ಜೊತೆಗೆ ಕಳೆದ ಮೂರು ವರ್ಷಗಳಿಂದ ಬರಗಾಲ ಬಂದಿದ್ದರಿಂದ ರೈತರು ತೆಗೆದುಕೊಂಡಂತಹ ಸಾಲವನ್ನು ಕನ್ವರ್ಷನ್ ಮಾಡಲಾಗಿವೆ. ಆದರೆ ಈ ವರ್ಷ ಯಾವ ರೈತರೇ ಆಗಲಿ ಸಾಲವನ್ನು ತೆಗೆದುಕೊಳ್ಳಬೇಕಾದರೆ ಒಂದು ಸಾವಿರ ರೂಪಾಯಿಗಳವರೆಗೆ ಬೆಳೆ ಸಾಲವನ್ನು ತೆಗೆದುಕೊಂಡರೂ ಹೆಚ್ಚು ಸ್ಟ್ಯಾಂಪ್ ಡ್ಯೂಟಿಯನ್ನು ಕೊಡಬೇಕಾಗುತ್ತದೆ. ಆದ್ದರಿಂದ ಸ್ಟ್ಯಾಂಪ್ ಡ್ಯೂಟಿಗೆ ವಿನಾಯಿತಿಯನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ? ಸಾಮಾನ್ಯವಾಗಿ ಬೆಳಗಾಂ ವಿಭಾಗದಲ್ಲಿರುವಂತಹ ಜಮೀನಿನ ಹಕ್ಕುಪತ್ರದಲ್ಲಿ ೧೨ (೨) ಕಲಮಿನಲ್ಲಿ ರೈತರ ಹೆಸರು ಬೇನಾಮಿಯಾಗಿ ಇದೆ. ಅವರೇ ೧-೩-೭೪ ರಿಂದಲೂ ಅದಕ್ಕಿಂತ ಮೊದಲಿನಿಂದಲೂ ಹಳೆಯ ರೈತರೇ ಜಮೀನನ್ನು ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ. ನಿಜವಾದ ಮಾಲೀಕರು ೧೦-೧೫ ವರ್ಷಗಳ ಹಿಂದೆ ಸರಿಯಾದ ಡಿಕ್ಲರೇಷನ್ ಕೊಡದೇ ಇರುವುದರಿಂದ ಬಹಳ ತೊಂದರೆಯಾಗಿದೆ. ಇದರಿಂದಾಗಿ ಆ ಜಮೀನನ್ನು ಕೊಂಡುಕೊಂಡಂತಹವರಿಗೆ ತೊಂದರೆಯಾಗಿದೆ. ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ರೆಕಾರ್ಡ್ ಆಫ್ ರೈಟ್ಸ್ ಬಗ್ಗೆ ನಮೂದಾಗಿರುವ ಹೆಸರಿನ ಬಗ್ಗೆ ಆಗಿರುವಂತಹ ತೊಂದರೆಯ ಬಗ್ಗೆ ಹೇಳಿದ್ದಾರೆ. ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ಗೆ ತಿದ್ದುಪಡಿ ತರಬೇಕಾಗುತ್ತದೆ. ಆ ರೀತಿಯ ತಿದ್ದುಪಡಿಯನ್ನು ತರುವಾಗ ಮಾನ್ಯ ಸದಸ್ಯರು ಕೊಟ್ಟಂತಹ ಸಲಹೆಯನ್ನು ಆಲೋಚನೆ ಮಾಡಲಾಗುವುದು. ಮತ್ತೆ ಅವರು ಸ್ಟ್ಯಾಂಪ್ ಡ್ಯೂಟಿ ಬಗ್ಗೆ ಹೇಳಿದರು. ಅದನ್ನು ಪರಿಶೀಲನೆ ಮಾಡುತ್ತೇನೆ. ಭೂ ನ್ಯಾಯ ಮಂಡಲಿಗೆ ಹೆಚ್ಚು ಕೆಲಸ ಇರುವುದರಿಂದ ಪ್ರತ್ಯೇಕವಾಗಿ ಸಹಾಯಕ ಆಯುಕ್ತರನ್ನು ಪೋಸ್ಟ್ ಮಾಡುವ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ,

ಶ್ರೀ ಸಿ. ಎಂ. ಉದಾಸಿ.—ಹಂಗಾಮಿ ರಸ್ತೆಯ ಬಗ್ಗೆ ನಕಾಶೆಯಲ್ಲೇ ತೋರಿಸಬೇಕೆಂಬುದಾಗಿ ಹೇಳಿದ್ದೆ. ಅದರ ಬಗ್ಗೆ ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದರ ಬಗ್ಗೆ ನೋಡುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೇ, ಸರ್ಕಾರಿ ಉಪಯೋಗಕ್ಕೋಸ್ಕರವಾಗಿ ಬಡ ರೈತರ ಜಮೀನನ್ನು ಸರ್ಕಾರ ಸ್ವಾಧೀನಪಡಿಸಿಕೊಳ್ಳುತ್ತದೆ. ಆ ಸ್ವಾಧೀನಪಡಿಸಿಕೊಂಡ ಜಮೀನಿಗೆ ಆರು ತಿಂಗಳು, ೧ ವರ್ಷ ಅಥವಾ ೨ ವರ್ಷ ಆಗುವುದರೊಳಗೆ ಪರಿಹಾರ ಕೊಟ್ಟರೆ ಪರವಾಗಿಲ್ಲ. ಆದರೆ

೧೦-೧೫ ವರ್ಷಗಳಾದರೂ ಕೂಡಾ ಅವರಿಗೆ ಪರಿಹಾರಧನ ದೊರಕಿಲ್ಲ. ಈ ಜಮೀನು ಕಳೆದುಕೊಂಡು ರೈತರು ಸಾಯುವುದಕ್ಕಿಂತಾ ಮೊದಲೇ ಪರಿಹಾರವನ್ನು ಪಡೆದುಕೊಳ್ಳುವ ಬಗ್ಗೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗಾಗಲೇ ಈ ಬಗ್ಗೆ ಉತ್ತರ ಕೊಟ್ಟಿದ್ದೇನೆ. ೧೦-೧೫ ವರ್ಷಗಳಷ್ಟು ಹಳೆಯ ಕೇಸ್‌ಗಳ ಬಗ್ಗೆ ನಿರ್ದಿಷ್ಟವಾಗಿ ನನ್ನ ಗಮನಕ್ಕೆ ತಂದರೆ ಕೂಡಲೇ ಪರಿಹಾರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎನ್. ಎಸ್. ಖೇಡ್.—ಅಧ್ಯಕ್ಷರೇ, ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಸ್ಪೆಷಲ್ ಡೆಪ್ಯುಟಿ ಕಮೀಷನರ್‌ರವರ ಆಫೀಸು ಇದೆ. ಅಲ್ಲಿ ಇನ್ನೊಂದು ಆಫೀಸು ಬರತಕ್ಕ ಒಂದು ವ್ಯವಸ್ಥೆಯಾಗಿದೆಯೆಂದು ಕಂಡುಬಂದಿದೆ. ಈಗಾಗಲೇ ಹಣಕಾಸಿನ ತೊಂದರೆಯಿಂದ ಕೆಲಸಗಳೇ ನಡೆಯುತ್ತಿಲ್ಲ. ಅಲ್ಲಿ ಇನ್ನೊಂದು ಪೋಸ್ಟನ್ನು ಮಾಡುವುದರಿಂದ ಸರ್ಕಾರಕ್ಕೆ ಹೊರೆ ಆಗುತ್ತದೆ. ಇದನ್ನು ಮಾಡಬಾರದು ಎಂದು ಹೇಳುತ್ತೇನೆ.

ಎರಡನೆಯದಾಗಿ, ಕೆಲಸ ಮಾಡಿದ ಕಾಂಟ್ರಾಕ್ಟರಿಗೆ ಲೆಟರ್ ಆಫ್ ಕ್ರೆಡಿಟ್ ಪದ್ಧತಿ ಇದ್ದು, ಈ ಪದ್ಧತಿಯಲ್ಲಿ ಬಹುತೇಕ ವ್ಯಕ್ತಿಗತವಾಗಿ ಅವರವರ ಹೆಸರನ್ನು ಬರೆದು ಇಲ್ಲಿಂದಲೇ ಇಂತಿಂತಹವರಿಗೆ ಇಷ್ಟು ದುಡ್ಡು ಎನ್ನುವ ವ್ಯವಸ್ಥೆ ಪ್ರಾರಂಭವಾಗಿದೆ. ಈ ಎಲ್. ಒ. ಸಿ. ಪದ್ಧತಿಯಲ್ಲಿ ಒಂದು ಕಮೀಷನ್ ವ್ಯವಹಾರ ಇದೆಯೆಂದು ತಿಳಿದು ಬಂದಿದೆ. ಈ ಬಗ್ಗೆ ಹೇಳಬೇಕು ಅದು ತಮ್ಮ ನಜರಿಗೆ ಬಂದರೆ ಇದನ್ನು ತಪ್ಪಿಸುವುದಕ್ಕೆ ಏನು ವ್ಯವಸ್ಥೆ ಮಾಡುತ್ತೀರಾ ?

ಮೂರನೆಯದಾಗಿ, ನನ್ನ ಕ್ಷೇತ್ರದಲ್ಲಿ ಮುಖ್ಯವಾಗಿ ಇಂಡಿ ಸಬ್ ಡಿವಿಜನ್ ಹೆಡ್‌ಕ್ವಾರ್ಟರ್ಸ್ ಆಗಿದ್ದು, ಅಲ್ಲಿ ಅಸಿಸ್ಟೆಂಟ್ ಕಮೀಷನರ್ ಫಾರ್ ಲ್ಯಾಂಡ್ ರಿಫಾರ್ಮ್ಸ್ ಅಂಡ್ ಸರ್ವೆ ಸೆಟಲ್‌ಮೆಂಟ್ ಆಫೀಸು ಇತ್ತು. ಆದರೆ ೩ ವರ್ಷಗಳ ಹಿಂದೆ ಈ ಕಛೇರಿಯನ್ನು ಸ್ಥಳಾಂತರ ಮಾಡಿ ಅಲ್ಲಿಯ ಅಧಿಕಾರಿಗೆ ಬೆಂಗಳೂರಿನಲ್ಲಿ ಇರಲು ಅವಕಾಶ ಮಾಡಿಕೊಟ್ಟಿದ್ದಾರೆ. ಇಂತಹ ಸಬ್‌ಡಿವಿಜನ್ ಹೆಡ್ ಕ್ವಾರ್ಟರ್ಸ್‌ನಲ್ಲಿ ಈ ಕಛೇರಿ ಬೇಕಾಗಿದ್ದು. ಮತ್ತೆ ಇಲ್ಲಿಗೆ ಅದನ್ನು ಸ್ಥಳಾಂತರಿಸಿದರೆ ಅವರ ಸ್ಥಾನಮಾನ ಮತ್ತೆ ಗಳಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಆ ಸ್ಥಾನವನ್ನು ಮುಂದುವರಿಸುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಇನ್ನೊಂದು ಸ್ಪೆಷಲ್ ಲ್ಯಾಂಡ್ ಅಕ್ವಿಸಿಷನ್ ಆಫೀಸ್ ಮಾಡುವ ಬಗ್ಗೆ ಹೇಳಿದ್ದಾರೆ. ಅದು ಅನಾವಶ್ಯಕವಾಗಿದ್ದರೆ ಮಾಡತಕ್ಕದ್ದು ಸರಿಯಲ್ಲ. ಅಲ್ಲಿ ಅದರ ಅವಶ್ಯಕತೆ ಇದ್ದರೆ ಮಾಡಲೇಬೇಕಾಗುತ್ತದೆ. ಹೆಚ್ಚಿನ ಜನರು ಭೂಮಿ ಕಳೆದುಕೊಂಡಿದ್ದು ಅವರಿಗೆ ತ್ವರಿತವಾಗಿ ಹಣವನ್ನು ಕೊಡಬೇಕಾಗುವುದರಿಂದ ಇನ್ನೊಂದು ಕಛೇರಿಯ ಅವಶ್ಯಕತೆ ಇರಬಹುದು. ಏನೇ ಆಗಲೀ ನಿಮ್ಮ ಸಲಹೆಯನ್ನು ಗಮನದಲ್ಲಿ ಇಟ್ಟುಕೊಂಡು ನಿರ್ಧಾರ ತೆಗೆದುಕೊಳ್ಳುತ್ತೇವೆ. ಇನ್ನು ಎಲ್.ಒ.ಸಿ. ಬಗ್ಗೆ ಹೇಳುವುದಾದರೆ ಅದನ್ನು ಹಣಕಾಸಿನ ಇಲಾಖೆಯವರು ಇಷ್ಯು ಮಾಡುತ್ತಿದ್ದಾರೆ. ತಾವು ಏನು ಇಂಡಿವಿಜ್ಯುಯಲ್ಲಾಗಿ ಕೊಟ್ಟಿದ್ದಾರೆಂದು ಹೇಳಿದ್ದೀರಿ, ಅದನ್ನು ಪರಿಶೀಲನೆ ಮಾಡುತ್ತೇನೆ. ಇದನ್ನು ಕಮೀಷನ್ ತೆಗೆದುಕೊಳ್ಳುತ್ತಿದ್ದಾರೆಂದು ಹೇಳಿದ್ದೀರಿ. ಈ ಬಗ್ಗೆ ನಿರ್ದಿಷ್ಟವಾಗಿ ಯಾವುದಾದರೂ ಉದಾಹರಣೆಯನ್ನು ಕೊಟ್ಟರೆ ಆ ಬಗ್ಗೆ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎನ್. ಎಸ್. ಖೇಡ್.—ನನ್ನ ನಜರಿಗೆ ಬಂದುದನ್ನು ನಾನು ಹೇಳಿದ್ದೇನೆ. ಇಂತಹದೇ ಪ್ರಕರಣ ಎಂದೇನೂ ಇಲ್ಲ. ಜಮೀನು ಕಳೆದುಕೊಂಡವರಿಗೆ ಸರಿಯಾದ ರೀತಿಯ ಪರಿಹಾರ ಸಿಗುತ್ತಾ ಇಲ್ಲ. ಇದರಲ್ಲಿ ವಕೀಲರೂ ಶಾಮೀಲಾಗಿ ಇವರಿಗೆ ಹಣವೇ ಸರಿಯಾಗಿ ಕೈಸೇರುವುದಿಲ್ಲ. ಇಂಡಿಯಲ್ಲಿ ಇಂತಹ ಅನೇಕ ಪ್ರಕರಣಗಳು ಆಗಿವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಹೇಳಿದ್ದೆಲ್ಲಾ ಇಲ್ಲ ಎಂದು ನಾವು ಹೇಳುವುದಿಲ್ಲ. ಚೆಕ್‌ಗಳನ್ನು ಸಾಧ್ಯವಾದಲ್ಲಿ ಶಾಸಕರ ಸಮ್ಮುಖದಲ್ಲಿ, ಜಿಲ್ಲಾಧಿಕಾರಿಗಳ ಕಛೇರಿಯಲ್ಲೇ ವಿತರಣೆ ಮಾಡುವುದಕ್ಕೆ ಅನುಕೂಲ ಮಾಡಿದ್ದೇವೆ. ಮತ್ತೆ ಯಾರಿಗೆ ಮೊದಲು ಅವಾರ್ಡ್ ಆಗಿದೆ

ಅವರಿಗೇ ಮೊದಲು ಪ್ರಾಶಸ್ತ್ಯ ಕೊಟ್ಟು ಹಣ ಕೊಡಬೇಕು ಎಂದು ಹೇಳಿದ್ದೇವೆ. ಎಲ್ಲಾದರೂ ತಪ್ಪು ಆಗಿದ್ದರೆ ಈ ಸಭೆಯಲ್ಲಿ ಅಷ್ಟೇ ಅಲ್ಲ, ಆ ಮೇಲೆ ಕೂಡಾ ತಾವು ಬರೆದು ಕಳುಹಿಸಿದರೆ ನಾನು ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

೧-೩೦ ಪಿ.ಎಂ.

ಶ್ರೀ ಎನ್.ಎಸ್. ಖೇಡ್.—ಇಂಡಿ ಭೂಮಾಪನ ಇಲಾಖೆಯ ಬಗ್ಗೆ ತಾವು ಹೇಳಲಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಡಿಬೇಟ್‌ನಲ್ಲಿ ಭಾಗವಹಿಸಿ ಕ್ಲಾರಿಫಿಕೇಷನ್ ಕೇಳಿದರೆ ಉತ್ತರ ಕೊಡಬಹುದು. ಡಿಬೇಟ್‌ನಲ್ಲಿ ಭಾಗವಹಿಸದೆ ೧೦-೧೨ ಪ್ರಶ್ನೆಗಳನ್ನು ಒಟ್ಟಿಗೆ ಕೇಳಿದರೆ ಉತ್ತರ ಕೊಡುವುದು ಹೇಗೆ ? ಇಂಡಿ ಭೂಮಾಪನ ಇಲಾಖೆಯ ಬಗ್ಗೆ ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿ ಉತ್ತರ ಕೊಡುತ್ತೇನೆ. ಆ ಬಗ್ಗೆ ನನ್ನ ಹತ್ತಿರ ಈಗ ಮಾಹಿತಿ ಇಲ್ಲ, ಪ್ರಶ್ನೆ ಕೇಳಿ ಉತ್ತರ ಕೊಡುತ್ತೇನೆ.

ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಎಲ್ಲ ಬಡಜನರಿಗೆ ಮನೆ ಇಲ್ಲದವರಿಗೆ ಮನೆ, ಮನೆ ನಿವೇಶನ ಇಲ್ಲದವರಿಗೆ ನಿವೇಶನ ಕೊಡುತ್ತೇವೆ ಎನ್ನುವ ಘೋಷಣೆಯನ್ನು ಸದನದಲ್ಲಿ ಮಾಡಲಾಗಿದೆ. ಇವತ್ತು ಎಲ್ಲಿಯಾದರೂ ಯಾವುದೇ ಸೈಟುಗಳನ್ನು ಕೊಡಬೇಕಾದರೆ ಕಾನೂನಿನ ತೊಡಕು ಇದೆ. ಕೆಲವು ಹಳ್ಳಿಗಳಲ್ಲಿ ೧೦-೨೦ ವರ್ಷಗಳಾದರೂ ಸೈಟುಗಳನ್ನು ಕೊಡುವುದಕ್ಕೆ ಆಗಿಲ್ಲ. ಕೋರ್ಟ್‌ನಲ್ಲಿ ಅಡಚಣೆಯಾಗುವುದರಿಂದ ಸೈಟುಗಳನ್ನು ಕೊಡುವುದಕ್ಕೆ ಆಗುವುದಿಲ್ಲ. ಮಾನ್ಯ ಕಂದಾಯ ಸಚಿವರು ಈಗಿರತಕ್ಕ ಕಾನೂನಿಗೆ ತಿದ್ದುಪಡಿಯನ್ನು ತಂದು ಎಲ್ಲರಿಗೂ ನಿವೇಶನ ಕೊಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಗ್ರಾಮಾಂತರ ಪ್ರದೇಶಗಳಲ್ಲಿರುವ ರೈತರು ಅನೇಕ ಕಾರಣಕ್ಕಾಗಿ ಅನೇಕ ಏಜೆನ್ಸಿಗಳಲ್ಲಿ ಸಾಲ ಪಡೆಯಬೇಕಾಗುತ್ತದೆ. ಸಾಲ ಪಡೆಯಬೇಕಾದರೆ ಉತಾರ್ ಬಹಳ ಮುಖ್ಯ. ಮಾನ್ಯ ಕಂದಾಯ ಸಚಿವರು ಹಿಂದೆ ಉತ್ತರ ಕೊಡುವಾಗ ಉತಾರ್ ಕೊಡಿಸುವ ಬಗ್ಗೆ ಬಹಳ ಸರಳವಾಗುವ ರೀತಿಯಲ್ಲಿ ರೈತರಿಗೆ ಪಾಸ್ ಬುಕ್‌ಗಳನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡುವ ಬಗ್ಗೆ ಹೇಳಿಕೆ ಬಂದಿದೆ, ಅದನ್ನು ರಾಜ್ಯದ ಎಲ್ಲ ಕಡೆ ವಿಸ್ತರಿಸುತ್ತೀರಾ ? ಎರಡನೆಯದಾಗಿ ಹಳ್ಳಿಗಳಲ್ಲಿ ಗ್ರಾಮಲೆಕ್ಕಿಗರು ಇರುವುದಿಲ್ಲ. ಇದು ಮಾನ್ಯ ಕಂದಾಯ ಸಚಿವರಿಗೂ ಗುರುತು ಇರಬಹುದು. ನನ್ನ ಊರಿನಲ್ಲಿ ಇಲ್ಲ. ಮಾಜಿ ಕಂದಾಯ ಸಚಿವರಾದ ಬಸವಲಿಂಗಪ್ಪನವರ ಊರಿನಲ್ಲಿ ಇಲ್ಲ. ಗ್ರಾಮ ಲೆಕ್ಕಿಗರು ನಮ್ಮ ಕೈಗೆ ಸಿಗುವುದಿಲ್ಲ. ಅವರು ಹಳ್ಳಿಗಳಲ್ಲಿ ವಾಸ ಮಾಡುವುದಿಲ್ಲ. ಅವರು ಇರುವಂತಹ ಹಳ್ಳಿಗಳಲ್ಲಿ ಅವರಿಗಾಗಿ ಮನೆಗಳನ್ನು ವ್ಯವಸ್ಥೆ ಮಾಡಬೇಕು. ಅವರು ಕಟ್ಟುನಿಟ್ಟಾಗಿ ಅದೇ ಊರಿನಲ್ಲಿ ಇರುವಂತೆ ವ್ಯವಸ್ಥೆ ಮಾಡುತ್ತೀರಾ ? ಮುಳುಗಡೆಯಾದ ಪ್ರದೇಶಗಳು ನನ್ನ ಕ್ಷೇತ್ರದಲ್ಲಿ ಬಹಳ ಇವೆ. ಜನರು ಹೊಲಮನೆ ಕಳೆದುಕೊಂಡಿದ್ದಾರೆ ಅವರ ಮನೆಯಲ್ಲಿ ಸುಶಿಕ್ಷಿತರಾದ ನಿರುದ್ಯೋಗಿಗಳಿಗೆ ಸರ್ಕಾರಿ ನೌಕರಿಯನ್ನು ಕೊಡುವ ಸಾಮಾನ್ಯ ಆಜ್ಞೆಯನ್ನು ಸರ್ಕಾರ ಮಾಡುತ್ತದೆಯೇ ? ತಾವು ಈಗ ಏನು ಪುನರ್ ವಸತಿ ಕೇಂದ್ರಗಳನ್ನು ಮಾಡಿದ್ದೀರಿ ಅಲ್ಲಿ ದುರ್ಗತಿ ಏನಿದೆ ಎನ್ನುವುದನ್ನು ಪ್ರತ್ಯಕ್ಷವಾಗಿ ತಾವು ನೋಡಿಲ್ಲ. ನನ್ನ ಕ್ಷೇತ್ರದಲ್ಲಿರತಕ್ಕ ಪುನರ್ ವಸತಿ ಕೇಂದ್ರಗಳಿಗೆ ಈ ಅಧಿವೇಶನ ಮುಗಿದ ನಂತರ ಮಾನ್ಯ ಕಂದಾಯ ಮಂತ್ರಿಗಳು ಬರುತ್ತಾರೆಯೇ ಹೇಗೆ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ತುಂಗಳ್‌ರವರ ಕ್ಷೇತ್ರಕ್ಕೆ ಈ ಅಧಿವೇಶನ ಮುಗಿದ ಮೇಲೆ ಅವಶ್ಯಕತೆ ಇದ್ದರೆ ಭೇಟಿ ಕೊಡುತ್ತೇನೆ. ಪಾಸ್‌ಬುಕ್‌ಗಳ ಬಗ್ಗೆ ಹೇಳಿದ್ದಾರೆ. ಈಗಾಗಲೇ ಪಾಸ್‌ಬುಕ್‌ಗಳನ್ನು ಕೊಡಲಿಕ್ಕೆ ಪ್ರಾರಂಭ ಮಾಡಿದ್ದೇವೆ. ಆ ಬಗ್ಗೆ ಒಂದು ಕೋಟಿ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದೇವೆ. ಪಾಸ್‌ಬುಕ್‌ಗಳನ್ನು ಪ್ರಿಂಟ್ ಮಾಡಲಿಕ್ಕೆ ಹತ್ತಿದ್ದೇವೆ. ಹಿಂದೆ ಪ್ರಿಂಟ್ ಮಾಡಿದ ಪಾಸ್‌ಬುಕ್‌ಗಳನ್ನು ಹಂಚಿದ್ದೇವೆ. ಹಂತ ಹಂತವಾಗಿ ಎಲ್ಲ ಕಡೆಯೂ ಪಾಸ್‌ಬುಕ್‌ಗಳನ್ನು ಹಂಚತಕ್ಕ ಯೋಜನೆ ಇದೆ. ಐದಾರು ವರ್ಷಗಳಲ್ಲಿ ಎಲ್ಲಾ ಕಡೆ

ಕೊಡುವ ವ್ಯವಸ್ಥೆಯಿದೆ. ಗ್ರಾಮ ಲೆಕ್ಕಿಗರು ಊರಿನಲ್ಲಿಯೇ ಇರಬೇಕೆನ್ನುವ ಕಟ್ಟು ನಿಟ್ಟಾದ ಆಜ್ಞೆ ಇದೆ. ಎಲ್ಲಿ ಮನೆಗಳು ಇರುವುದಿಲ್ಲವೋ ಅಂತಹ ಕಡೆ ಇರುವುದಿಲ್ಲ, ಕೆಲವು ಕಡೆ ಮನೆಗಳೇ ಸಿಗುವುದಿಲ್ಲ. ಕೆಲವು ಕಡೆ ಷೆಡ್ಯೂಲ್ಡ್ ಕಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಮನೆಗಳನ್ನು ಕೊಡುವುದಿಲ್ಲ. ಕಟ್ಟುನಿಟ್ಟಾಗಿ ಯಾವ ಊರಿನಲ್ಲಿ ಕೆಲಸ ಮಾಡುತ್ತಾರೆ. ಆ ಊರಿನಲ್ಲಿಯೇ ವಾಸ ಮಾಡಬೇಕೆನ್ನುವ ಆಜ್ಞೆ ಇದೆ. ಮನೆಗಳಿದ್ದು ಎಲ್ಲಿ ವಾಸವಾಗಿರುವುದಿಲ್ಲವೋ ಆ ವಿವರ ಕೊಟ್ಟರೆ ನಾನು ಅಂತಹವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ರಾಮಯ್ಯ.—ಭೂಮಾಪನ ಮತ್ತು ಕಂದಾಯ ಇಲಾಖೆ ಅಧಿಕಾರಿಗಳಿಗೆ ಕೆಲವು ಜವಾಬ್ದಾರಿಗಳನ್ನು ಕೊಟ್ಟಿದ್ದಾರೆ. ಗೋಮಾಳ, ಕೆರೆ ಅಂಗಳ, ಸರ್ಕಾರಿ ಭೂಮಿಯನ್ನು ಕಾಪಾಡಬೇಕೆನ್ನುವ ಜವಾಬ್ದಾರಿಯನ್ನು ಕೊಟ್ಟಿದ್ದಾರೆ. ಅಕ್ರಮ ಸಾಗುವಳಿಯನ್ನು ಸಕ್ರಮ ಮಾಡುತ್ತೇವೆಂದು ಸರ್ಕಾರ ಹೇಳಿದ ಮೇಲೆ ಇದೊಂದು ಸಾಂಕ್ರಾಮಿಕ ರೋಗದಂತೆ ಒತ್ತುವರಿ ಮಾಡುವುದು ನಡೆದಿದೆ, ಗೋಮಾಳ ಕೆರೆ ಅಂಗಳ, ಸರ್ಕಾರಿ ಭೂಮಿಯನ್ನು ಕಾಪಾಡುವುದಕ್ಕೆ ಏನಾದರೂ ಒಂದು ವ್ಯವಸ್ಥೆ ಮಾಡಿ. ಮಂಡಲ ಪಂಚಾಯತಿಯ ಆಯಾ ಗ್ರಾಮಠಾಣಗಳಲ್ಲಿ ಬರತಕ್ಕ ಭೂಮಿಯನ್ನು ಸರ್ವೆ ಮಾಡಿಸಬೇಕಾದರೆ ಅನೇಕ ಸರ್ವೆ ನಂಬರುಗಳು ಬರುತ್ತವೆ. ಇಡೀ ಎಲ್ಲವನ್ನು ಒಂದೇ ಯೂನಿಟ್ ಎಂದು ಮಾಡಿ, ಸರ್ವೆ ಮಾಡಿಸಲಿಕ್ಕೆ ಹಣವನ್ನು ಒಂದೇ ಸಾರಿ ಕಟ್ಟಿಸಿಕೊಳ್ಳುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಾಡ ಕಛೇರಿಗಳನ್ನು ಒಂದು ತಾಲ್ಲೂಕಿನಲ್ಲಿ ಒಂದು ಹೋಬಳಿಗೊಂದರಂತೆ ಮಾಡಿದ್ದಾರೆ. ನಾಡ ಕಛೇರಿಗಳನ್ನು ಎಲ್ಲಾ ತಾಲ್ಲೂಕುಗಳ ಎಲ್ಲ ಹೋಬಳಿಗಳಿಗೂ ವಿಸ್ತರಿಸಬೇಕು. ತಾಲ್ಲೂಕಿನ ತಹಶೀಲ್ದಾರರಿಗೆ ಅನೇಕ ಅಧಿಕಾರವಿರುವುದರಿಂದ ಉಪ ವಿಭಾಗಾಧಿಕಾರಿಗಳು ಏತಕ್ಕೆ ಬೇಕು ? ಉಪ ವಿಭಾಗಾಧಿಕಾರಿಗಳು ಅನಾವಶ್ಯಕವೆಂದು ಅನೇಕ ಸಮಿತಿಗಳು ಸಹ ಶಿಫಾರಸು ಮಾಡಿವೆ, ಅದನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಗೋಮಾಳದ ಬಗ್ಗೆ ಎರಡು ಅಭಿಪ್ರಾಯಗಳಿವೆ. ಯಾರು ಬಡವರು ಅತಿಕ್ರಮಣ ಮಾಡಿದ್ದಾರೆ ಅದನ್ನು ಅವರಿಗೆ ಕೊಡಬೇಕು ಎಂದು. ಕೆಲವರು ಹೇಳುತ್ತಿದ್ದಾರೆ. ಸರ್ಕಾರದ ನಿಲುವು ಗೋಮಾಳಗಳನ್ನು ಉಳಿಸಬೇಕೆಂಬುದೇ ಆಗಿದೆ. ಎಲ್ಲಿ ಗೋಮಾಳದ ಅವಶ್ಯಕತೆ ಇದೆ, ಜಾನುವಾರುಗಳ ಸಂಖ್ಯೆಗೆ ಅನುಸರಿಸಿ ಗೋಮಾಳಗಳನ್ನು ಉಳಿಸಿಕೊಂಡು ಹೆಚ್ಚು ಇದ್ದರೆ ಹಂಚಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ. ಎಲ್ಲಿ ಇಲ್ಲ ಅದರ ಬಗ್ಗೆ ಆಲೋಚನೆ ಮಾಡೋಣ. ಇದರಲ್ಲಿ ಸ್ವಲ್ಪ ಬದಲಾವಣೆ ಆಗಬೇಕು. ಗೋಮಾಳದಲ್ಲೇ ದನಕರುಗಳನ್ನು ಮೇಯಿಸಬೇಕೆಂಬ ನಿರ್ಬಂಧ ಇಲ್ಲ, ಮನೆಯಲ್ಲಿ ಕೊಟ್ಟಿಗೆಯಲ್ಲಿ ದನಕರುಗಳನ್ನು ಸಾಕತಕ್ಕಂಥ ಒಂದು ಶಾಸ್ತ್ರೀಯ ಹೊಸ ವಿಚಾರ ರೈತರಲ್ಲಿ ಬರಬೇಕು. ಬರೀ ಗೋಮಾಳವೇ ಬೇಕು ಅಂತ ಅಲ್ಲ. ಎಲ್ಲಿ ಇಲ್ಲವೋ ಅಲ್ಲಿ ಕೊಡಬೇಕೆಂದು ಏನು ಹೇಳಿದ್ದೀರಿ. ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. ಆಮೇಲೆ ಉಳಿಳ ನಾಡ ಕಛೇರಿಗಳನ್ನು ಪ್ರಾರಂಭ ಮಾಡಿದ್ದೇವೆ. ಇನ್ನು ಒಂದು ತಿಂಗಳ ಒಪ್ಪೊತ್ತಿನಲ್ಲಿ ಅವುಗಳು ಪ್ರಾರಂಭವಾಗುತ್ತವೆ. ಇನ್ನು, ಅಸಿಸ್ಟೆಂಟ್ ಕಮಿಷನರ್ ಹುದ್ದೆ ಅನಾವಶ್ಯಕ ಎನ್ನುವ ಮಾತನ್ನು ಹೇಳಿದ್ದೀರಿ. ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಂ. ವೀರಯ್ಯಸ್ವಾಮಿ.—ಈಗಾಗಲೇ ಶ್ರೀ ಮಲ್ಲಪ್ಪನವರು ಪ್ರಸ್ತಾಪ ಮಾಡಿದ್ದಕ್ಕೆ ತಾವು ಉತ್ತರ ಕೊಡಲಿಲ್ಲ. ವಿಲೇಜ್ ಮ್ಯಾಪ್ಸ್ ಮತ್ತು ಸರ್ವೆ ನಂಬರ್ ಮ್ಯಾಪ್ಸ್ ಕೆಲವು ಹಳ್ಳಿಗಳಲ್ಲಿ ಹಾಳಾಗಿ ಹೋಗಿವೆ. ಲ್ಯಾಂಡ್ ರೆಕಾರ್ಡ್ಸ್ ಆಫೀಸು ನಮ್ಮ ಕಡೆ ಸಬ್‌ಡಿವಿಜನ್ ಮಟ್ಟದಲ್ಲಿದೆ. ಜನರು ಅಲ್ಲಿಗೆ ಹೋಗಬೇಕೆಂದರೆ ದುಡ್ಡು ಖರ್ಚಾಗುತ್ತದೆ ಮತ್ತು ಬೇಗ ಸಿಗಬೇಕು ಎಂದರೆ ದುಡ್ಡು ಕೊಟ್ಟು ತರಬೇಕಾಗುತ್ತದೆ. ಆದ್ದರಿಂದ ತಾಲ್ಲೂಕು ಮಟ್ಟದಲ್ಲೇ ರೆಕಾರ್ಡ್‌ಗಳನ್ನು ಇಟ್ಟು ಅಲ್ಲಿಂದಲೇ ಕೊಡುವ ವ್ಯವಸ್ಥೆ ಮಾಡಬೇಕು. ಇದನ್ನು ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಪ್ರಧಾನ ಅಧ್ಯಕ್ಷರೇ, ನಾನು ಮಾತನಾಡುವಾಗ ಮಹತ್ತರವಾದ ಭೂಸುಧಾರಣೆ ಬಗ್ಗೆ ಹೇಳಿದ್ದೆ. ಈ ಭೂಸುಧಾರಣೆ ನಂತರದ ಸೆನ್ಸಸ್ ಪ್ರಕಾರ, ಈ ಭೂಮಿ 2.4 ಪರ್ಸೆಂಟ್ ಜನಗಳ ಕೈಯಲ್ಲಿ ಶೇಕಡಾ 24ರಷ್ಟು ಭೂಮಿ ಇದೆ. ಅದು ಇವತ್ತಿಗೂ ಅವರ ಕೈಯಲ್ಲೇ

ಇದೆ. ಇದರ ಬಗ್ಗೆ ನಾನು ಸಲಹೆ ಮಾಡಿದ್ದೆ. ಒಂದೊಂದು ಮನೆಗೆ ೧೯೩೧ನೇ ಇಸವಿಯಲ್ಲಿ ಯಾರ್ಯಾರು ದಾಖಲಾತಿ ಪ್ರಕಾರ ಯಾವ ಮನೆತನದವರು ಇದ್ದರು. ಯಾವ ಸಂಸಾರಗಳು ಇದ್ದವು. ಅಂತಹ ಒಂದು ಸಂಸಾರಕ್ಕೆ ೨೦ ಎಕರೆ ಬಿಟ್ಟು ಉಳಿದದ್ದನ್ನು ಯಾರ್ಯಾರು ಉಳುತ್ತಾರೆ, ಅದರಿಂದ ಜೀವನ ಮಾಡುತ್ತಾರೆ. ಅದರ ಮೇಲೆಯೇ ಭಾರ ಹಾಕಿಕೊಂಡು ಇದ್ದಾರೆ. ಅಂತಹವರಿಗೇ ಕೊಡತಕ್ಕಂಥ ಒಂದು ಕಾರ್ಯವನ್ನು ಮಾಡಬೇಕೆಂದು ನಾನು ಹೇಳಿದ್ದೆ. ಇದಕ್ಕೆ ಉತ್ತರ ಕೊಟ್ಟಿದ್ದಾರೋ ಇಲ್ಲವೋ ಗೊತ್ತಾಗಲಿಲ್ಲ. ಎರಡನೆಯದಾಗಿ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಪ್ರಕಾರ ಈ ಟೆನೆಂಟ್ಸ್ ಜಮೀನನ್ನು ಮಾರುತ್ತಾರೆ. ೧೫ ವರ್ಷ ಅವರು ಪರಭಾರೆ ಮಾಡುವ ಹಾಗಿಲ್ಲ. ಆದರೂ ಪರಭಾರೆ ಮಾಡಿದ ನೂರಾರು, ಸಾವಿರಾರು ನಿದರ್ಶನಗಳು ನಮ್ಮ ಕರ್ನಾಟಕ ರಾಜ್ಯದಲ್ಲಿವೆ. ಇದನ್ನು ವಜಾ ಮಾಡಲಿಕ್ಕೆ ಸರ್ಕಾರ ಏನು ಪ್ರಯತ್ನ ಮಾಡಿದೆಯೋ ನನಗೆ ಗೊತ್ತಿಲ್ಲ. ಕಾನೂನಿಗೆ ವಿರುದ್ಧವಾಗಿ ಮಾಡುವಂಥ ಇಂತಹ ವ್ಯವಹಾರಗಳನ್ನು ವಜಾ ಮಾಡಲಿಕ್ಕೆ ತಾವು ಏನು ಪ್ರಯತ್ನ ಮಾಡುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಇವೆಲ್ಲ ಪ್ರಶ್ನೆಗಳಿಗೆ ನಾನು ಉತ್ತರ ಕೊಟ್ಟಿದ್ದೇನೆ. ಪಾಪ, ತಾವು ಇರಲಿಲ್ಲ. ನಾನೇನು ಮಾಡಲಿ ? ಈಗ ಪಿ.ಟಿ. ಸೇಲ್ ಆಕ್ಟ್ ಕೆಳಗೆ ಏನಾಗಿದೆ ಎಂದು ಹೇಳಿದ್ದೇನೆ. ಅಂಕಿಅಂಶಗಳನ್ನು ಕೊಟ್ಟಿದ್ದೇನೆ. ಸೆಕ್ಷನ್ ೭೯ರ ಉಲ್ಲಂಘನೆ ಬಗ್ಗೆ ಕ್ರಮ ಕೈಗೊಂಡಿರುವ ವಿವರಗಳನ್ನು ಕೊಟ್ಟಿದ್ದೇನೆ. ಕ್ರಮ ಕೈಗೊಂಡಿದ್ದೇವೆ. ಈಗಾಗಲೇ ಮೂರು ಸಾವಿರ ಕೇಸುಗಳು ಡಿಟೆಕ್ಟ್ ಆಗಿವೆ. ಅವುಗಳು ಬೇರೆ ಬೇರೆ ಹಂತದಲ್ಲಿವೆ. ಈ ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ ನಾವು ಹೇಳುತ್ತಲೇ ಬಂದಿದ್ದೇವೆ. ಎಂಟು ಲಕ್ಷ ಎಕರೆ ಭೂಮಿ ಇತ್ತು ಎಂದು. ಈಗ ಜನಸಂಖ್ಯೆ ಜಾಸ್ತಿಯಾಗಿದೆ. ಕುಟುಂಬಗಳು ಹೆಚ್ಚಾಗಿವೆ, ಪಾರ್ಟಿಶನ್ ಆಗಿದೆ. ಎಷ್ಟು ಎಂದು ಗೊತ್ತಿಲ್ಲ. ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಕೆಳಗೆ ಸಂಪೂರ್ಣವಾದ ವರದಿಯನ್ನು ಕೊಟ್ಟಿದ್ದೇನೆ. ಸರ್ಪ್ಲಸ್ ಲ್ಯಾಂಡ್ ೨ ಲಕ್ಷ ೯೨ ಸಾವಿರ ಎಕರೆ ಡಿಟೆಕ್ಟ್ ಆಗಿದೆ. ಅದರಲ್ಲಿ ೧ ಲಕ್ಷ ೫೪ ಸಾವಿರ ಎಕರೆಗಳಷ್ಟು ಪೊಸಿಶನ್ ಕೊಟ್ಟಿದ್ದೇವೆ. ೧ ಲಕ್ಷ ೭೯ ಸಾವಿರದಷ್ಟು ಕೇಸುಗಳಲ್ಲಿ ಕೋರ್ಟಿನಲ್ಲಿ ಸ್ಟೇ ಆಗಿವೆ. ಈ ಎಲ್ಲಾ ವಿವರಗಳನ್ನೂ ನನ್ನ ಭಾಷಣದಲ್ಲಿ ಕೊಟ್ಟಿದ್ದೇನೆ. ಇದನ್ನು ತಿದ್ದುಪಡಿ ಮಾಡಬೇಕೆಂದು ಹೇಳಿದ್ದೀರಿ. ಅದನ್ನೂ ಕೂಡ ನಾನು ಹೇಳಿದ್ದೇನೆ. ಮುಂದಿನ ಅಧಿವೇಶನದಲ್ಲಿ ಲ್ಯಾಂಡ್ ರಿಫಾರ್ಮ್ಸ್‌ಗೆ ಏನೇನು ಅವಶ್ಯಕತೆ ಇದೆ, ಅಂತಹ ತಿದ್ದುಪಡಿಗಳನ್ನು ಒಳಗೊಂಡ ಮಸೂದೆಯನ್ನು ತರುತ್ತೇವೆ.

† ಶ್ರೀ ಎಸ್. ಎಸ್. ಕಡಪಟ್ಟಿ.—ಸನ್ಮಾನ್ಯ ಅಧ್ಯಕ್ಷರೇ, ಹಳೆಯ ಮುಂಬೈ ಕರ್ನಾಟಕದಲ್ಲಿ ೧೯೫೨ರ ಬಾಂಬೆ ಪರ್ಸನಲ್ ಇನಾಮ್ ಅಬಾಲಿಷನ್ ಆಕ್ಟ್ ಕೆಳಗೆ. ಅಲ್ಲಿ ಇನಾಮ್ ಅಬಾಲಿಷನ್ ಆಗಿದ್ದರೂ ಕೂಡ, ೧೦ ಮೇಲೆ, ೧೦ ಕೆಳಗೆ ಎನ್ನುವಂಥ ಭಾವನೆ ಉಳಿದಿದೆ. ಇದನ್ನು ಅಮಲಿನಲ್ಲಿ ತರುವುದಕ್ಕೆ ವ್ಯವಸ್ಥೆ ಮಾಡಬೇಕು. ಅಲ್ಲಿನ ರೈತರಿಗೆ ಒಂದು ರೀತಿಯ ತಪ್ಪು ಭಾವನೆ ಬಂದಿದೆ, ನಾವು ೧೦ ಕೆಳಗೆ ಇದ್ದೇವೆ ಎನ್ನುವ ಭಾವನೆ ಬಂದಿದೆ. ಅವರು ಲ್ಯಾಂಡ್ ಟ್ರಿಬ್ಯುನಲ್‌ಗೆ ಅರ್ಜಿ ಕೊಟ್ಟು. ಅಲ್ಲಿಯೂ ಕೂಡ ಗೇಣಿದಾರರ ಪರವಾಗಿ ನಿರ್ಣಯ ಆಗಿದೆ. ಈ ವಿಚಾರದಲ್ಲಿ ಕಾನೂನಿನ ತೊಡಕು ಇದೆ. ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ನಜರಿಗೆ, ಈ ವಿಚಾರವನ್ನು ತಂದಿದ್ದೇನೆ. ಅನೇಕ ಗ್ರಾಮಗಳಲ್ಲಿ ಈ ರೀತಿ ಇದೆ. ಮಾನ್ಯ ಮಂತ್ರಿಗಳು ಇದನ್ನು ಸಮಗ್ರವಾಗಿ ಪರಿಶೀಲಿಸಿ, ಇದಕ್ಕೆ ಪರಿಹಾರ ಒದಗಿಸಬೇಕೆಂದು ತಮ್ಮ ಮೂಲಕ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ. ಈಗಾಗಲೇ ರಿಪೋರ್ಟ್ ತರಿಸಿದ್ದೇನೆ. ಆದಷ್ಟು ಬೇಗ ಕಾನೂನಿಗೆ ತಿದ್ದುಪಡಿ ಮಾಡುತ್ತೇನೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಭದ್ರಾ ಅಣೆಕಟ್ಟು ಆದಮೇಲೆ ಸುಮಾರು ಅರ್ಧಭಾಗ ಜಮೀನು ಮುಳುಗಡೆಯಾಗಿದೆ. ಮುಳುಗಡೆಯಾಗಿರತಕ್ಕ ಜನಗಳಿಗೆ ಪುನರ್‌ವಸತಿ ನಿರ್ಮಾಣ ಮಾಡುವ ಸಂದರ್ಭದಲ್ಲಿ ಕೆಲವು ಕಡೆ ಜಮೀನನ್ನು ಕೊಟ್ಟಿದ್ದಾರೆ. ಆದರೆ, ಅಲ್ಲಿನ ಜನರಿಗೆ ನಾಗರೀಕ ಸವಲತ್ತುಗಳನ್ನು ಒದಗಿಸದೇ ತುಂಬಾ ತೊಂದರೆಯಾಗಿದೆ. ಅವರಿಗೆ ಕನಿಷ್ಠ ನಾಗರೀಕ ಸವಲತ್ತುಗಳನ್ನು ಒದಗಿಸಿಲ್ಲ ಇದರ ಬಗ್ಗೆ ವ್ಯವಸ್ಥೆ ಮಾಡಬೇಕು ಮತ್ತೆ ಸಿ ಅಂಡ್ ಡಿ ಲ್ಯಾಂಡ್ ಎಂದು ಕರ್ನಾಟಕರಾಜ್ಯದಲ್ಲಿ ಏನು ವಿಂಗಡಣೆ ಮಾಡಿದ್ದಾರೆ, ಈ ಬಗ್ಗೆ ರೆವಿನ್ಯೂ ಇಲಾಖೆಯವರು ಫಾರೆಸ್ಟ್ ಇಲಾಖೆಯವರು ಕುಳಿತುಕೊಂಡು "ಹ್ಯಾಂಡೆಡ್ ಓವರ್, ಟೇಕನ್ ಓವರ್" ಎಂದು ಮಾಡಿದ್ದಾರೆ ಆ ಜಮೀನು ಯಾರಿಗೆ ಸೇರಿದೆ

ಎಷ್ಟು ಎಕರೆ ಇದೆ ಎಂದು ಅಳತೆ ಮಾಡಿಲ್ಲ. ೮–೧೦ ವರ್ಷಗಳ ಹಿಂದೆ ಮಾಡಿರುವಂಥ ಜಮೀನುಗಳು, ಇವತ್ತು ಉತ್ತಮವಾದ ಬೆಳೆ ಬಾಳುತ್ತವೆ. ಫಾರೆಸ್ಟ್ ಇಲಾಖೆಯವರು ಜಮೀನು ಅಳತೆ ಮಾಡುವಾಗ, ಈ ಜಮೀನುಗಳನ್ನು ಬಿಟ್ಟುಬಿಡಿ ಎಂದು ಹೇಳುತ್ತಿದ್ದಾರೆ. ಒಂದು ವೇಳೆ, ಆ ರೀತಿ, ಆ ಜಮೀನುಗಳನ್ನು ಅರಣ್ಯ ಇಲಾಖೆಯವರು ವಹಿಸಿಕೊಂಡಿದರೆ, ಅಲ್ಲಿನ ಜನಗಳು ನಿರ್ಗತಿಕರಾಗುವ ಪರಿಸ್ಥಿತಿ ಬರುತ್ತದೆ. ಆದ್ದರಿಂದ, ರೆವಿನ್ಯೂ ಇಲಾಖೆಯವರು, ಈಗ ಯಾರು ಇಂತಹ ಜಮೀನು ಮಾಡಿದ್ದಾರೆ. ಅವರಿಗೇ ಆ ಜಮೀನುಗಳನ್ನು ಕೊಡಬೇಕು. ಫಾರೆಸ್ಟ್ ಇಲಾಖೆಯವರು ವಹಿಸಿಕೊಂಡರೆ, ಈ ಜನಗಳಿಗೆ ತುಂಬಾ ತೊಂದರೆಯಾಗುತ್ತದೆ. ಆದ್ದರಿಂದ ರೆವಿನ್ಯೂ ಮಂತ್ರಿಗಳು ಇದನ್ನು ಪರಿಶೀಲನೆ ಮಾಡಿ, ವ್ಯವಸ್ಥಿತವಾದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಬಗ್ಗೆ ಅನೇಕ ಸಲ ಉತ್ತರ ಕೊಟ್ಟಿದ್ದೇನೆ. ಸಿ ಅಂಡ್ ಡಿ ಭೂಮಿ ರೆವಿನ್ಯೂ ಇಲಾಖೆಯಿಂದ ಫಾರೆಸ್ಟ್ ಇಲಾಖೆಗೆ ವರ್ಗಾವಣೆ ಆಗಿದೆ. ಈಗ ಏನು ಸಾಗುವಳಿ ಮಾಡಿದ್ದಾರೆ, ಅದನ್ನು ಅವರಿಗೇ ಉಳಿಸುವುದಕ್ಕೆ ಸರ್ಕಾರ ಆಲೋಚನೆ ಮಾಡುತ್ತಿದೆ. ರೆವಿನ್ಯೂ ಇಲಾಖೆಯವರು ತೆಗೆದುಕೊಂಡು ಹಂಚುವ ಬಗ್ಗೆ ಆಲೋಚನೆ ಮಾಡುತ್ತಿದೆ. ಇನ್ನು ಪುನರ್ ವಸತಿ ಪ್ರದೇಶದ ಜನರ ನಾಗರೀಕ ಸವಲತ್ತುಗಳ ಬಗ್ಗೆ ಹೇಳಿದ್ದಾರೆ. ಈ ಬಗ್ಗೆ ರಿಪೋರ್ಟ್ ತರಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ನೀವು ಏನಾದರೂ ಹೇಳಿ, ಏನಾದರೂ ಬಿಡಿ. ಆದರೆ ನಿಮ್ಮಲ್ಲಿ ಸದುದ್ದೇಶ ಇದ್ದರೆ ಹೇಳಿದ್ದನ್ನು ನಿಷ್ಠೆಯಿಂದ ಮಾಡಿ. ಕಾರ್ಯಗತ ಮಾಡಿ, ಅಷ್ಟೇ ನಾನು ಹೇಳುತ್ತೇನೆ ಈಗ ನೀವು ಮಾಡದೇಹೋದರೆ, ಆ ಮೇಲೆ ನಾವು ಮಾಡುತ್ತೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಬಂದಾಗ ನೀವು ಮಾಡಿ. ಈಗ ನಾವು ಇದ್ದೇವೆ, ನಾವು ಮಾಡುತ್ತೇವೆ.

SRI MOHAMMAD LIAQUDDIN BURANUDDIN.—Mr. Speaker, in Bidar lands have been acquired for industrial purposes in Navabad and other industrial areas and after the issue of notification under the Land Acquisition Act the compensation was paid as per the mutual negotiations. Meanwhile there has been an amendment to the Land Acquisition Act. In such cases I request the hon Revenue Minister to give the benefits of the Amended Act to those whose lands have been acquired, by payment of additional compensation amount as well as interest for industrial puproses. Secondly, in our area after the introduction of Certain Inams Abolitions Act, the annuities are not granted to those inamdars so far. The lands are attached to the services of the religious institutions. If the annuities are not paid the services of the institutions will be coming to an end So the annuities should be granted to the Inamdars. Regarding both these questions, clarification may be given.

ಶ್ರೀ ಎಸ್. ಆರ್. ಬೊಮ್ಮಾಯಿ.—ಕ್ಲಾರಿಫಿಕೇಷನ್‌ನಲ್ಲಿ ಹೊಸ ಹೊಸ ವಿಚಾರಗಳನ್ನು ಎತ್ತುತ್ತಿದ್ದಾರೆ. ಡಿಬೇಟ್‌ನಲ್ಲಿ ಬಂದಂಥ ವಿಚಾರಗಳ ಬಗ್ಗೆ ಕೇಳಿದರೆ ವಿವರಣೆ ಕೊಡಬಹುದು. ಲ್ಯಾಂಡ್ ಅಕ್ವಿಸಿಷನ್ ಅವಾರ್ಡ್ ಆಗಿದ್ದರೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ಅವಾರ್ಡ್ ಆಗಿದ್ದರೆ, ಅವಾರ್ಡ್ ಪ್ರಕಾರ ಹಣ ಕೊಡಬೇಕು. ಹೊಸ ಕಾನೂನಿನ ಲಾಭ ಅವರಿಗೆ ದೊರೆಯುವುದಿಲ್ಲ. ಆದರೂ ತಾವು ಹೇಳಿದಿರಿ ಅದನ್ನು ಪರಿಶೀಲನೆ ಮಾಡುತ್ತೇನೆ. ಆನ್ಯುಯಿಟಿ ಬಗ್ಗೆ ಹೇಳಿದ್ದಾರೆ, ಅದನ್ನೂ ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ಎ. ಉಪ್ಪಿನ್ (ಕುಂದಗೋಳ್).—ಅಧ್ಯಕ್ಷರೇ, ನಾಡಕಚೇರಿಗಳಿಗೆ ಟೆಲಿಫೋನ್ ಸೌಕರ್ಯ ಇಲ್ಲದೆ ತೊಂದರೆಯಾಗಿದೆ, ಅದಕ್ಕೆ ಟೆಲಿಫೋನ್ ಸೌಲಭ್ಯ ಕಲ್ಪಿಸಿಕೊಡಬೇಕು. ಹಾಗೆಯೇ ನಾಡಕಚೇರಿಗಳಿಗೆ ಸ್ವಂತ ಕಟ್ಟಡವನ್ನು ಕಟ್ಟಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ಎನ್ನುವುದನ್ನು ಹೇಳಬೇಕು. ರಸ್ತೆಗಳ ಸಲುವಾಗಿ ಜಮೀನು ಸ್ವಾಧೀನ ಪಡಿಸಿಕೊಂಡಾಗ, ದೊಡ್ಡ ಕ್ಷೇತ್ರ ೮-೧೦ ಎಕರೆ ಜಮೀನು ಹೋಗಿದೆ. ಆದರೆ ಭೂ ಕಂದಾಯವನ್ನು ಕಡಿಮೆ ಮಾಡಿಲ್ಲ, ಅದನ್ನು ಕಡಿಮೆ ಮಾಡುವುದಕ್ಕೆ ಆದೇಶ ಕೊಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಲ್ಯಾಂಡ್ ಅಕ್ವಿಸಿಷನ್ ಮಾಡಿದ ಮೇಲೆ ಭೂಕಂದಾಯ ಕಡಿಮೆ ಮಾಡಬೇಕೆಂದು ಹೇಳಿದ್ದಾರೆ, ಅದನ್ನು ಮಾಡುವುದಕ್ಕೆ ಆದೇಶ ಕೊಡುತ್ತೇನೆ. ನಾಡಕಚೇರಿಗಳಿಗೆ ದೂರವಾಣಿ ಸೌಲಭ್ಯ ಕೊಡುವುದಕ್ಕೆ ಈಗಿನ ಹಣಕಾಸಿನ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ. ತಹಸೀಲ್ದಾರ್ ಆಫೀಸ್‌ಗಳಿಗೆ ದೂರವಾಣಿ ಸೌಲಭ್ಯ ಇದೆ. ಇನ್ನು ಕಟ್ಟಡದ ಬಗ್ಗೆ ಪ್ರಯತ್ನ ಮಾಡುತ್ತೇನೆ.

ಉಪಾಧ್ಯಕ್ಷರು.—ನಾನು ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

> "೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಗಳ ಸಂಖ್ಯೆ ೫೦. ೫೧, ೫೨ ಮತ್ತು ೫೩ ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತ, ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗುಗಳನ್ನು ಮಂಜೂರು ಮಾಡುವುದು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.

ಅಭಿಯಾಚನೆ ಕ್ರಮಾಂಕ ೫೦—ಭೂಕಂದಾಯ ಇತ್ಯಾದಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭೂ ಕಂದಾಯ ಇತ್ಯಾದಿ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೯,೨೧,೫೯,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೮,೦೨,೦೦,೦೦೦ ರೂ ಗಳಿಗಿಂದ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ ೫೧—ಮುದ್ರಾಂಕ (ಸ್ಟ್ಯಾಂಪು)ಗಳು ಮತ್ತು ನೋಂದಣಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮುದ್ರಾಂಕ (ಸ್ಟ್ಯಾಂಪು)ಗಳು ಮತ್ತು ನೋಂದಣಿ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫,೭೩ ೦೭,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ ೫೨—ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೬,೦೨,೦೦,೦೦೦ ರೂ ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೦೦,೦೦೦ ರೂ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ ೫೩—ಪುನರ್ವಸತಿ ಯೋಜನೆಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪುನರ್ವಸತಿ ಯೋಜನೆಗಳ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೮,೪೩,೦೦೦ ರೂ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಹುಣಸೂರಿನಲ್ಲಿರುವ ಉಪ-ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ.

೨೦೨೦. ಶ್ರೀಮತಿ ಸುಮಾವಸಂತ (ವಿರಾಜಪೇಟೆ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ನಾಗರಹೊಳೆ ಮತ್ತು ಸುತ್ತಮುತ್ತಲ ಅರಣ್ಯ ಪ್ರದೇಶಗಳು ಕೊಡಗು ಜಿಲ್ಲೆಗೆ ಸೇರಿದ್ದರೂ, ಈ ವಿಭಾಗಗಳ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿಯು ಹುಣಸೂರಿನಲ್ಲಿ ಇರುವುದು ಸರಿಯೇ ?

ಆ) ವಿರಾಜಪೇಟೆಯಲ್ಲಿ ಸದರಿ ಕಛೇರಿಯಲ್ಲಿ ಜನರ ಅನುಕೂಲತೆಯ ದೃಷ್ಟಿಯಿಂದ ವಿರಾಜಪೇಟೆಗೆ ವರ್ಗಾಯಿಸಬಾರದೇಕೆ ?

ಇ) ವರ್ಗಾಯಿಸಲು ಸರ್ಕಾರಕ್ಕಿರುವ ಅಡಚಣೆಗಳೇನು ?

ಶ್ರೀ ಜಿ. ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ಈ ಹಿಂದೆ ಕೊಡಗು ಜಿಲ್ಲೆಯ ದಕ್ಷಿಣ ಕೊಡಗು ವಿಭಾಗದ ಮುಖ್ಯ ಕಚೇರಿಯು ಮಡಿಕೇರಿಯಲ್ಲಿತ್ತು, ೧೯೬೦ರಲ್ಲಿ ಮೈಸೂರು ಜಿಲ್ಲೆಯ ಪಿರಿಯಾ ಪಟ್ಟಣ, ಹುಣಸೂರು ಮತ್ತು ಕೆ. ಆರ್. ನಗರ ತಾಲ್ಲೂಕುಗಳ ಅರಣ್ಯ ಪ್ರದೇಶಗಳು ಈ ವಿಭಾಗಕ್ಕೆ ಸೇರ್ಪಡೆಯಾದಾಗ ವಿಸ್ತೃತ ದಕ್ಷಿಣ ಕೊಡಗು ವಿಭಾಗದ ಮುಖ್ಯ ಕಚೇರಿಯು ವಿಭಾಗದ ಹೆಸರನ್ನು ಹುಣಸೂರು ವಿಭಾಗ ಎಂದು ಬದಲಾಯಿಸಿ ಕೇಂದ್ರ ಸ್ಥಾನವಾದ ಹುಣಸೂರಿಗೆ ಸ್ಥಳಾಂತರಿಸಲಾಯಿತು. ಇದಕ್ಕೂ ಮುಖ್ಯವಾಗಿ ಇಲಾಖೆಯ ದೊಡ್ಡ ಪ್ರಮಾಣದ ಮರ ಸಂಗ್ರಹಣಾಲಯ ಹುಣಸೂರಿನಲ್ಲಿ ಇದ್ದು, ಅದರ ಉಸ್ತುವಾರಿಗೆ ವಿಭಾಗೀಯ ಅರಣ್ಯ ಕಛೇರಿಯು ಹುಣಸೂರಿನಲ್ಲಿಯೇ ಇರಬೇಕೆಂಬುದು ಒಂದು ಕಾರಣವಾಗಿದೆ,

ಇದಲ್ಲದೆ, ನಾಗರಹೊಳೆ ಮತ್ತು ಕಲ್ಲಹಳ್ಳಿ ವಲಯಗಳ ಅರಣ್ಯ ರಕ್ಷಣೆಗೆ ವಿರಾಜಪೇಟೆಗಿಂತ, ಹುಣಸೂರೇ ಸರಿಯಾದ ಕೇಂದ್ರ ಸ್ಥಾನವಿರುವುದು ಸೂಕ್ತ. ಕೊಡಗಿನ ಉಳಿದ ತಿತಿಮತಿ ವಲಯ